ಸಂಪುಟ: 06 ಸಂಚಿಕೆ: 68 ಪುಟಗಳು: 08 ಶುಕ್ರವಾರ 22 ಮೇ 2026
www.udayavahini.in epaper.udayavahini.in Udaya vahini news Udaya vahini news Udayavahini news youGÓ...qbe udayavahininews@gmail.
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5
ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಪ್ರತಿದಿನವೂ ನಮ್ಮಿಂದ ಸಾಧ್ಯವಿದೆ ಎಂದು ನಾವು ತಿಳಿದುಕೊಂಡಿದ್ದಕ್ಕಿಂತ ಸ್ವಲ್ಪ ಹೆಚ್ಚು ಕೆಲಸ ಮಾಡಿದರೆ ಯಶಸ್ಸು ನಮಗಾಗಿ ಕಾಯುತ್ತ ಮುಂದೆ ನಿಂತಿರುತ್ತದೆ!

## ಕುಮಾರಸ್ವಾಮಿ ಅನಾವಶ್ಯಕ ಮಾತನಾಡಬಾರದು: ಕೃಷಿ ಸಚಿವ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅನಾವಶ್ಯಕವಾಗಿ ಮಾತನಾಡಬಾರದು. ಅದಕ್ಕೆ ಬಾಯಿ ಚಪಲ ಅಂತಾರೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ವಿಧಾನಸೌಧದಲ್ಲಿ ಮಾತನಾಡಿದ ಅವರು, ಕೇಂದ್ರ ಸಚಿವ ಕುಮಾರಸ್ವಾಮಿ ರಾಜಕೀಯ ಬಾಂಬ್ ಇಡುವುದು ಸಹಜ.

ಯಾಕೆ ಈ ತರಹದ ಹೇಳಿಕೆ ನೀಡಿದ್ದಾರೋ ಗೊತ್ತಿಲ್ಲ. ರೈತರ ಆತ್ಮಹತ್ಯೆ ವಿಚಾರದಲ್ಲಿ ರಾಜಕೀಯ ದುರುದ್ದೇಶ ಬೇಡ. ಸತ್ಯಾಂಶ ತಿಳಿಯದೇ ಜನರಲ್ಲಿ ಗೊಂದಲ ಸೃಷ್ಟಿಸುವುದು ಖಂಡನೀಯ. ಕುಮಾರಸ್ವಾಮಿ ಕೂಡ ಸಿಎಂ ಆಗಿದ್ದವರು. ಎಲ್ಲಾ ಆತ್ಮಹತ್ಯೆಯನ್ನು ರೈತರ ಆತ್ಮಹತ್ಯೆ ಅಂತಿದ್ದಾರೆ. ಇದು ತಪ್ಪು ಎಂದು ವಾಗ್ದಾಳಿ ನಡೆಸಿದರು. ರೈತರ ಆತ್ಮಹತ್ಯೆ ಪ್ರಮಾಣ ಕಡಿಮೆಯಾಗಿದೆ. ಇದಕ್ಕೆ ಸರ್ಕಾರ ತೆಗೆದುಕೊಂಡ ನಿರ್ಧಾರಗಳು ಕಾರಣ. ಅನಾವಶ್ಯಕವಾಗಿ ಕುಮಾರಸ್ವಾಮಿ ಮಾತನಾಡಬಾರದು. ಅದಕ್ಕೆ ಬಾಯಿ ಚಪಲ ಅಂತಾರೆ. ರಾಜ್ಯದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳ ಕುರಿತು ಕೆಲವು ಪತ್ರಿಕೆಗಳಲ್ಲಿ ಕುಮಾರಸ್ವಾಮಿ ನೀಡಿರುವ ಹೇಳಿಕೆಗಳು ವಾಸ್ತವಾಂಶಗಳಿಗೆ ದೂರವಾಗಿದ್ದು, ಜನರಲ್ಲಿ ಅನಗತ್ಯ ಗೊಂದಲ ಮತ್ತು ಆತಂಕ ಸೃಷ್ಟಿಸುವ ಪ್ರಯತ್ನವಾಗಿದೆ .

## ತುಮಕೂರಿನ ಇತಿಹಾಸವನ್ನು ನನ್ನಂಥವನು ಬದಲಾವಣೆ ಮಾಡಲು ಆಗುತ್ತಾ?: ಪರಮೇಶ್ವರ್

• ಉದಯವಾಹಿನಿ, ಬೆಂಗಳೂರು

ತುಮಕೂರಿನ ಇತಿಹಾಸವನ್ನು ನನ್ನಂಥವನು ಬದಲಾವಣೆ ಮಾಡಲು ಆಗುತ್ತಾ?. ಅಭಿವೃದ್ಧಿ ದೃಷ್ಟಿಯಿಂದ ಬೆಂಗಳೂರು ಉತ್ತರ ಮಾಡಿ ಅಂತ ಕೇಳಿರುವುದು ಅಷ್ಟೇ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ. ಸದಾಶಿವನಗರದ ಸರ್ಕಾರಿ ನಿವಾಸದಲ್ಲಿಂದು ತುಮಕೂರನ್ನು ಬೆಂಗಳೂರು ಉತ್ತರ ಮಾಡುವ ವಿಚಾರವಾಗಿ ಅವರು ಪ್ರತಿಕ್ರಿಯಿಸಿದರು.

ಬೆಂಗಳೂರಿಗೆ ತುಮಕೂರನ್ನು ಸೇರಿಸುವುದು ಅಲ್ಲ. ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ತುಮಕೂರು ಜಿಲ್ಲೆಯ ಹೆಸರನ್ನು ಬದಲಾವಣೆ ಮಾಡಲಾಗುತ್ತಾ?. ತುಮಕೂರಿಗೆ ಅದರ ಇತಿಹಾಸ ಹಾಗೂ ಅಸ್ಮಿತೆ ಇದೆ. ಅದನ್ನು ನಾವು ಬದಲಾವಣೆ ಮಾಡಲು ಹೋಗುತ್ತೀವಾ?. ಬಂಡವಾಳ ಹೂಡಿಕೆ ಸೇರಿದಂತೆ ಇತರೆ ಒಳಿತು ತುಮಕೂರಿಗೆ ಆಗುತ್ತದೆ ಎಂಬುದಷ್ಟೇ ನಮ್ಮ ಉದ್ದೇಶ.

ಬಿಜೆಪಿಯವರಿಗೆ ನಮ್ಮದೇನೂ ಅರ್ಥವೇ ಆಗೋದಿಲ್ಲ. ತುಮಕೂರಿನ ಬಗ್ಗೆ ಎಲ್ಲರಿಗೂ ಎಷ್ಟು ಸೆಂಟಿಮೆಂಟ್ಸ್ ಇದೆಯೋ ನನಗೂ ಅಷ್ಟೇ ಇದೆ. ಯಾಕೆಂದರೆ ನಾನು ಹುಟ್ಟಿ ಬೆಳೆದದ್ದು ಅಲ್ಲೇ. ನಾನು ನಿಮಗೂ ಕೂಡ ಈ ವಿಚಾರವಾಗಿ ಸ್ಪಷ್ಟೀಕರಣ ನೀಡಿದ್ದೇನೆ. ತುಮಕೂರಿನ ಹೆಸರು ಬದಲಾಗುವುದಿಲ್ಲ, ಆಡಳಿತ ಬದಲಾಗುವುದಿಲ್ಲ, ವಿಸ್ತೀರ್ಣ ಬದಲಾಗುವುದಿಲ್ಲ. ಬೆಂಗಳೂರಿಗೆ ಹತ್ತಿರ ಇರೋದ್ರಿಂದ ಬೆಂಗಳೂರು ಉತ್ತರಕ್ಕೆ ಸೇರಿಸಿ ಅಂತ ಕೇಳಿರೋದು ಅಷ್ಟೇ ಎಂದರು.

## ಬೆಂಗಳೂರಿನಲ್ಲಿ ಭಾರೀ ಮಳೆ ಹಳಿಯಲ್ಲೇ ನಿಂತ ಮೆಟ್ರೋ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಭಾರೀ ಮಳೆ ಹಳಿಯಲ್ಲೇ ನಿಂತ ಮೆಟ್ರೋ ರಾಜಧಾನಿ ಬೆಂಗಳೂರಿನಲ್ಲಿ ಭಾರಿ ಗಾಳಿ ಮತ್ತು ಗುಡುಗು ಸಹಿತ ಮಳೆಯು ನಮ್ಮ ಮೆಟ್ರೋ ಪ್ರಯಾಣಿಕರ ದೈನಂದಿನ ಸಂಚಾರವನ್ನು ಸಂಪೂರ್ಣವಾಗಿ ಅಸ್ತವ್ಯಸ್ತಗೊಳಿಸಿದೆ.

ನಗರದಾದ್ಯಂತ ಸುರಿಯುತ್ತಿರುವ ಜಡಿಮಳೆಯಿಂದಾಗಿ ಬೆಂಗಳೂರು ಮೆಟ್ರೋ ರೈಲು ನಿಗಮ ವ್ಯಾಪ್ತಿಯ ಹಸಿರು ಮತ್ತು ನೇರಳೆ ಸೇರಿದಂತೆ ಎಲ್ಲಾ ಪ್ರಮುಖ ಮೆಟ್ರೋ ಮಾರ್ಗಗಳ ರೈಲು ಸೇವೆಗಳಲ್ಲಿ ಭಾರಿ ವಿಳಂಬ ಉಂಟಾಗಿದೆ. ಘಟನೆಗೆ ಸಂಬಂಧಿಸಿದಂತೆ ತುರ್ತು ಪ್ರಕಟಣೆ ಹೊರಡಿಸಿರುವ ಬಿಎಂಆರ್‌ಸಿಎಲ್ ಭಾರೀ ಗಾಳಿ ಹಾಗೂ ಮಳೆಯಿಂದಾಗಿ ಎಲ್ಲಾ ಮೆಟ್ರೋ ಮಾರ್ಗಗಳ ಸೇವೆಯಲ್ಲಿ ವಿಳಂಬ ಉಂಟಾಗಿದೆ.

## ಧರ್ಮಸ್ಥಳ ಬುರುಡೆ ಪ್ರಕರಣದ ತನಿಖೆ ಮತ್ತೆ ಚುರುಕು

• ಉದಯವಾಹಿನಿ, ಬೆಂಗಳೂರು


ಧರ್ಮಸ್ಥಳ ಗ್ರಾಮದ ಬುರುಡೆ ರಹಸ್ಯ ಪ್ರಕರಣದ ತನಿಖೆ ಮತ್ತೆ ಚುರುಕು ಪಡೆದುಕೊಂಡಿದೆ. 4 ತಿಂಗಳ ಹಿಂದೆ 7 ಅಸ್ಥಿಪಂಜರ ಪತ್ತೆಯಾಗಿದ್ದ ಬಂಗ್ಲೆಗುಡ್ಡೆ ಕಾಡಿಗೆ ವಿಧಿವಿಜ್ಞಾನ ಪ್ರಯೋಗಾಲಯ ತಂಡ ಭೇಟಿ ನೀಡಿದೆ. ಮೂವರು ಅಧಿಕಾರಿಗಳನ್ನೊಳಗೊಂಡ ಎಫ್‌ಎಸ್‌ಎಲ್ ಅಧಿಕಾರಿಗಳ ತಂಡ ಇಂದು ಬೆಂಗಳೂರಿನಿಂದ ಎಸ್‌ಐಟಿ ಅಧಿಕಾರಿಗಳೊಂದಿಗೆ ಬಂಗ್ಲೆಗುಡ್ಡೆ ಅರಣ್ಯ ಪ್ರದೇಶಕ್ಕೆ ಭೇಟಿ ನೀಡಿದೆ. 4 ತಿಂಗಳ ಹಿಂದೆ 4 ತಿಂಗಳ ಹಿಂದೆ 7 ಅಸ್ಥಿಪಂಜರ ಸಿಕ್ಕಿದ್ದ ಜಾಗದಲ್ಲಿ ಪರಿಶೀಲನೆ ನಡೆಸಿದೆ. ಅಲ್ಲದೇ ಆರೋಪಿ ಪ್ರದೀಪ್ ಕುಲಾಲ್‌ನನ್ನ ಸ್ಥಳಕ್ಕೆ ಕರೆತಂದು ಪರಿಶೀಲನೆ ನಡೆಸಲಾಗಿದೆ. ಬುರುಡೆ ಷಡ್ಯಂತ್ರ ಪ್ರಕರಣದಲ್ಲಿ ಭಾಗಿಯಾಗಿದ್ದ ಪ್ರದೀಪ್ ಕುಲಾಲ್ ಬಿಎನ್‌ಎಸ್ ಸೆಕ್ಷನ್ 183 ಅಡಿ ತಪ್ಪೊಪ್ಪಿಗೆ ನೀಡಿದ್ದ. ರಾತ್ರಿ ಹೊತ್ತು ಕಾಡಿನಲ್ಲಿ ಬುರುಡೆ ತೆಗೆಯುತ್ತಿದ್ದ ವಿಡಿಯೋದಲ್ಲೂ ಪ್ರದೀಪ್ ಕಾಣಿಸಿಕೊಂಡಿದ್ದ.

**ಭಯೋತ್ಪಾದನೆಯನ್ನು ಪ್ರಾಯೋಜಿಸುವ, ಆಶ್ರಯ ನೀಡುವ ಅಥವಾ ಬೆಂಬಲಿಸುವ ರಾಜ್ಯಗಳನ್ನು ಹೊಣೆಗಾರರನ್ನಾಗಿ ಮಾಡಬೇಕು ಎಂದು ವಿಶ್ವಸಂಸ್ಥೆಯ ಭಾರತದ ಖಾಯಂ ಪ್ರತಿನಿಧಿ ಹರೀಶ್ ಪರ್ವತನೇನಿ ಅವರು ಒತ್ತಾಯಿಸಿದ್ದಾರೆ.**

# ಪಾಕ್‌ಗೆ ವಿಶ್ವಸಂಸ್ಥೆ ಖಡಕ್ ವಾರ್ನಿಂಗ್

■ ಭಾರತದ ಆ ಒಂದು ತಂತ್ರಕ್ಕೆ ಚೀನಾ-ಪಾಕ್ ಉಡೀಸ್! ■ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಪಾಕಿಸ್ತಾನವನ್ನು ತರಾಟೆಗೆ ತೆಗೆದುಕೊಂಡ ಭಾರತ ■ ಸಾಮರ್ಥ್ಯ ಹೆಚ್ಚಿಸಿಕೊಳ್ಳಲಿದೆ ಭಾರತ! ■ ಬಲವಾಗಲಿದೆ ಗಗನಯಾನದ ಭದ್ರತೆ!





### ಭಾರತ ತೀವ್ರ ವಾಗ್ದಾಳಿ

• ಉದಯವಾಹಿನಿ,ನವದೆಹಲಿ

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಪಾಕಿಸ್ತಾನದ ವಿರುದ್ಧ ಭಾರತ ತೀವ್ರ ವಾಗ್ದಾಳಿ ನಡೆಸಿದ್ದು, ಪಾಕಿಸ್ತಾನವು ಗಡಿಯಾಚೆಗಿನ ಭಯೋತ್ಪಾದನೆಯನ್ನು ಪ್ರಾಯೋಜಿಸುತ್ತಿದೆ, ನಾಗರಿಕರನ್ನು ಗುರಿಯಾಗಿಸಿಕೊಂಡಿದೆ ಮತ್ತು ಅಂತಾರಾಷ್ಟ್ರೀಯ ಮಾನವೀಯ ಕಾನೂನನ್ನು ಉಲ್ಲಂಘಿಸುತ್ತಿದೆ ಎಂದು ಆರೋಪಿಸಿದೆ. ಸಶಸ್ತ್ರ ಸಂಘರ್ಷದಲ್ಲಿ ನಾಗರಿಕರ ರಕ್ಷಣೆ ಕುರಿತು ನ್ಯೂಯಾರ್ಕ್‌ನಲ್ಲಿ ನಡೆದ ವಾರ್ಷಿಕ ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಮುಕ್ತ ಚರ್ಚೆಯಲ್ಲಿ ಮಾತನಾಡಿದ ವಿಶ್ವಸಂಸ್ಥೆಯ ಭಾರತದ ಖಾಯಂ ಪ್ರತಿನಿಧಿ ಹರೀಶ್ ಪರ್ವತನೇನಿ ಅವರು, ಗಡಿಯಾಚೆಗಿನ ಭಯೋತ್ಪಾದನೆಯಿಂದ ಉಂಟಾಗುವ ನಿರಂತರ ಬೆದರಿಕೆಯ ಬಗ್ಗೆ ಭಾರತವು ತೀವ್ರ ಕಳವಳ ವ್ಯಕ್ತಪಡಿಸಿದೆ ಎಂದು ಹೇಳಿದ್ದಾರೆ.'ಭಾರತವು ದಶಕಗಳಿಂದ ಇಂತಹ ರೀತಿಯ ಭಯೋತ್ಪಾದನೆಯ ಬಲಿಪಶುವಾಗಿದೆ. ಭಯೋತ್ಪಾದನೆಯನ್ನು ಪ್ರಾಯೋಜಿಸುವ, ಆಶ್ರಯ ನೀಡುವ ಅಥವಾ ಬೆಂಬಲಿಸುವ ರಾಜ್ಯಗಳನ್ನು ಹೊಣೆಗಾರರನ್ನಾಗಿ ಮಾಡಬೇಕು' ಎಂದು ಅವರು ಒತ್ತಾಯಿಸಿದ್ದಾರೆ. ಭಯೋತ್ಪಾದನೆಯು ಅದರ ಎಲ್ಲಾ ರೂಪಗಳಲ್ಲಿಯೂ ವಿಶ್ವದಾದ್ಯಂತ ನಾಗರಿಕರಿಗೆ ಅತ್ಯಂತ ಗಂಭೀರ ಬೆದರಿಕೆಗಳಲ್ಲಿ ಒಂದಾಗಿದೆ ಎಂದು ಪ್ರತಿಪಾದಿಸಿದ ಅವರು, ಯಾವುದೇ ಕಾರಣ ಅಥವಾ ಅಸಮಾಧಾನವು ನಾಗರಿಕರ ವಿರುದ್ಧ ಉದ್ದೇಶಪೂರ್ವಕ ದಾಳಿಯನ್ನು ಸಮರ್ಥಿಸಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರ ವರದಿಯನ್ನು ಉಲ್ಲೇಖಿಸಿ, 2025ರಲ್ಲಿ 20 ಸಶಸ್ತ್ರ ಸಂಘರ್ಷಗಳಲ್ಲಿ 37,000 ಕ್ಕೂ ಹೆಚ್ಚು ನಾಗರಿಕ ಸಾವುಗಳು ದಾಖಲಾಗಿವೆ ಎಂದಿದ್ದಾರೆ.'ನಿರಂತರ ನಾಗರಿಕ ಸಾವುನೋವುಗಳು, ಸ್ಥಳಾಂತರ, ನಿರ್ಣಾಯಕ ಮೂಲಸೌಕರ್ಯಗಳ ನಾಶ ಮತ್ತು ಆಸ್ಪತ್ರೆಗಳು, ಶಾಲೆಗಳು, ವೈದ್ಯಕೀಯ ಸಿಬ್ಬಂದಿ ಮತ್ತು ಮಾನವೀಯ ಕಾರ್ಯಕರ್ತರ ಮೇಲಿನ ದಾಳಿಗಳು ತೀವ್ರವಾಗಿ ಕಳವಳಕಾರಿಯಾಗಿವೆ' ಎಂದು ಅವರು ಹೇಳಿದ್ದಾರೆ. ಜನನಿಬಿಡ ನಗರ ಪ್ರದೇಶಗಳಲ್ಲಿ ಕ್ಷಿಪಣಿಗಳು, ಬಾಂಬ್‌ಗಳು, ಡ್ರೋನ್‌ಗಳು ಮತ್ತು ಕೃತಕ ಬುದ್ಧಿಮತ್ತೆ ಮತ್ತು ಸ್ವಾಯತ್ತ ವ್ಯವಸ್ಥೆಗಳು ಸೇರಿದಂತೆ ಉದಯೋನ್ಮುಖ ತಂತ್ರಜ್ಞಾನಗಳ ಬಳಕೆಯು ಹೆಚ್ಚುತ್ತಿರುವ ಬಗ್ಗೆಯೂ ಅವರು ಕಳವಳ ವ್ಯಕ್ತಪಡಿಸಿದ್ದಾರೆ. ಅಫ್ಘಾನಿಸ್ತಾನದಲ್ಲಿ ವಿಶ್ವಸಂಸ್ಥೆಯ ಸಹಾಯ ಮಿಷನ್ ನ ಸಂಶೋಧನೆಗಳನ್ನು ಉಲ್ಲೇಖಿಸಿ, ಗಡಿಯಾಚೆಗಿನ ಸಶಸ್ತ್ರ ಹಿಂಸಾಚಾರದಿಂದಾಗಿ ಅಫ್ಘಾನಿಸ್ತಾನದಲ್ಲಿ ಹೆಚ್ಚಿನ ಸಂಖ್ಯೆಯ ನಾಗರಿಕ ಸಾವುಗಳು ಮತ್ತು ಗಾಯಗಳಿಗೆ ಪಾಕಿಸ್ತಾನಿ ಮಿಲಿಟರಿ ಪಡೆಗಳು ಕಾರಣ ಎಂದು ಅವರು ಆರೋಪಿಸಿದ್ದಾರೆ.2026ರ ಮೊದಲ ಮೂರು ತಿಂಗಳಲ್ಲಿ, ಪಾಕಿಸ್ತಾನಿ ಮಿಲಿಟರಿ ಪಡೆಗಳು ನಡೆಸಿದ ಗಡಿಯಾಚೆಗಿನ ಸಶಸ್ತ್ರ ಹಿಂಸಾಚಾರದ ಪರಿಣಾಮವಾಗಿ ಅಫ್ಘಾನಿಸ್ತಾನದಲ್ಲಿ 750 ನಾಗರಿಕರ ಸಾವುಗಳು ಮತ್ತು ಗಾಯಗಳು ದಾಖಲಾಗಿವೆ ಎಂದು ಅಫ್ಘಾನಿಸ್ತಾನದಲ್ಲಿನ ವಿಶ್ವಸಂಸ್ಥೆಯ ಸಹಾಯ ಮಿಷನ್ ವರದಿ ಮಾಡಿದೆ. ಅವುಗಳಲ್ಲಿ ಹೆಚ್ಚಿನವು ವಾಯುದಾಳಿಗಳಿಂದಾಗಿ ಸಂಭವಿಸಿವೆ' ಎಂದು ಅವರು ಹೇಳಿದ್ದಾರೆ.**4 ಲಕ್ಷ ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿದ್ದ ಪಾಕ್: ವಿಶ್ವಸಂಸ್ಥೆ:** ಪಾಕಿಸ್ತಾನದ ದೀರ್ಘಕಾಲದ ನರಮೇಧದ ಕೃತ್ಯಗಳನ್ನು ಭಾರತ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಟೀಕಿಸಿದೆ.ದಶಕಗಳಿಂದ ತನ್ನ ಗಡಿಯೊಳಗೆ ಮತ್ತು ಹೊರಗೆ ಹಿಂಸಾಚಾರ ನಡೆಸುತ್ತಿರುವ ಪಾಕ್‌ನ ಅಮಾನವೀಯ ನಡವಳಿಕೆಯು ಆಂತರಿಕ ವೈಫಲ್ಯಗಳನ್ನು ಪ್ರತಿಬಿಂಬಿಸುತ್ತದೆ ಎಂದು ಭಾರತ ಹೇಳಿದೆ.

### ನಾಗರಿಕರ ರಕ್ಷಣೆ

ವಿಶ್ವಸಂಸ್ಥೆ ಭದ್ರತಾ ಮಂಡಳಿಯ ವಾರ್ಷಿಕ ಮುಕ್ತ ಚರ್ಚೆಯಲ್ಲಿ ಬುಧವಾರ ಮಾತನಾಡಿದ ಭಾರತದ ಖಾಯಂ ಪ್ರತಿನಿಧಿ ಹರೀಶ್ ಪರ್ವತನೇನಿ, 'ದೀರ್ಘಕಾಲದ ನರಮೇಧ ಕೃತ್ಯಗಳ ದಾಖಲೆ ಹೊಂದಿರುವ ಪಾಕಿಸ್ತಾನವು ಭಾರತದ ಸಂಪೂರ್ಣ ಆಂತರಿಕವಾಗಿರುವ ಸಮಸ್ಯೆಗಳನ್ನು ಉಲ್ಲೇಖಿಸುತ್ತಿರುವುದು ವಿಪರ್ಯಾಸ ಎಂದು ಹೇಳಿದ್ದಾರೆ. ಪಾಕಿಸ್ತಾನದ ಪ್ರತಿನಿಧಿಯು ಜಮ್ಮು ಮತ್ತು ಕಾಶ್ಮೀರದ ವಿಷಯವನ್ನು ಚರ್ಚೆಯಲ್ಲಿ ಎತ್ತಿದ ನಂತರ ಪರ್ವತನೇನಿ ಈ ರೀತಿ ತಿರುಗೇಟು ನೀಡಿದ್ದಾರೆ. ಈ ವರ್ಷದ ಆರಂಭದಲ್ಲಿ ಅಫ್ಘಾನಿಸ್ತಾನದ ಮೇಲೆ ಪಾಕಿಸ್ತಾನ ನಡೆಸಿದ ದಾಳಿಯನ್ನು ಪ್ರಸ್ತಾಪಿಸಿದ ಅವರು, ಮಾರ್ಚ್‌ನ ಪವಿತ್ರ ರಂಜಾನ್ ತಿಂಗಳಲ್ಲಿ, ಶಾಂತಿ, ಸಹಾನುಭೂತಿಯ ಸಮಯದಲ್ಲಿ ಕಾಬೂಲ್‌ನ ಆಸ್ಪತ್ರೆ ಮೇಲೆ ಪಾಕಿಸ್ತಾನ ಬರ್ಬರ ವೈಮಾನಿಕ ದಾಳಿ ನಡೆಸಿದೆ ಎಂಬುದನ್ನು ಜಗತ್ತು ಮರೆತಿಲ್ಲ ಎಂದು ಹೇಳಿದ್ದಾರೆ.

### ಪಾಕ್ ನೇರ ಹೊಣೆ

ಅಫ್ಘಾನಿಸ್ತಾನದ ಮೇಲೆ ನಡೆದ ದಾಳಿಗಳ ಬಗ್ಗೆ ಮಾತನಾಡುತ್ತಿದ್ದ ಭಾರತ, ಪಾಕಿಸ್ತಾನವನ್ನು ನೇರವಾಗಿ ಆರೋಪಿಸಿದೆ. ಈ ವರ್ಷದ ಮಾರ್ಚ್ ತಿಂಗಳಲ್ಲಿ, ರಂಜಾನ್ ಸಮಯದಲ್ಲಿ, ಕಾಬೂಲ್‌ನ ಓಮಿಡ್ ವ್ಯಸನ ಚಿಕಿತ್ಸಾ ಆಸ್ಪತ್ರೆಗೆ ಪಾಕಿಸ್ತಾನ ವೈಮಾನಿಕ ದಾಳಿ ನಡೆಸಿದೆ ಎಂದು ಭಾರತ ಹೇಳಿದೆ. ತರಾವೀಹ್ ಪ್ರಾರ್ಥನೆಯ ನಂತರ ಮಸೀದಿಯಿಂದ ಹೊರಬರುತ್ತಿದ್ದ ನಾಗರಿಕರ ಮೇಲೆ ದಾಳಿ ನಡೆದಿದ್ದು, ಇದರ ಪರಿಣಾಮವಾಗಿ 269 ನಾಗರಿಕರು ಸಾವನ್ನಪ್ಪಿದರು ಮತ್ತು 122 ಜನರು ಗಾಯಗೊಂಡರು ಎಂದು ಭಾರತ ವಿಶ್ವಸಂಸ್ಥೆಗೆ ತಿಳಿಸಿದೆ.



### 1971ರ ಯುದ್ಧದ ಸಂದರ್ಭ ಸ್ಮರಿಸಿದ ಭಾರತ

ಭಾರತವು 1971ರ ಯುದ್ಧದ ಸಂದರ್ಭದ ''ಆಪರೇಷನ್ ಸರ್ಚ್ ಲೈಟ್'' ಅನ್ನು ಸ್ಮರಿಸಿದೆ. ಆ ಸಮಯದಲ್ಲಿ ಪಾಕಿಸ್ತಾನ ತನ್ನದೇ ನಾಗರಿಕರ ವಿರುದ್ಧ ನರಮೇಧ ನಡೆಸಿದ್ದು, ಸುಮಾರು 400,000 ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿತ್ತು ಎಂದು ಭಾರತ ಉಲ್ಲೇಖಿಸಿದೆ. ಇಂತಹ ಕ್ರೂರ ಇತಿಹಾಸ ಹೊಂದಿರುವ ಪಾಕಿಸ್ತಾನ, ತನ್ನ ಆಂತರಿಕ ವೈಫಲ್ಯಗಳನ್ನು ಮರೆಮಾಚಲು ನಿರಂತರವಾಗಿ ಹಿಂಸೆ ಮತ್ತು ಪ್ರಚಾರದ ಮಾರ್ಗವನ್ನು ಅನುಸರಿಸಿದೆ ಎಂದು ಭಾರತ ಆರೋಪಿಸಿದೆ. ಪಾಕಿಸ್ತಾನದ ಗಡಿಯಾಚೆಗಿನ ಹಿಂಸಾಚಾರದಿಂದ 94,000 ಕ್ಕೂ ಹೆಚ್ಚು ಜನರನ್ನು ತಮ್ಮ ಮನೆಗಳನ್ನೇ ಬಿಟ್ಟು ಬೇರೆಡೆಗೆ ತೆರಳುವಂತೆ ಮಾಡಲಾಗಿದೆ ಎಂದು ಭಾರತ ವಿಶ್ವಸಂಸ್ಥೆಯಲ್ಲಿ ತಿಳಿಸಿದೆ. ಇದು ಪಾಕಿಸ್ತಾನದ ನೀತಿಗಳು ಪ್ರಾದೇಶಿಕ ಶಾಂತಿ ಮತ್ತು ಭದ್ರತೆಗೆ ಹೇಗೆ ಅಪಾಯ ತಂದಿದೆ ಎಂಬುದಕ್ಕೆ ದೊಡ್ಡ ಉದಾಹರಣೆ ಎಂದು ಭಾರತ ಹೇಳಿದೆ. ಗಡಿಯಾಚೆಗಿನ ಭಯೋತ್ಪಾದನೆ ಪ್ರಾದೇಶಿಕ ಶಾಂತಿ ಮತ್ತು ಭದ್ರತೆಗೆ ದೊಡ್ಡ ಬೆದರಿಕೆಯಾಗಿದೆ ಎಂದು ಪಿ. ಹರೀಶ್ ಸ್ಪಷ್ಟವಾಗಿ ಹೇಳಿದ್ದಾರೆ. ಭಾರತ ದಶಕಗಳಿಂದ ಭಯೋತ್ಪಾದನೆಯ ಬಲಿಪಶುವಾಗಿದೆ ಎಂದರು. ಭಯೋತ್ಪಾದನೆಯನ್ನು ಬೆಂಬಲಿಸುವ, ಆಶ್ರಯ ನೀಡುವ ಅಥವಾ ಸಹಾಯ ಮಾಡುವ ಯಾವುದೇ ದೇಶಗಳನ್ನು ಕಠಿಣವಾಗಿ ಹೊಣೆಗಾರರನ್ನಾಗಿ ಮಾಡಬೇಕು ಎಂಬುದು ಭಾರತದ ನಿಲುವು ಎಂದು ಹೇಳಿದರು.

### ಬೇಹುಗಾರಿಕೆ ಆರೋಪ

ಪಾಕಿಸ್ತಾನ ಪೌರತ್ವ ಪಡೆಯುವುದಕ್ಕಾಗಿ ಅಲ್ಲಿನ ಗುಪ್ತಚರ ಇಲಾಖೆ ಪರ ಭಾರತದಲ್ಲಿ ಬೇಹುಗಾರಿಕೆ ನಡೆಸುತ್ತಿದ್ದ ಆರೋಪದ ಮೇಲೆ ಕೋಲ್ಕತ್ತಾದ ವ್ಯಕ್ತಿಯೋರ್ವನನ್ನು ರಾಷ್ಟ್ರೀಯ ದನಿಖಾ ದಳವು ಬಂಧಿಸಿದೆ.

ಈತ ಭದ್ರತೆಗೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿಯನ್ನು ಪಾಕಿಸ್ತಾನಿ ಗುಪ್ತಚರ ಅಧಿಕಾರಿಗಳೊಂದಿಗೆ ಹಂಚಿಕೊಂಡಿರುವ ಶಂಕೆ ವ್ಯಕ್ತವಾಗಿದೆ.ಪಾಕ್ ಬೆಂಬಲಿತ ಗೂಢಚಾರನೋರ್ವ ಭಾರತ ವಿರೋಧಿ ಭಯೋತ್ಪಾದನಾ ಪಿತೂರಿಯ ಭಾಗವಾಗಿ ಪಿಐಒಗಳಿಗೆ ಭದ್ರತೆಗೆ ಸಂಬಂಧಿಸಿದ ಗೌಪ್ಯ ಮಾಹಿತಿಯನ್ನು ರಹಸ್ಯವಾಗಿ ರವಾನಿಸುವಲ್ಲಿ ಭಾಗಿಯಾಗಿದ್ದಾನೆ ಎಂದು ಎನ್‌ಐಎ ತಿಳಿಸಿದೆ.

ಬಂಧಿತನನ್ನು ಕೋಲ್ಕತ್ತಾ ನಿವಾಸಿ ಜಾಫರ್ ರಿಯಾಜ್ ಅಲಿಯಾಸ್ ರಿಧ್ವಿ ಎಂದು ಗುರುತಿಸಲಾಗಿದೆ. ಆತನ ವಿರುದ್ಧ ಲುಕ್ ಔಟ್ ನೋಟಿಸ್ ಹೊರಡಿಸಲಾಗಿದ್ದು, ವಶಕ್ಕೆ ಪಡೆದಾಗ ಆತನನ್ನು ಘೋಷಿತ ಅಪರಾಧಿ ಎಂದು ಪ್ರಕಟಿಸಲು ಕ್ರಮ ಕೈಗೊಳ್ಳಲಾಗಿತ್ತು. ಬಿಎನ್‌ಎಸ್, ಅಧಿಕೃತ ರಹಸ್ಯ ಕಾಯ್ದೆ ಮತ್ತು ಯುಎ(ಪಿ) ಕಾಯ್ದೆಯ ವಿವಿಧ ವಿಭಾಗಗಳ ಅಡಿಯಲ್ಲಿ ಆತನನ್ನು ಬಂಧಿಸಲಾಗಿದೆ ಎಂದು ತನಿಖಾ ಏಜೆನ್ಸಿ ಅಧಿಕಾರಿಗಳು ತಿಳಿಸಿದ್ದಾರೆ.

## ಬಿಎಂಟಿಸಿ ಕಾರ್ಯಾಚರಣೆ ವ್ಯಾಪ್ತಿ ವಿಸ್ತರಣೆ ಏರ್‌ಪೋರ್ಟ್‌ನಿಂದ ವಿವಿಧ ಸ್ಥಳಗಳಿಗೂ ಬಸ್?

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪ್ರತಿನಿತ್ಯ ರಾಜ್ಯದ ವಿವಿಧ ಮೂಲೆಗಳಿಂದ ಲಕ್ಷಾಂತರ ಜನ ಬರುತ್ತಾರೆ ಮೆಜೆಸ್ಟಿಕ್‌ಗೆ ಬಂದು ಅಲ್ಲಿಂದ ವಿಮಾನ ನಿಲ್ದಾಣಕ್ಕೆ ಬರುತ್ತಾರೆ, ಹೋಗುತ್ತಾರೆ. ಆದರೆ ಇದೀಗ ಏರ್‌ಪೋರ್ಟ್ ಪ್ರಯಾಣಿಕರಿಗೆ ಮತ್ತೊಂದು ಗುಡ್‌ನ್ಯೂಸ್ ನೀಡಲು ಬಿಎಂಟಿಸಿ ಚಿಂತನೆ ನಡೆಸಿದೆ.

ಸದ್ಯ ಬಿಎಂಟಿಸಿ ವಿವಿಧ ಜಿಲ್ಲೆಗಳಿಗೂ ಏರ್‌ಪೋರ್ಟ್ ಡೈರೆಕ್ಟ್ ಬಸ್ ಓಡಿಸಲು ಚಿಂತನೆ ನಡೆಸಿದೆ.ಬಿಎಂಟಿಸಿ ಸಂಸ್ಥೆಯ ಬಸ್‌ಗಳು ಬೆಂಗಳೂರಿನ ದಶದಿಕ್ಕುಗಳಿಗೂ ತನ್ನ ವ್ಯಾಪ್ತಿ ವಿಸ್ತರಿಸಿವೆ. ಪ್ರತಿನಿತ್ಯ ಎಲೆಕ್ಟ್ರಿಕ್ ಬಸ್‌ಗಳು ಸೇರಿ ಸುಮಾರು 6,750 ಬಸ್ಸುಗಳು ಕಾರ್ಯನಿರ್ವಹಿಸುತ್ತಿವೆ. ಪ್ರತಿನಿತ್ಯ 30-35 ಲಕ್ಷ ಮಂದಿ ಪ್ರಯಾಣಿಸುತ್ತಾರೆ. ಪ್ರಯಾಣಿಕರ ಅನುಕೂಲಕ್ಕಾಗಿ ಬೆಂಗಳೂರು ಸುತ್ತಮುತ್ತಲಿನ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಜಿಬಿಎ ವ್ಯಾಪ್ತಿಯ ನಂತರ ಸುಮಾರು 70 ಕಿಲೋಮೀಟರ್‌ವರೆಗೂ ಬಿಎಂಟಿಸಿ ಬಸ್‌ಗಳ ಕಾರ್ಯಾಚರಣೆ ಆರಂಭಿಸಿದೆ. ಈಗಾಗಲೇ ರಾಮನಗರ, ಕನಕಪುರ, ಆನೇಕಲ್, ಮಾಗಡಿ, ತುಮಕೂರು ಸೇರಿದಂತೆ ಹಲವೆಡೆ ಎಕ್ಸ್‌ಪ್ರೆಸ್ ಸೇರಿದಂತೆ ಬಿಎಂಟಿಸಿ ಬಸ್‌ಗಳು ಓಡಾಡುತ್ತಿವೆ. ಏರ್‌ಪೋರ್ಟ್ ಪ್ರಯಾಣಿಕರಿಂದ ಈ ಸ್ಥಳಗಳಿಗೂ ಬಿಎಂಟಿಸಿ ಬಸ್‌ಗಳಿಗೆ ಬೇಡಿಕೆ ಬಂದರೆ ಡೈರೆಕ್ಟ್ ಎಕ್ಸ್‌ಪ್ರೆಸ್ ಬಸ್‌ಗಳನ್ನು ಏರ್‌ಪೋರ್ಟ್‌ನಿಂದ ಓಡಿಸಲು ಬಿಎಂಟಿಸಿ ಚಿಂತನೆ ನಡೆಸಿದೆ.



ಇನ್ನೂ ಏರ್‌ಪೋರ್ಟ್‌ಗೆ ಪ್ರತಿನಿತ್ಯ ಬೆಂಗಳೂರಿನ ವಿವಿಧ ಏರಿಯಾಗಳಿಂದ 150 ಬಸ್‌ಗಳು ಕಾರ್ಯಾಚರಣೆ ನಡೆಸುತ್ತಿದ್ದು, ಸುಮಾರು 12-15 ಸಾವಿರ ಜನ ಪ್ರತಿನಿತ್ಯ ಬಿಎಂಟಿಸಿ ವೋಲ್ವೋ ಬಸ್‌ಗಳಲ್ಲಿ ಪ್ರಯಾಣಿಸುತ್ತಾರೆ.

ಬಿಎಂಟಿಸಿ ಬೆಂಗಳೂರು ಸುತ್ತಮುತ್ತಲಿನ ಜಿಲ್ಲೆ ಅಥವಾ ಸ್ಥಳಗಳಿಗೆ ಏರ್‌ಪೋರ್ಟ್‌ನಿಂದ ಡೈರೆಕ್ಟ್ ಬಸ್ ಸೇವೆ ಆರಂಭಿಸಿದರೆ, ಕೆಲವು ಜಿಲ್ಲೆಗಳ ಜನರಿಗೆ ನೇರ ಬಸ್ ಸಾರಿಗೆ ಸೇವೆ ಸಿಗುತ್ತಿದೆ. ಇದರಿಂದ ಸಮಯ, ಹಣ ಉಳಿತಾಯವಾಗುತ್ತದೆ. ಸಂಚಾರ ದಟ್ಟಣೆ ಕಿರಿಕಿರಿ ತಪ್ಪುತ್ತದೆ. ಸದ್ಯ ಏರ್‌ಪೋರ್ಟ್‌ನಿಂದ ವಿವಿಧ ಊರುಗಳಿಗೆ ಕೆಎಸ್‌ಆರ್‌ಟಿಸಿ ಬಸ್ ಸೇವೆ ಒದಗಿಸುತ್ತಿದೆ.

## ಬಿಜೆಪಿ ಸೇರಿದ ರಾಜಣ್ಣ: ಹಿರಿಯೂರು ಕ್ಷೇತ್ರದ ಮೇಲೆ ಜೆಡಿಎಸ್ ಕಣ್ಣು, ಉಪಚುನಾವಣೆ ಅಖಾಡಕ್ಕೆ ರಂಗು

• ಉದಯವಾಹಿನಿ, ಬೆಂಗಳೂರು:

ಹಿರಿಯ ನಾಯಕ ಹಾಗೂ ಸಚಿವ ಡಿ. ಸುಧಾಕರ್ ಅವರ ಅಕಾಲಿಕ ನಿಧನದಿಂದ ತೆರವಾಗಿರುವ ಹಿರಿಯೂರು ವಿಧಾನಸಭಾ ಕ್ಷೇತ್ರಕ್ಕೆ ಉಪಚುನಾವಣೆ ಎದುರಾಗಿದೆ. ಚುನಾವಣೆಗೆ ದಿನಾಂಕ ಘೋಷಣೆ ಮೊದಲೇ ಕ್ಷೇತ್ರದಲ್ಲಿ ರಾಜಕೀಯ ಚಟುವಟಿಕೆಗಳು ಬಿರುಸುಗೊಂಡಿವೆ. ಇದಕ್ಕೆ ಪೂರಕವೆಂಬಂತೆ ಗೊಲ್ಲರ ಸಂಘದ ರಾಜ್ಯಾಧ್ಯಕ್ಷ ರಾಜಣ್ಣ ಅವರು ಬಿಜೆಪಿ ಸೇರ್ಪಡೆಯಾಗಿದ್ದಾರೆ. ಇನ್ನೊಂದೆಡೆ ಮಿತ್ರ ಪಕ್ಷ ಜೆಡಿಎಸ್ ಸಹ ಬೇರೆಯದ್ದೇ ಲೆಕ್ಕಾಚಾರಗಳನ್ನ ಹಾಕುತ್ತಿದೆ. ಕೋಟೆಯನ್ನು ವಶಪಡಿಸಿಕೊಳ್ಳಲು ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಭರ್ಜರಿ ತಂತ್ರ-ಪ್ರತಿತಂತ್ರಗಳನ್ನು ಹೆಣೆಯುತ್ತಿವೆ.

ಅದರಲ್ಲೂ ಮೈತ್ರಿ ಪಾಳಯದಲ್ಲಿ ಟಿಕೆಟ್‌ಗಾಗಿ ಒಳಗೊಳಗೇ ಬಿಗ್ ಫೈಟ್ ಶುರುವಾಗಿದೆ. ಹೌದು ಹಿರಿಯೂರು ಕ್ಷೇತ್ರದ ಮೇಲೆ ಈ ಬಾರಿ ಪ್ರಾದೇಶಿಕ ಪಕ್ಷ ಜೆಡಿಎಸ್ ಕಣ್ಣಿಟ್ಟಿದ್ದು, ಈ ಉಪಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿಯಾಗಿ ಜೆಡಿಎಸ್‌ನವರನ್ನೇ ಕಣಕ್ಕಿಳಿಸಲು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಭರ್ಜರಿ ಪ್ಲಾನ್ ಮಾಡಿದ್ದಾರೆ. ಇನ್ನೊಂದೆಡೆ ಬಿಜೆಪಿ ಸಹ ತಮ್ಮ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಮುಂದಾಗಿದ್ದು, ಇದಕ್ಕಾಗಿ ರಾಜಣ್ಣ ಅವರನ್ನ ಪಕ್ಷಕ್ಕೆ ಸೇರಿಸಿಕೊಳ್ಳಲಾಗಿದೆ. ಮೈತ್ರಿ ಧರ್ಮದ ಪ್ರಕಾರ ಜೆಡಿಎಸ್ ಹಿರಿಯೂರು ಸೀಟಿಗೆ ಬೇಡಿಕೆ ಇಡುತ್ತಿದ್ದರೆ, ಇತ್ತ ಬಿಜೆಪಿ ಮಾತ್ರ ಒಳಗೊಳಗೇ ಬೇರೆಯದೇ ಆದ ಬ್ರಹ್ಮಾಸ್ತ್ರವನ್ನು ರೆಡಿ ಮಾಡಿಕೊಂಡಿದೆ. ಹಿರಿಯೂರು ಕ್ಷೇತ್ರದಲ್ಲಿ ನಿರ್ಣಾಯಕವಾಗಿರುವ ಕಾಡುಗೊಲ್ಲ ಸಮುದಾಯದ ಮತಗಳನ್ನು ಸೆಳೆಯಲು ಅದೇ ಸಮುದಾಯದ ಪ್ರಭಾವಿ ನಾಯಕನನ್ನು ಕಣಕ್ಕಿಳಿಸಲು ಬಿಜೆಪಿ ಮುಂದಾಗಿದ್ದು, ಅದಕ್ಕಾಗಿಯೇ ತಟಸ್ಥರಾಗಿದ್ದ ಕಾಡುಗೊಲ್ಲರ ಸಂಘದ ರಾಜ್ಯಾಧ್ಯಕ್ಷ ಅವರನ್ನ ಕಣಕ್ಕಿಳಿಸಲು ಚಿಂತನೆ ನಡೆಸಿದೆ.



ಇದರಿಂದ ರಾಜಣ್ಣ ಅವರನ್ನು ಅದ್ದೂರಿಯಾಗಿ ಮತ್ತೆ ಪಕ್ಷಕ್ಕೆ ಸೇರಿಸಿಕೊಳ್ಳಲಾಗಿದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸಂಸದ ಗೋವಿಂದ ಕಾರಜೋಳ, ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ, ಮೈಸೂರು ಸಂಸದ ಯದುವೀರ್ ಒಡೆಯರ್, ಮೇಲ್ಮನೆ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹಾಗೂ ಪರಿಷತ್ ಸದಸ್ಯ ಎನ್. ರವಿಕುಮಾರ್ ಅವರಂತಹ ಘಟಾನುಘಟಿ ನಾಯಕರ ಸಮ್ಮುಖದಲ್ಲೇ ರಾಜಣ್ಣ ಮರಳಿ ಕಮಲ ಮುಡಿದಿದ್ದಾರೆ.

## ಕೇಂದ್ರ ಸರ್ಕಾರ ಪೆಟ್ರೋಲ್ ಬೆಲೆ ಏರಿಸುವುದು, ನಾವು ಕಡಿಮೆ ಮಾಡುವುದಾ: ಸಿಎಂ ಪ್ರಶ್ನೆ

• ಉದಯವಾಹಿನಿ ಬೆಂಗಳೂರು

'ಕೇಂದ್ರ ಸರ್ಕಾರ ಬೆಲೆ ಏರಿಸೋದು, ನಾವು ಕಡಿಮೆ ಮಾಡೋದಾ' ಎಂದು ಪ್ರಶ್ನಿಸುವ ಮೂಲಕ ಸಿಎಂ ಸಿದ್ದರಾಮಯ್ಯ ರಾಜ್ಯ ಸರ್ಕಾರ ಪೆಟ್ರೋಲ್, ಡೀಸೆಲ್ ಮೇಲಿನ ತೆರಿಗೆ ಕಡಿಮೆ ಮಾಡುವುದಿಲ್ಲ ಎಂದು ಪರೋಕ್ಷವಾಗಿ ತಿಳಿಸಿದರು.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಕಾರಣ ರಾಜ್ಯದ ತೆರಿಗೆ ಇಳಿಕೆ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, 'ಅವರು ಬೆಲೆ ಏರಿಸೋದು, ನಾವು ಕಡಿಮೆ ಮಾಡೋದಾ?. ಅವರಿಗೆ ಬೆಲೆ ಏರಿಸಿದರೂ ನೀವು ಏನೂ ಮಾತನಾಡುವುದಿಲ್ಲ. ನಮಗೆ ಕಡಿಮೆ ಮಾಡ್ತಿರಾ ಅಂತ ಪ್ರಶ್ನೆ ಕೇಳ್ತೀರಾ' ಎಂದು ಆಕ್ಷೇಪಿಸಿದರು. 'ಮೋದಿ ಅಧಿಕಾರಕ್ಕೆ ಬಂದಾಗ ಪೆಟ್ರೋಲ್ ಬೆಲೆ ಎಷ್ಟಿತ್ತು?. ಮನಮೋಹನ್?ಸಿಂಗ್ ಇದ್ದಾಗ ಎಷ್ಟಿತ್ತು. ಡೀಸೆಲ್ ಬೆಲೆ 48 ರೂಪಾಯಿ, ಪೆಟ್ರೋಲ್ ಬೆಲೆ 70 ರೂಪಾಯಿ ಇತ್ತು. ಎಲ್?ಪಿಜಿ ಬೆಲೆ 414 ರೂಪಾಯಿ ಇತ್ತು. ಈಗ ಎಷ್ಟಿದೆ, ಈ ಬೆಲೆ ಏರಿಕೆ ಮಾಡಿದ್ದು ಯಾರು ಎಂದು ಪ್ರಶ್ನಿಸಿದ ಸಿಎಂ. 'ನೀವ್ಯಾಕೆ ಪ್ರಶ್ನೆ ಕೇಳ್ತಾ ಇದ್ದೀರಾ, ಅವರು ಹೆಚ್ಚು ಮಾಡಿದ್ರೆ, ನೀವು ಕಡಿಮೆ ಮಾಡಿ ಅಂತ ಅಲ್ವಾ?. ನೀವೆಲ್ಲರೂ ಕೇಂದ್ರ ಸರ್ಕಾರ ಪರ' ಅಂತ ಕಿಡಿಕಾರಿದರು. ರಾಜ್ಯದಲ್ಲಿ ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿರುವುದರ ವಿರುದ್ಧ ಕಾಂಗ್ರೆಸ್ ಪಕ್ಷ ತೀವ್ರ ವಿರೋಧ ವ್ಯಕ್ತಪಡಿಸುತ್ತಿದೆ. ಈ ವೇಳೆ ರಾಜ್ಯ ಬಿಜೆಪಿ ನಾಯಕರು ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಕಡಿಮೆ ಮಾಡಲಿ ಎಂದು ಪ್ರತಿ ಸವಾಲು ಹಾಕಿತ್ತು. ಬೆಲೆ ಏರಿಕೆಗೆ ಸಾಮಾಜಿಕ ಜಾಲತಾಣದಲ್ಲಿ ಸಿಎಂ



ಆಕ್ರೋಶ: ಸಿಎಂ ಸಿದ್ದರಾಮಯ್ಯ ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ, 'ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ತನ್ನ ಆಡಳಿತ ವೈಫಲ್ಯಕ್ಕಾಗಿ ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ತಲಾ 3 ರೂ. ಏರಿಕೆ ಮಾಡುವ ಮೂಲಕ ದೇಶದ ಜನಸಾಮಾನ್ಯರ ಬದುಕಿನ ಮೇಲೆ ಬರೆ ಎಳೆದಿದೆ ಎಂದು 5 ದಿನದ ಹಿಂದೆ ಟೀಕಿಸಿದ್ದರು. ಈ ಬಗ್ಗೆ ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಬರೆದ ಅವರು, 'ಇದು ಬೆಲೆ ಏರಿಕೆಯಲ್ಲ, ಭಾರತದ ಸಾಮಾನ್ಯ ಜನರ ದೈನಂದಿನ ಬದುಕಿನ ಮೇಲೆ ನಡೆಸಿದ ನೇರ ದಾಳಿಯಾಗಿದೆ. ನಾವು ಅಂದುಕೊಂಡಂತೆ ಕೇಂದ್ರ ಸರ್ಕಾರವು ತನ್ನ ವಿದೇಶಾಂಗ ನೀತಿಯ ವೈಫಲ್ಯ, ಕಳಪೆ ಆರ್ಥಿಕ ನಿರ್ವಹಣೆ ಮತ್ತು ಅಜಾಗರೂಕ ಹಣದುಬ್ಬರದ ನಿರ್ವಹಣೆಯ ಪರಿಣಾಮಗಳನ್ನು ಬಲವಂತವಾಗಿ ದೇಶದ ಜನತೆಯ ತಲೆಯ ಮೇಲೆ ಹೇರುತ್ತಿದೆ.

ದೇಶದ ಜನತೆಯ ಹಿತಾಸಕ್ತಿಗಳನ್ನು ಕಾಪಾಡುವ ಬದಲು ಅವರಿಂದಲೇ ಹಣ ಕಿತ್ತುಕೊಂಡು ತನ್ನ ವೈಫಲ್ಯದ ನಷ್ಟ ಭರಿಸುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದರು.

### ಸಿಇಟಿಗೆ ಅವಕಾಶ ಮಾಡಿಕೊಡಿ

**ಮೋದಿ ಅವರಿಗೆ ಬಡವರು, ಅಲ್ಪಸಂಖ್ಯಾತರು, ದುರ್ಬಲ ವರ್ಗದವರನ್ನು ಕಂಡರೆ ಆಗಲ್ಲ ಎಂಬುದಕ್ಕೆ ಇದೇ ಸಾಕ್ಷಿ. ನೀಟ್ ಯಾಕೆ ತಂದರು? ಸಿಇಟಿಯಲ್ಲಿ ಏನಾದರೂ ದೋಷ ಇತ್ತಾ? ಮಾತು ಎತ್ತಿದರೆ ಕೋ ಅಪರೇಟಿವ್ ಫೆಡರಲಿಸಂ ಅಂತಾ ಹೇಳುತ್ತಾರೆ. ಒಕ್ಕೂಟ ರಾಜ್ಯಗಳಿಗೆ ಆಯಾ ವ್ಯವಸ್ಥೆಗೆ ಜಾರಿ ಮಾಡುವ ಅವಕಾಶ ಕೊಡಬೇಕು. ಸಿಇಟಿ ಪರೀಕ್ಷೆಗೆ ಅವಕಾಶ ಮಾಡಿ ಕೊಡುವ ಕೆಲಸ ಆಗಬೇಕು ಎಂದು ಸಿದ್ದರಾಮಯ್ಯ ಒತ್ತಾಯಿಸಿದರು. ಮೋದಿ ಅವರಿಗೆ ಗೊತ್ತಿರುವ ಪ್ರಕಾರ ಎಷ್ಟು ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಈ ಹಿಂದೆ ರಾಜ್ಯದಲ್ಲಿ ಬೊಮ್ಮಾಯಿ, ಯಡಿಯೂರಪ್ಪ ಕಾಲದಲ್ಲಿ ಎಷ್ಟು ಸಲ ಸೋರಿಕೆಯಾಯಿತುಸಬ್ ಇನ್ಸ್‌ಪೆಕ್ಟರ್ ಪರೀಕ್ಷೆಯಲ್ಲೂ ಕೂಡ ಪ್ರಶ್ನೆ ಪತ್ರಿಕೆ ಸೋರಿಕೆಯಾಯಿತು. ಎಡಿಜಿಬಿ ಜೈಲಿಗೆ ಹೋಗಿದ್ದಾರೆ.**

### ಪೇಪರ್ ಲೀಕ್ ಪೇ ಚರ್ಚೆ ಮಾಡಲಿ

ಎಐಸಿಸಿ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಮಾತನಾಡಿ, ಮೋದಿ ಸರ್ಕಾರ ಶಿಕ್ಷಣ ಮಾಫಿಯಾಗೆ ಎಲ್ಲವನ್ನೂ ಒಪ್ಪಿಸಿಬಿಟ್ಟಿದೆ. ಹಿಂದಿನ ಬಿಜೆಪಿ ಸರ್ಕಾರ ಪೇಪರ್ ಲೀಕ್‌ಗೆ ಹೆಸರುವಾಸಿಯಾಗಿತ್ತು. ನೂರಾರು ಪರೀಕ್ಷೆಗಳು ಬಿಜೆಪಿ ನಾಯಕರ ಮೂಗಿನ ಅಡಿಯಲ್ಲೇ ನಡೆದಿದೆ.

ಮೋದಿಯವರು ಪರೀಕ್ಷಾ ಪೇ ಚರ್ಚಾ ಬಿಟ್ಟು ಪೇಪರ್ ಲೀಕ್ ಪೇ ಚರ್ಚೆ ಮಾಡಬೇಕು. ಒಂದಾದ ಮೇಲೊಂದು ಪೇಪರ್ ಲೀಕ್ ಸ್ಕ್ಯಾಮ್ ಹೊರಗೆ ಬರುತ್ತಲೇ ಇದೆ. ವ್ಯಾಪಂ ಸ್ಕ್ಯಾಮ್ ಮಧ್ಯಪ್ರದೇಶದಲ್ಲಿ ನಡೆದಿತ್ತು,. ಅದರಲ್ಲಿ ನೂರಾರು ವಿದ್ಯಾರ್ಥಿಗಳು ಬಲಿಯಾದರು. ವ್ಯಾಪಂ ಅಕ್ರಮದಲ್ಲಿ ಭಾಗಿಯಾದ ವ್ಯಕ್ತಿ ಜೈಲಿನಲ್ಲಿ ಇಲ್ಲ. ಈಗ ಕೇಂದ್ರದ ಸಂಪುಟದಲ್ಲಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಮಾತನಾಡುತ್ತಾ, ಯುವಕರ ಜೀವನದಲ್ಲಿ ಕೇಂದ್ರ ಸರ್ಕಾರ ಚೆಲ್ಲಾಟವಾಡುತ್ತಿದೆ.

**ಈ ದಿನದ ದರ** ಪೆಟ್ರೋಲ್: 107.12 ₹/L ಡೀಸೆಲ್ : 95.04 ₹/L ಬಂಗಾರ: ₹ 15,993/Gram 24ct ₹114,660/Gram 22ct ಬೆಳ್ಳಿ: ₹285.00/

# ಕನಿಷ್ಠ ವೇತನ ಹೆಚ್ಚಳ ಮಾಡಿ ಗುತ್ತಿಗೆದಾರರಿಗೆ ಹೆಚ್ಚುವರಿ ಮೊತ್ತ ಪಾವತಿಗೆ ನಿರಾಕರಿಸಲಾಗದು: ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರ ಕನಿಷ್ಠ ವೇತನ ಪರಿಷ್ಕರಣೆ ಮಾಡಿದಾಗ ಚಾಲ್ತಿಯಲ್ಲಿರುವ ಗುತ್ತಿಗೆ ಒಪ್ಪಂದದ ನೆಪವೊಡ್ಡಿ ಕಾರ್ಮಿಕರಿಗೆ ವೇತನ ಪಾವತಿಸಲು ಗುತ್ತಿಗೆದಾರರಿಗೆ ಹೆಚ್ಚುವರಿ ಮೊತ್ತ ಪಾವತಿಸಲು ನಿರಾಕರಿಸುವುದಕ್ಕೆ ಅವಕಾಶವಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಬೆಂಗಳೂರಿನ ಏಷ್ಯನ್ ಸೆಕ್ಯೂರಿಟಿ ಆಂಡ್ ಪರ್ಸನಲ್ ಅರೇಂಜ್ ಮೆಂಟ್ಸ್ ಸಂಸ್ಥೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ಹೊರಡಿಸಿತು.

ಭದ್ರತಾ ಸಿಬ್ಬಂದಿ ಪೂರೈಸುವ ಸಂಸ್ಥೆಗೆ 3.5 ಕೋಟಿ ರೂ ಬಾಕಿ ಹಣವನ್ನು ಶೇ.12ರಷ್ಟು ಬಡ್ಡಿಯೊಂದಿಗೆ ಪಾವತಿಸುವಂತೆ ಕರ್ನಾಟಕ ವಿಧಾನಸಭಾ ಸಚಿವಾಲಯಕ್ಕೆ ನಿರ್ದೇಶನ ನೀಡಿದೆ. ಕನಿಷ್ಠ ವೇತನ ಪರಿಷ್ಕರಣೆ ಮಾಡಿದ ಸರ್ಕಾರ ಗುತ್ತಿಗೆಗಾರರಿಗೆ ಹೆಚ್ಚುವರಿಯಾಗುವ ಮೊತ್ತ ಪಾವತಿಸದೆ ನಿರಾಕರಿಸುವುದು ಅತ್ಯಂತ ಅಸಂಬದ್ಧ, ತರ್ಕಹೀನ ಮತ್ತು ಸಾರ್ವಜನಿಕ ನೀತಿಗೆ ವಿರುದ್ಧ ಎಂದು ತಿಳಿಸಿದೆ. ರಾಜ್ಯ ಸರ್ಕಾರು ಮಾಡಿಕೊಳ್ಳುವ ಯಾವುದೇ ಖಾಸಗಿ ಅಥವಾ ವಾಣಿಜ್ಯ ಗುತ್ತಿಗೆ ಒಪ್ಪಂದಗಳು ದೇಶದ ಶಾಸನಬದ್ಧ ಕಾನೂನನ್ನು ಮೀರುವಂತಿಲ್ಲ.

ಹಳೆಯ ದರಗಳ ಆಧಾರದ ಮೇಲೆ ಒಪ್ಪಂದವಾಗಿದೆ ಎಂಬ ಕಾರಣಕ್ಕೆ ಸರ್ಕಾರಿ ಆದೇಶದ ಮೂಲಕ ಹೆಚ್ಚಿಸಲಾದ ಕನಿಷ್ಠ ವೇತನವನ್ನು ನೀಡದೆ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಪೀಠ ಹೇಳಿತು.

**ಸರ್ಕಾರ ಮಾದರಿಯಾಗಬೇಕು:** ಅರ್ಜಿದಾರರು ಮತ್ತು ಸರ್ಕಾರದ ನಡುವೆ ಆಗಿರುವ ಒಪ್ಪಂದದಲ್ಲಿ ವೇತನ ಏರಿಕೆಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿಲ್ಲ. ವೇತನ ಏರಿಕೆ ಪರಿಷ್ಕರಣೆಯನ್ನು ಗುತ್ತಿಗೆದಾರರೇ ಭರಿಸಬೇಕು

ಉದಯವಾಹಿನಿ ಚಿತ್ರ



ಎಂದು ಸೂಚಿಸುವ ಷರತ್ತು ಇದ್ದರೂ, ಸಂವಿಧಾನದ ವಿಧಿ 12ರ ಅಡಿಯಲ್ಲಿ ಬರುವ ಸರ್ಕಾರ ಮತ್ತು ಅದರ ಅಂಗ ಸಂಸ್ಥೆಗಳು ಕೇವಲ ಲಾಭದ ಉದ್ದೇಶ ಹೊಂದಿರುವ ಖಾಸಗಿ ಕಂಪನಿಗಳಂತೆ ವರ್ತಿಸಬಾರದು. ಅವು ಸಮಾಜಕ್ಕೆ ಮಾದರಿ ಉದ್ಯೋಗದಾತರಾಗಬೇಕು. ಗುತ್ತಿಗೆಯ ಕಟ್ಟುನಿಟ್ಟಿನ ನಿಯಮಗಳನ್ನು ಮುಂದಿಟ್ಟುಕೊಂಡು, ಕಾರ್ಮಿಕ ಕಲ್ಯಾಣ ಕಾಯ್ದೆಗಳ ಉಲ್ಲಂಘನೆಗೆ ಪರೋಕ್ಷವಾಗಿ ಕಾರಣವಾಗಬಾರದು ಎಂದು ಪೀಠ ಹೇಳಿದೆ. ಕನಿಷ್ಠ ವೇತನವನ್ನು ಪಾವತಿಸುವ ಬಾಧ್ಯತೆಯು ಕೇವಲ ಒಪ್ಪಂದದ ಷರತ್ತು ಅಲ್ಲ. ಬದಲಾಗಿ ಶಾಸನಬದ್ಧ ಮತ್ತು ಸಾಂವಿಧಾನಿಕ ಬಾಧ್ಯತೆಯಾಗಿದೆ. ಕನಿಷ್ಠ ವೇತನಕ್ಕಿಂತ ಕಡಿಮೆ ವೇತನ ಪಾವತಿ ಮಾಡುವುದು ಸಂವಿಧಾನದ 23ನೇ ವಿಧಿಯ ಅಡಿಯಲ್ಲಿ ಬಲವಂತದ ದುಡಿಮೆಗೆ ಸಮನಾಗಿರುತ್ತದೆ. ಆದ್ದರಿಂದ ಕಾರ್ಮಿಕರಿಗೆ ಕನಿಷ್ಠ ವೇತನ ಸಿಗುವಂತೆ ಮಾಡುವುದು ಸರ್ಕಾರದ ಸಾಂವಿಧಾನಿಕ ಜವಾಬ್ದಾರಿ ಎಂದು ಪೀಠ ತನ್ನ ಆದೇಶದಲ್ಲಿ ವಿವರಿಸಿದೆ.

### ಪ್ರಕರಣದ ಹಿನ್ನೆಲೆ

**ಅರ್ಜಿದಾರ ಸಂಸ್ಥೆಯು ಕರ್ನಾಟಕ ವಿಧಾನಸಭೆ ಸಚಿವಾಲಯಕ್ಕೆ ಹೌಸ್‌ಕೀಪಿಂಗ್ ಮತ್ತು ಭದ್ರತಾ ಸಿಬ್ಬಂದಿಯನ್ನು ಒದಗಿಸಿತ್ತು. 2016ರಲ್ಲಿ ರಾಜ್ಯ ಸರ್ಕಾರ ಕನಿಷ್ಠ ವೇತನ ಹೆಚ್ಚಿಸಿ ಅಧಿಸೂಚನೆ ಹೊರಡಿಸಿತ್ತು. ಈ ಹಿನ್ನೆಲೆಯಲ್ಲಿ ಸಂಸ್ಥೆಯು ಕಾರ್ಮಿಕರಿಗೆ ಹೆಚ್ಚಿನ ವೇತನ ನೀಡಿ, ಆ ಹೆಚ್ಚುವರಿ ಮೊತ್ತವಾದ 3.5 ಕೋಟಿ ರುಪಾಯಿಗಳನ್ನು ಭರಿಸುವಂತೆ ವಿಧಾನಸಭೆ ಸಚಿವಾಲಯಕ್ಕೆ ಬಿಲ್ ಸಲ್ಲಿಸಿತ್ತು. ಆದರೆ, ಗುತ್ತಿಗೆ ನೀಡಿರುವ ಒಪ್ಪಂದ ಹಳೆಯ ದರದಲ್ಲಿದೆ.**

## ನೀಟ್ ಹಗರಣದ ವಿರುದ್ಧ ಬೀದಿಗಿಳಿದ ಸಾವಿರಾರು ಹಸ್ತ ಪಡೆ

• ಉದಯವಾಹಿನಿ, ಬೆಂಗಳೂರು

ನೀಟ್ ಪರೀಕ್ಷೆಯಲ್ಲಿನ ಅಕ್ರಮಗಳನ್ನು ಖಂಡಿಸಿ ಯುವ ಕಾಂಗ್ರೆಸ್ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಿದೆ. ಸಾವಿರಕ್ಕೂ ಹೆಚ್ಚು ಪೊಲೀಸರ ಬಿಗಿ ಭದ್ರತೆಯ ನಡುವೆ ಕಾಂಗ್ರೆಸ್ ಕಾರ್ಯಕರ್ತರು ಜಮಾಯಿಸಿದ್ದರು. ದೇಶಾದ್ಯಂತ ನೀಟ್ ಪರೀಕ್ಷಾ ಪ್ರಶ್ನೆಪತ್ರಿಕೆ ಸೋರಿಕೆ, ಅಕ್ರಮಗಳು ಮತ್ತು ಹಗರಣಗಳ ಕುರಿತು ಆತಂಕಗಳು ಹೆಚ್ಚಿರುವ ಹಿನ್ನೆಲೆಯಲ್ಲಿ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಪ್ರತಿಭಟನಾಕಾರರು ನೀಟ್ ಪರೀಕ್ಷೆಗಳನ್ನು ರದ್ದುಗೊಳಿಸುವಂತೆ ಮತ್ತು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಪ್ರತಿಭಟನೆಯ ವಾತಾವರಣವು ಕಾಂಗ್ರೆಸ್ ಘೋಷಣೆಗಳು ಮತ್ತು ಹಾಡುಗಳಿಂದ ತುಂಬಿತ್ತು. ಇದು ಕಾರ್ಯಕರ್ತರ ಆವೇಶವನ್ನು ಸೂಚಿಸುತ್ತಿತ್ತು. ಯುವ ಕಾಂಗ್ರೆಸ್ ಕಾರ್ಯಕರ್ತರು ಲೋಕಭವನಕ್ಕೆ ಮುತ್ತಿಗೆ ಹಾಕಲು ನಿರ್ಧರಿಸಿದ್ದರು, ಅದಕ್ಕಾಗಿ ಫ್ರೀಡಂಪಾರ್ಕ್ ಮತ್ತು ಲೋಕಭವನದ ಸುತ್ತಮುತ್ತ ಹೆಚ್ಚುವರಿ ಭದ್ರತೆಯನ್ನು ನಿಯೋಜಿಸಲಾಗಿತ್ತು. ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನಡೆಸಿದ ಪರೀಕ್ಷೆಯಲ್ಲಿನ ಅಕ್ರಮಗಳ ವಿರುದ್ಧ ಧ್ವನಿ ಎತ್ತುವುದು ಈ ಪ್ರತಿಭಟನೆಯ ಮುಖ್ಯ ಉದ್ದೇಶವಾಗಿತ್ತು.

## ಸಿಎಂ ಕುರ್ಚಿ ಗೊಂದಲ ಹೈಕಮಾಂಡ್ ಇತ್ಯರ್ಥ ಮಾಡಬೇಕು

ಉದಯವಾಹಿನಿ ಚಿತ್ರ • ಉದಯವಾಹಿನಿ, ಬೆಂಗಳೂರು



ಸಿಎಂ ಕುರ್ಚಿ ಗೊಂದಲ ಹೈಕಮಾಂಡ್ ಶೀಘ್ರವೇ ಇತ್ಯರ್ಥ ಮಾಡಬೇಕು ಎಂದು ಕಾಂಗ್ರೆಸ್ ಶಾಸಕ ಬಂಗಾರಪೇಟೆ ನಾರಾಯಣಸ್ವಾಮಿ ಹೈಕಮಾಂಡ್‌ಗೆ ಒತ್ತಾಯಿಸಿದ್ದಾರೆ. ವಿಧಾನಸೌಧದಲ್ಲಿ ಮಾತನಾಡಿದ ಅವರು, ಸಿಎಂ ಕುರ್ಚಿ ವಿಚಾರದಲ್ಲಿ ಗೊಂದಲ ಆಗಬಾರದಿತ್ತು.

ಜನ 136 ಸೀಟು ಕೊಟ್ಟಿದ್ದಾರೆ. 2.5 ವರ್ಷದ ಆದ ಮೇಲೆ ಸಂಪುಟ ಪುನರ್ ರಚನೆ ಮಾಡಿ ಕೆಲಸ ಮಾಡದ ಮಂತ್ರಿಗಳನ್ನು ಕೈ ಬಿಟ್ಟಿದ್ದರೆ ಎಲ್ಲವು ಸರಿ ಆಗ್ತಿತ್ತು. ಸಿಎಂ ಕುರ್ಚಿ ವಿಚಾರ ಜನ ಸಾಮಾನ್ಯರಲ್ಲಿ ಚರ್ಚೆ ಆಗ್ತಿದೆ. ಹೈಕಮಾಂಡ್ ಇದನ್ನ ಇತ್ಯರ್ಥ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ಹೈಕಮಾಂಡ್ ಸಿದ್ದರಾಮಯ್ಯ ಅವರನ್ನಾದ್ರು ಮುಂದುವರೆಸಲಿ ಅಥವಾ ಯಾರನ್ನಾದರೂ ಮಾಡಲಿ. ಆದರೆ ಆದಷ್ಟು ಬೇಗ ಗೊಂದಲ ಸರಿ ಮಾಡಬೇಕು. ಆಡಳಿತ ದೃಷ್ಟಿಯಿಂದ ಈ ಗೊಂದಲ ಇತ್ಯರ್ಥ ಮಾಡಬೇಕು. ಅನೇಕ ಇಲಾಖೆಯಲ್ಲಿ ಸಚಿವರ ಮಾತುಗಳನ್ನು ಅಧಿಕಾರಿಗಳು ಕೇಳುತ್ತಿಲ್ಲ. ಆದಷ್ಟು ಬೇಗ ಇದೆಲ್ಲ ಇತ್ಯರ್ಥ ಮಾಡಬೇಕು ಎಂದಿದ್ದಾರೆ.

ಸಚಿವ ಸಂಪುಟ ವಿಸ್ತರಣೆಗಾಗಿ ದೆಹಲಿಗೆ ಹೋಗೋ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಸಿಎಂ ಸಿದ್ದರಾಮಯ್ಯ ಅವರು ಯಾವಾಗ ರಾಹುಲ್ ಗಾಂಧಿ ಕರೆಯುತ್ತಾರೆ ಅಂತ ಕಾಯ್ತಾ ಇದ್ದಾರೆ.

ರಾಹುಲ್ ಗಾಂಧಿ ವಿದೇಶದಲ್ಲಿದ್ದಾರೆ. ಈ ವಾರದಲ್ಲಿ ಅವರು ವಾಪಸ್ ಆಗಬಹುದು.

## ಒಬ್ಬ ಖದೀಮ ಮೂರು ಮಾದರಿಯಲ್ಲಿ ಕಳ್ಳತನ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ



ಒಬ್ಬನೇ ಕಳ್ಳ ಆದರೆ ಕಳ್ಳತನದ ಶೈಲಿ ಮಾತ್ರ ವಿಭಿನ್ನ. ಬೈಕ್ ಸಿಕ್ಕರೆ ಬೈಕ್, ಗ್ಯಾಸ್ ಸಿಲಿಂಡರ್ ಸಿಕ್ಕರೆ ಸಿಲಿಂಡರ್, ಅಷ್ಟೇ ಏಕೆ ಕಣ್ಣಿಗೆ ಬಿದ್ದ ವಾಹನಗಳ ಬ್ಯಾಟರಿಯನ್ನೂ ಬಿಡದ ಮಲ್ಟಿ ಟ್ಯಾಲೆಂಟ್ ಕಳ್ಳನೊಬ್ಬನನ್ನು ಬೆಂಗಳೂರಿನ ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ ಬಂಧಿತ ಆರೋಪಿಯನ್ನು ಅಭಿಷೇಕ್ ಎಂದು ಗುರುತಿಸಲಾಗಿದೆ. ಸದ್ಯ ಬಂಧಿತ ಆರೋಪಿಯಿಂದ ಒಟ್ಟು 25 ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಒಬ್ಬನೇ ಕಳ್ಳನಿಂದ ಮೂರು ಮಾದರಿಯಲ್ಲಿ ಕಳ್ಳತನ

ಆರಂಭದಲ್ಲಿ ಕೇವಲ ಬೈಕ್ ಕಳ್ಳತನದ ಆರೋಪದ ಮೇಲೆ ಪೊಲೀಸರು ಅಭಿಷೇಕ್‌ನನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದ್ದಾರೆ. ಆದರೆ, ತನಿಖೆ ತೀವ್ರಗೊಂಡಂತೆ ಈತ ಕೇವಲ ಬೈಕ್ ಕಳ್ಳತನಕ್ಕೆ ಮಾತ್ರ ಸೀಮಿತವಾಗಿಲ್ಲ, ಬದಲಿಗೆ ಮೂರು ಭಿನ್ನ ಮಾದರಿಗಳಲ್ಲಿ ಕಳ್ಳತನ ನಡೆಸುತ್ತಿದ್ದ ಖತರ್ನಾಕ್ ಎಂಬ ಆಘಾತಕಾರಿ ವಿಷಯ ಬೆಳಕಿಗೆ ಬಂದಿದೆ. ಆರೋಪಿ ಅಭಿಷೇಕ್ ಕೇವಲ ಬೈಕ್‌ಗಳನ್ನು ಕಳ್ಳತನ ಮಾಡುತ್ತಿರಲಿಲ್ಲ, ಬದಲಿಗೆ ಅವುಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡುತ್ತಿದ್ದ. ಬಳಿಕ ಸಾರ್ವಜನಿಕರನ್ನು ನಂಬಿಸಲು ಒಎಲ್‌ಎಕ್ಸ್ ಹಾಗೂ ಫೇಸ್ ಬುಕ್‌ನಂತಹ ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡು ಬೈಕ್‌ಗಳನ್ನು ಸುಲಭವಾಗಿ ಮಾರಾಟ ಮಾಡಿ ಹಣಗಳಿಸುತ್ತಿದ್ದ. ಬೈಕ್ ಕಳ್ಳತನದ ಜೊತೆಗೆ ಗೃಹ ಬಳಕೆಯ ಗ್ಯಾಸ್ ಸಿಲಿಂಡರ್ ಕಳ್ಳತನ ಮಾಡುತ್ತಿದ್ದ ಎನ್ನುವುದು ಬೆಳಕಿಗೆ ಬಂದಿದೆ. ಸದ್ಯ ಆರೋಪಿಯಿಂದ 12 ಗ್ಯಾಸ್ ಸಿಲಿಂಡರ್‌ಗಳನ್ನು ಜಪ್ತಿ ಮಾಡಲಾಗಿದೆ. ಇದಿಷ್ಟೇ ಅಲ್ಲದೆ, ರಸ್ತೆ ಬದಿ ನಿಲ್ಲಿಸುವ ವಾಹನಗಳ ಬ್ಯಾಟರಿಗಳನ್ನೂ ಈತ ಕಳ್ಳತನ ಮಾಡುತ್ತಿದ್ದ. ಒಂದು ದೊಡ್ಡ ವಾಹನದ ಬ್ಯಾಟರಿಯನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

## ಅಭಿವೃದ್ಧಿ ಹೆಸರಲ್ಲಿ ಹಸಿರು ಬಲಿ?

• ಉದಯವಾಹಿನಿ, ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ಅಸ್ತಿತ್ವದಲ್ಲಿರುವ ಗಿಡಮರಗಳನ್ನು ಉಳಿಸಿಕೊಳ್ಳುವುದು ಒಂದು ಸವಾಲಾಗಿ ಪರಿಣಮಿಸಿದೆ. ಇದೀಗ ಬೆಂಗಳೂರಿನ ಎಚ್.ಎಸ್.ಆರ್. ಲೇಔಟ್‌ನಲ್ಲಿರುವ ಬಿ.ಡಿ.ಎ. ವಾಣಿಜ್ಯ ಸಂಕೀರ್ಣದ ಸುತ್ತಲೂ ಇರುವ 180 ಮರಗಳಿಗೆ ಕುತ್ತು ಎದುರಾಗಿದೆ. ಶಿಥಿಲಾವಸ್ಥೆಯಲ್ಲಿದ್ದ ಹಳೆಯ ವಾಣಿಜ್ಯ ಸಂಕೀರ್ಣವನ್ನು ಕೆಡವಿ ಹೊಸದಾಗಿ ನಿರ್ಮಿಸಲು ಬಿ.ಡಿ.ಎ. ತೀರ್ಮಾನಿಸಿದೆ. ಸಂಕೀರ್ಣದ ಆವರಣದಲ್ಲಿರುವ ಸುಮಾರು 180 ವಿವಿಧ ಜಾತಿಯ ಮರಗಳನ್ನು ಕಡಿಯಲು ಅನುಮತಿ ಕೋರಿ ಬಿ.ಡಿ.ಎ. ಅಧಿಕಾರಿಗಳು ಜಿ.ಬಿ.ಎ. ಅರಣ್ಯ ವಿಭಾಗಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಸಾರ್ವಜನಿಕರು ಮತ್ತು ಪರಿಸರ ಪ್ರೇಮಿಗಳಿಂದ ತೀವ್ರ ಅಸಮಾಧಾನ ವ್ಯಕ್ತವಾಗಿದೆ. ಮರಗಳಿದ್ದ ಸ್ಥಳದಲ್ಲಿ ತಾತ್ಕಾಲಿಕ ಅಂಗಡಿಗಳನ್ನು ನಿರ್ಮಿಸುವಾಗ ಬಿ.ಡಿ.ಎ. ಅನುಮತಿ ಇಲ್ಲದೆ ಎರಡು ಮರಗಳನ್ನು ಕಡಿದ ಆರೋಪವೂ ಕೇಳಿಬಂದಿದೆ.

# ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ

### ರಾಜ್ಯ ಯುವ ಕಾಂಗ್ರೆಸ್ ಸಮಿತಿ ಬೃಹತ್ ಪ್ರತಿಭಟನೆ

# ರಾಜಭವನ ಚಲೋ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ



ಫ್ರೀಡಂ ಪಾರ್ಕ್ ಅವರಣದಲ್ಲಿ ಕರ್ನಾಟಕ ರಾಜ್ಯ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಕೇಂದ್ರ ಸರ್ಕಾರದ ಆಡಳಿತ ವೈಫಲ್ಯ ಮತ್ತು ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಬೃಹತ್ ಪ್ರತಿಭಟನೆ ಮತ್ತು ರಾಜಭವನ ಚಲೋ ಕಾರ್ಯಕ್ರಮ ಮತ್ತು ಮಾಜಿ ಪ್ರಧಾನಿ ದಿ.ರಾಜೀವ್ ಗಾಂಧಿರವರ ಪುಣ್ಯಸ್ಮರಣೆ ಕಾರ್ಯಕ್ರಮ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರು, ರಾಜ್ಯ ಉಸ್ತುವಾರಿಗಳಾದ ರಣದೀಪ್ ಸಿಂಗ್ ಸುರ್ಜೆವಾಲ, ಅಭಿಷೇಕ್ ದತ್ತ, ಸಚಿವರುಗಳಾದ ಕೃಷ್ಣಬೈರೇಗೌಡ, ಬೈರತಿ ಸುರೇಶ್, ಶರಣಪ್ರಕಾಶ ಪಾಟೀಲ್, ಈಶ್ವರ್ ಖಂಡ್ರೆ, ಮಧು ಬಂಗಾರಪ್ಪ, ಸುಧಾಕರ್, ಶಾಸಕರುಗಳಾದ ರಿಜ್ವಾನ್ ಅರ್ಷದ್, ಪ್ರದೀಪ್ ಈಶ್ವರ್, ಅಖಿಲ ಭಾರತ ಯುವ ಕಾಂಗ್ರೆಸ್ ಅಧ್ಯಕ್ಷರಾದ ಉದಯಭಾನು ಚಿಬ್ ರಾಜ್ಯ ಯುವ ಕಾಂಗ್ರೆಸ್ ಸಮಿತಿ ರಾಜ್ಯಾಧ್ಯಕ್ಷರಾದ ಮಂಜುನಾಥ್ ಗೌಡ ಹೆಚ್.ಎಸ್. ಮತ್ತು ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ನಿಗಮ್ ಬಂಡಾರಿ, ಐ.ವೈ.ಸಿ. ಕಾರ್ಯದರ್ಶಿ ತಾರೀಖ್ ಭಗವಾನ್ ರವರು ಮಾಜಿ ಪ್ರಧಾನಿ ರಾಜೀವ್ ಗಾಂಧಿರವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಪ್ರತಿಭಟನೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

**ದೇಶದ ಮಕ್ಕಳ ಭವಿಷ್ಯ ಜೊತೆಯಲ್ಲಿ ಬಿಜೆಪಿ ಕೇಂದ್ರ ಸರ್ಕಾರ ಆಟವಾಡುತ್ತಿದೆ. ಪ್ರಧಾನಿ ನರೇಂದ್ರಮೋದಿರವರ ಸ್ನೇಹಿತರ ಒಳಿತಿಗಾಗಿ ದೇಶವನ್ನು ಮಾರಾಟ ಮಾಡುತ್ತಿದ್ದಾರೆ. ದೆಹಲಿ ವಿದ್ಯಾರ್ಥಿ ಕಳೆದ ವರ್ಷ ನೀಟ್ ಪರೀಕ್ಷೆಯಲ್ಲಿ ನಾಲ್ಕು ಅಂಕ ಕಡಿಮೆ ಬಂದಿತ್ತು ಈ ಬಾರಿ ಉತ್ತಮ ಅಭ್ಯಾಸ ಮಾಡಿದ್ದ ಅದರೆ ನೀಟ್ ಪರೀಕ್ಷೆ ರದ್ದಿನಿಂದ ಅತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ. ಕಾಂಗ್ರೆಸ್ ಪಕ್ಷ ನಿಷ್ಠಾವಂತ ಕಾರ್ಯಕರ್ತರು ಹುಲಿಗಳಂತೆ ಇದರ ವಿರುದ್ಧ ಹೋರಾಟ ಮಾಡಲಾಗುತ್ತದೆ.**
**ಉದಯಭಾನು ಚಿಬ್**



### ಬಿಜೆಪಿ ಸರ್ಕಾರ ಪೇಪರ್ ಲೀಕ್ ಹಗರಣ ಖ್ಯಾತಿ ಪಡೆದಿದೆ

**ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ವಿರುದ್ಧ ರಾಜ್ಯಾದ್ಯಂತ ಬಿಜೆಪಿ ಸರ್ಕಾರದ ವಿರುದ್ಧ ಹೋರಾಟ ಮಾಡಲಾಗುತ್ತಿದೆ. ನೀಟ್ ಪರೀಕ್ಷೆ ರದ್ದತಿಯಿಂದ 5ವಿದ್ಯಾರ್ಥಿಗಳು ಅತ್ಮಹತ್ಯೆ ಮಾಡಿಕೊಂಡಿದ್ದಾರೆ. ರಾಜ್ಯದಲ್ಲಿ ನೀಟ್ ಪರೀಕ್ಷೆಯಲ್ಲಿ 1ಲಕ್ಷ 80ಸಾವಿರ ವಿದ್ಯಾರ್ಥಿಗಳು ಬರೆದಿದ್ದರು. ಅಂಬೇಡ್ಕರ್ ಸಂವಿಧಾನ ಕೊಟ್ಟಿರುವುದು ಹೋರಾಟ ಮಾಡಲು ಅನ್ಯಾಯ ವಿರುದ್ಧ ನಮ್ಮಹೋರಾಟ ನಿರಂತರ ಮಾಡುವುದಾಗಿ ಹೇಳಿದರು. ಮಂಜುನಾಥಗೌಡ ಹೆಚ್.ಎಸ್.**

ಮಾಜಿ ಲೋಕಸಭಾ ಸದಸ್ಯರಾದ ನಾರಾಯಣಸ್ವಾಮಿ,ಮಾಜಿ ವಿಧಾನಪರಿಷತ್ ಸದಸ್ಯ ನಾರಾಯಣಸ್ವಾಮಿ, ಅಬ್ದುಲ್ ವಾಜಿದ್, ವಿ.ಎಸ್.ಉಗ್ರಪ್ಪ, ಜೆ.ಹುಚ್ಚಪ್ಪ,ರಾಮಚಂದ್ರಪ್ಪ, ರವರು ಭಾಗವಹಿಸಿದ್ದರು.

**ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ವಿರುದ್ಧ ಯುವ ಕಾಂಗ್ರೆಸ್ ಬೃಹತ್ ಮಟ್ಟದ ಹೋರಾಟ ಹಮ್ಮಿಕೊಂಡಿದ್ದಾರೆ. ಪ್ರದಾನಿ ಮೋದಿ, ಕೇಂದ್ರ ಶಿಕ್ಷಣ ಸಚಿವರಾದ ಧರ್ಮೇಂದ್ರ ಪ್ರಧಾನ್ ರವರ ನೀಟ್ ಮರು ಪರೀಕ್ಷೆ ಮಾಡುತ್ತಿದ್ದಾರೆ. ನೀಟ್ ಪ್ರಶ್ನೆ ಸೋರಿಕೆಯನ್ನು ಮೋದಿ, ಧರ್ಮೇಂದ್ರ ಪ್ರಧಾನ್ ರವರ ಹೊಣೆ ಹೋರಬೇಕು. ಸಿಇಟಿ ಪರೀಕ್ಷೆ ಚನ್ನಾಗಿ ನಡೆಯುತ್ತಿತ್ತು. 2016ರಲ್ಲಿ ನೀಟ್ ಪದ್ದತಿ ಜಾರಿಗೆ ಬಂತು 10ವರ್ಷಗಳಲ್ಲಿ 5 ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ನೀಟ್ ಪರೀಕ್ಷೆ ಬರೆಯಬೇಕಾದರೆ ಹಲವಾರು ತಿಂಗಳ ಕಾಲ ತಯಾರಿ ಮಾಡಿಕೊಂಡಿರುತ್ತಾರೆ. ಸಿದ್ದರಾಮಯ್ಯ ಮುಖ್ಯಮಂತ್ರಿ**

**ರಾಜ್ಯ ಯುವ ಕಾಂಗ್ರೆಸ್ ನೀಟ್ ಪ್ರಶ್ನೆ ಸೋರಿಕೆ ವಿರುದ್ಧ ಸಂಘಟಿತ ಹೋರಾಟ ಮಾಡುತ್ತಿದೆ. ಕಳೆದ 12ವರ್ಷಗಳಲ್ಲಿ ಮೋದಿ ಸರ್ಕಾರ ಆಡಳಿತದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಮಾಫಿಯದವರ ಕೈಯಲ್ಲಿ ಇದೆ. ಬಿಜೆಪಿ ಸರ್ಕಾರ ಪೇಪರ್ ಲೀಕ್ ಹಗರಣ ಖ್ಯಾತಿ ಪಡೆದಿದೆ. ಹಲವಾರು ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಬಿಜೆಪಿ ಸರ್ಕಾರ ಅಡಿಯಲ್ಲಿ ಈ ಪ್ರಕರಣ ನಡೆಯುತ್ತಿದೆ. ಪೇಪರ್ ಲೀಕ್ ಚರ್ಚಾ ಆರಂಭ ಮಾಡಬೇಕು ಪ್ರಧಾನಿಗಳು. ವ್ಯಾಪಂ ಹಗರಣದಿಂದ ಮಧ್ಯಪ್ರದೇಶ ನೂರು ಯುವಕರು ಆತ್ಯಹತ್ಯೆ ಮಾಡಿಕೊಂಡರು. ಎಲ್ಲಾ ಪರೀಕ್ಷೆಗಳು ಲೀಕ್ ಆಗುತ್ತಿರುವುದು ಆಡಳಿತ ವೈಫಲ್ಯ. ಬಿಜೆಪಿ ಸರ್ಕಾರಗಳು ಇರುವ ರಾಜ್ಯವಾದ ರಾಜಸ್ತಾನ್, ಹರಿಯಾಣ, ಗುಜರಾತ್, ಉತ್ತರಪ್ರದೇಶ, ಮಧ್ಯಪ್ರದೇಶಗಳಲ್ಲಿ ಸೋರಿಕೆಯಾಗಿದೆ. 2024ರಲ್ಲಿಯೂ ಸಹ ನೀಟ್ ಪರೀಕ್ಷೆ ಸೋರಿಕೆಯಾಗಿತ್ತು. ಯುವಕರ ಭವಿಷ್ಯ ಕುರಿತು ಚಿಂತನೆ ಮಾಡಬೇಕಾದ ಸಂದರ್ಭ ಬಂದಿದೆ. 2026ನೀಟ್ ಪರೀಕ್ಷೆಯಲ್ಲಿ ಹಗಲು ದರೋಡೆ ಮಾಡಿದ್ದಾರೆ. ಪ್ರಶ್ನೆ ಪತ್ರಿಕೆ ಸೋರಿಕೆಯಾಯಿತು. ರಣದೀಪ್ ಸಿಂಗ್ ಸುರ್ಜೆವಾಲ**

## ಬೆಂಗಳೂರಲ್ಲಿ ಕಾಲೇಜು ಯುವತಿ ಮೇಲೆ ಅತ್ಯಾಚಾರ ಆರೋಪ

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಧಾನಿ ಬೆಂಗಳೂರಲ್ಲಿ ಹೆಣ್ಮಕ್ಕಳು ಓಡಾಡೋದೆ ಕಷ್ಟಕಷ್ಟವಾಗಿಬಿಟ್ಟಿದೆ. ಇನ್ನು ಆಫೀಸ್ ಕೆಲಸ ಅಂತ ರಾತ್ರಿ ಹೊತ್ತು ಒಂಟಿಯಾಗಿ ನಡೆದಾಡೋ ಮಹಿಳೆಯರ ಕಥೆ ಹೇಳತೀರದಾಗಿದೆ. ಇದೀಗ ಸಿಲಿಕಾನ್ ಸಿಟಿಯಲ್ಲಿ ಮತ್ತೊಂದು ಹೀನ ಕೃತ್ಯ ನಡೆದಿದೆ. ಕಾಲೇಜು ಮುಗಿಸಿ ಮೋಮೊಸ್ ಅಂಗಡಿಗೆ ಪಾರ್ಟ್ ಟೈಮ್‌ಕೆಲಸಕ್ಕೆ ಹೋಗ್ತಿದ್ದ ಯುವತಿ ಮೇಲೆ ಅತ್ಯಾಚಾರವೆಸಗಿರೋ ಆರೋಪ ಕೇಳಿ ಬಂದಿದೆ. ಬೆಂಗಳೂರಿನ ಮಡಿವಾಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಮೇ 11ರಂದು ಕಾಲೇಜು ವಿದ್ಯಾರ್ಥಿನಿ ಮೇಲೆ ಹೈನಾಸ್ ಎಂಬಾತ ಅತ್ಯಾಚಾರವೆಸಗಿದ್ದಾನೆ ಎನ್ನುವ ಆರೋಪ ಕೇಳಿ ಬಂದಿದೆ. ಯುವತಿ ಕಾಲೇಜು ಮುಗಿದ ಬಳಿಕ ಬಿಡುವಿನ ವೇಳೆ ಮೋಮೊಸ್ ಅಂಗಡಿಯಲ್ಲಿ ಕೆಲಸ ಮಾಡ್ತಿದ್ದಳಂತೆ. ಈ ವೇಳೆ ಪರಿಚಯವಾಗಿದ್ದ ಹೈನಾಸ್ ಎಂಬಾತನೇ ತನ್ನ ಮೇಲೆ ಅತ್ಯಾಚಾರ ವೆಸಗಿದ್ದಾನೆ ಎಂದು ಯುವತಿ ಆರೋಪ ಮಾಡಿದ್ದಾರೆ. ಮೋಮೊಸ್ ಅಂಗಡಿ ಮಾಲೀಕರಾದ ಗೋಶ್ ಮತ್ತು ಅತುಲ್ ಎಂಬುವವರು ಅಂಗಡಿ ಮಾರಾಟಕ್ಕೆ ಮುಂದಾಗಿದ್ದರಂತೆ. ಈ ವೇಳೆ ಮಧ್ಯವರ್ತಿಯಾಗಿ ಬಂದಿದ್ದ ಹೈನಾಸ್ ಎಂಬಾತ ಯುವತಿಯನ್ನ ಪರಿಚಯ ಮಾಡಿಕೊಂಡಿದ್ದ ಎನ್ನಲಾಗ್ತಿದೆ.

## ಕು|| ಭೂಮಿಕಾ ಮಧುಸೂದನ್ ಅವರಿಗೆ ಆರ್ಯಭಟ ಅಂತಾರಾಷ್ಟ್ರೀಯ ಪ್ರಶಸ್ತಿ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಸುಪ್ರಸಿದ್ಧ ಗಾಯಕಿ, ಕರುನಾಡ ಗಾನತಾರೆ ಡಾ|| ಭೂಮಿಕ ಎಲ್ ಮಧುಸೂದನ್ ಅವರಿಗೆ, ಭಾರತೀಯ ಶಾಸ್ತ್ರೀಯ ಸಂಗೀತ ಹಾಗೂ ಹಿನ್ನೆಲೆ ಗಾಯನ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಪ್ರತಿಷ್ಠಿತ ಆರ್ಯಭಟ ಅಂತಾರಾಷ್ಟ್ರೀಯ ಪ್ರಶಸ್ತಿ (2026) ಲಭಿಸಿದೆ. ಇದೇ ಮೇ 23, ಶನಿವಾರ ಸಂಜೆ 6-00ಕ್ಕೆ ನಗರದ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

# ಜಯನಗರದಲ್ಲಿ ಮತ್ತೊಮ್ಮೆ ಸಾಂಸ್ಕೃತಿಕ ನಿನಾದ

### 'ಪರಮ್ ವಿಹಾರ 12' ವೇದಿಕೆಯಲ್ಲಿ ಭಾವಗೀತೆ-ನೃತ್ಯ ಸಂಗಮ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ




ರಾಜಧಾನಿಯ ಸಾಂಸ್ಕೃತಿಕ ಕೇಂದ್ರಗಳಲ್ಲೊಂದಾದ ಜಯನಗರದಲ್ಲಿ ಮತ್ತೊಂದು ಆಕರ್ಷಕ ಕಲಾ ಸಂಜೆ ಅನಾವರಣಗೊಳ್ಳಲು ಸಿದ್ಧವಾಗಿದೆ. ಪರಮ್ ಫೌಂಡೇಶನ್' ವತಿಯಿಂದ ಆಯೋಜಿಸಲಾಗುತ್ತಿರುವ ಸರಣಿ ಕಾರ್ಯಕ್ರಮಗಳ ಭಾಗವಾಗಿ ಪರಮ್ ವಿಹಾರ 12ಇದೇ ಮೇ 24ರ ಭಾನುವಾರ ಸಂಜೆ 6ಗಂಟೆಗೆ ಜಯನಗರದ ಸನಾತನ ಕಲಾಕ್ಷೇತ್ರ ಸಭಾಂಗಣದಲ್ಲಿ ನಡೆಯಲಿದೆ.

ಉದಯೋನ್ಮುಖ ಹಾಗೂ ಪ್ರತಿಭಾವಂತ ಕಲಾವಿದರಿಗೆ ವೇದಿಕೆ ಕಲ್ಪಿಸುವ ಈ ಅಪರೂಪದ ಗಾನ-ನೃತ್ಯ ಜುಗಲ್ಬಂದಿಗೆ ಬೆಂಗಳೂರಿನ ಕಲಾಪ್ರೇಮಿಗಳು ಸಾಕ್ಷಿಯಾಗಲಿದ್ದಾರೆ. ಸುಶ್ರಾವ್ಯ ಕಂಠದಲ್ಲಿ ಮೂಡಲಿರುವ ಭಾವಗೀತೆ ಲಹರಿ ಕಾರ್ಯಕ್ರಮದ ಆರಂಭದಲ್ಲಿ ಶರಧಿ ಸ್ಕೂಲ್ ಆಫ್ ಮ್ಯೂಸಿಕ್‌ನ ಗುರು ಸುನಿತಾ ಮುರಳಿ ಅವರ ಶಿಷ್ಯವೃಂದದಿಂದ ಮಂತ್ರಮುಗ್ಧಗೊಳಿಸುವ ಭಾವಗೀತೆಗಳ ಗಾಯನ ಪ್ರಸ್ತುತಿ ನಡೆಯಲಿದೆ. ಹಿತವಾದ ಸಾಹಿತ್ಯ ಮತ್ತು ಮಧುರ ನಾದದ ಮೂಲಕ ಶ್ರೋತೃಗಳನ್ನು ರಂಜಿಸಲಿರುವ ಈ ಕಛೇರಿಗೆ ಕೀಬೋರ್ಡ್‌ನಲ್ಲಿ ದುಷ್ಯಂತ್ ಹಾಗೂ ರಿದಮ್ ಪ್ಯಾಡ್‌ನಲ್ಲಿ ಮಂಜುನಾಥ್ ಭಟ್ ಸಾಥ್ ನೀಡಲಿದ್ದಾರೆ.

ಅನನ್ಯ ಗಣೇಶ್ ಅವರ ಭರತನಾಟ್ಯ ವೈಭವ ಗಾಯನದ ನಾದಲಹರಿಯ ನಂತರ ಶಾಸ್ತ್ರೀಯ ನೃತ್ಯದ ನಯನಮನೋಹರ ಪ್ರದರ್ಶನ ಸಭಿಕರನ್ನು ಕಣ್ಮನ ಸೆಳೆಯಲಿದೆ. ನಾಟ್ಯಲಹರಿ ಸಂಸ್ಥೆಯ ನಿರ್ದೇಶಕರಾದ ಗುರು ಮಮತಾ ಕಾರಂತ್ ಅವರ ಶಿಷ್ಯೆ ಕುಮಾರಿ ಅನನ್ಯ ಗಣೇಶ್ ಅವರಿಂದ ಭರತನಾಟ್ಯದ ಏಕವ್ಯಕ್ತಿ) ನೃತ್ಯ ಪ್ರದರ್ಶನ ನಡೆಯಲಿದೆ. ಸಾಂಪ್ರದಾಯಿಕ ನೃತ್ಯದ ಘನತೆ, ಲಾಸ್ಯ ಮತ್ತು ಕಲಾತ್ಮಕ ಶಿಸ್ತನ್ನು ತಮ್ಮ ಅಭಿನಯದ ಮೂಲಕ ಅನನ್ಯ ಅವರು ರಂಗದ ಮೇಲೆ ತರಲಿದ್ದಾರೆ. ಇದರ ಜೊತೆಗೆ 'ನಾಟ್ಯಲಹರಿ ನೃತ್ಯ ಶಾಲೆಯ ಇತರ ವಿದ್ಯಾರ್ಥಿಗಳಿಂದಲೂ ಆಕರ್ಷಕ ಸಮೂಹ ನೃತ್ಯ ಪ್ರದರ್ಶನಗಳು ಮೂಡಿಬರಲಿವೆ. ಪರಮ್ ಫೌಂಡೇಶನ್ ನಿಂದ 12ನೇ ಆವೃತ್ತಿಯ ಯಶಸ್ವಿ ಹೆಜ್ಜೆ ಹೊಸ ತಲೆಮಾರಿನ ಕಲಾ ಪ್ರತಿಭೆಗಳನ್ನು ಪ್ರೋತ್ಸಾಹಿಸುತ್ತಾ ಬಂದಿರುವ ಪರಮ್ ಫೌಂಡೇಶನ್‌ನ 12ನೇ ಆವೃತ್ತಿಯ ಕಾರ್ಯಕ್ರಮ ಇದಾಗಿದೆ. ಈ ಕಾರ್ಯಕ್ರಮಕ್ಕೆ ಬೆಂಗಳೂರಿನ ನಾನಾ ಭಾಗಗಳಿಂದ ಸಂಗೀತ ಮತ್ತು ನೃತ್ಯ ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಲಾವಿದರನ್ನು ಹುರಿದುಂಬಿಸಬೇಕಾಗಿ ಸಂಘಟಕರು ಕೋರಿದ್ದಾರೆ.

## ತಪ್ಪಿದ ಭಾರೀ ಅನಾಹುತ

• ಉದಯವಾಹಿನಿ, ದೇವನಹಳ್ಳಿ

ದೆಹಲಿಯಿಂದ ಬೆಂಗಳೂರಿಗೆ ಆಗಮಿಸುತ್ತಿದ್ದ ಏರ್ ಇಂಡಿಯಾ ಸಂಸ್ಥೆಯ ವಿಮಾನವೊಂದು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲ್ಯಾಂಡಿಂಗ್ ವೇಳೆ ರನ್‌ವೇಗೆ ಅದರ ಹಿಂಭಾಗ ನೆಲಕ್ಕಪ್ಪಳಿಸಿದ ಘಟನೆ ನಡೆದಿದೆ. ಅದೃಷ್ಟವಶಾತ್ ವಿಮಾನದಲ್ಲಿದ್ದ ಪ್ರಯಾಣಿಕರು ಸೇರಿದಂತೆ ಸಿಬ್ಬಂದಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ವರದಿ ಆಗಿದೆ. ಏರ್ ಇಂಡಿಯಾ ಸಂಸ್ಥೆಯ 2651 ಸಂಖ್ಯೆಯ ವಿಮಾನ ಇಂದು ದೆಹಲಿಯಿಂದ ಬೆಂಗಳೂರಿಗೆ ಆಗಮಿಸಿತ್ತು. ಆದರೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲ್ಯಾಂಡಿಂಗ್ ವೇಳೆ ಉಂಟಾದ ತಾಂತ್ರಿಕ ಅಡಚಣೆಯಿಂದ ಅವಘಡ ಸಂಭವಿಸಿದೆ. **ಎನ್‌ಡಿ ಟಿವಿ ವರದಿ ಪ್ರಕಾರ,** ಈ ವಿಮಾನಕ್ಕೂ ಮುನ್ನ ಸರಕು ಸಾಗಣೆ ವಿಮಾನವೊಂದು ಅದೇ ರನ್‌ವೇಯಿಂದ ಟೇಕ್ ಆಫ್ ಆಗಿತ್ತು. ಇದರಿಂದಾಗಿ ವಾತಾವರಣದಲ್ಲಿ ಉಂಟಾದ ಗಾಳಿಯ ತೀವ್ರ ವೇಗದಿಂದ ಏರ್ ಇಂಡಿಯಾ ವಿಮಾನದ ಸಮತೋಲನ ತಪ್ಪಿದೆ.

ಹೀಗಿರುವಾಗ ಪೈಲಟ್ ವಿಮಾನವನ್ನು ಪುನಃ ಹಾರಾಟಕ್ಕೆ ಪ್ರಯತ್ನಿಸಿದ್ದಾರೆ. ಈ ವೇಳೆ ವಿಮಾನದ ಹಿಂಭಾಗ ರನ್‌ವೇಗೆ ಅಪ್ಪಳಿಸಿದೆ. ಇನ್ನು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ ಈ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ. ತಾಂತ್ರಿಕ ಸಮಸ್ಯೆನಾ ಅಥವಾ ಪೈಲಟ್‌ಗಳ ಎಡವಟ್ಟ ಎನ್ನುವ ಬಗ್ಗೆ ತನಿಖೆ ನಡೆಯಲಿದೆ. ತನಿಖೆ ಮುಗಿಯುವವರೆಗೆ ವಿಮಾನ ಚಲಾಯಿಸುತ್ತಿದ್ದ ಪೈಲಟ್‌ಗಳನ್ನು ಕರ್ತವ್ಯದಿಂದ ವಜಾಗೊಳಿಸಲಾಗಿದೆ.

# ನಿಪ್ಪಾಣಿಯಲ್ಲಿ ಬಿಜೆಪಿ, ಕಾಂಗ್ರೆಸ್ ಕಿತ್ತಾಟ

### ಶಾಸಕಿ ಶಶಿಕಲಾ ಜೊಲ್ಲೆಯಿದ್ದ ಕಾರ್ಯಮದಲ್ಲಿಯೇ ಗಲಾಟೆ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ



ನಿಪ್ಪಾಣಿ ಮತಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಕಿತ್ತಾಟ ನಡೆದಿದ್ದು, ಶಾಸಕಿ ಶಶಿಕಲಾ ಜೊಲ್ಲೆ ಕಾರ್ಯಕ್ರಮಕ್ಕೆ ನುಗ್ಗಿ ಕಾಂಗ್ರೆಸ್ ಕಾರ್ಯಕರ್ತರು ಗಲಾಟೆ ನಡೆಸಿರುವ ಆರೋಪ ಕೇಳಿಬಂದಿದೆ. ನಿಪ್ಪಾಣಿ ತಾಲ್ಲೂಕಿನ ಪಟ್ಟಣಕುಡಿ ಗ್ರಾಮದಲ್ಲಿ ನಡೆಯುತ್ತಿದ್ದ ಮನೆ ಹಂಚಿಕೆ ಕಾರ್ಯಕ್ರಮಕ್ಕೆ ಎಂಟ್ರಿಕೊಟ್ಟ ಚಿಕ್ಕೋಡಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ ಹಾಗೂ ಬೆಂಬಲಿಗರು ವಾಗ್ವಾದ ನಡೆಸಿದ್ದಾರೆ.

ಪರಿಣಾಮ ಆಶ್ರಯ ಯೋಜನೆ ಅಡಿಯಲ್ಲಿ ಫಲಾನುಭವಿಗಳಿಗೆ ಲಾಟರಿ ಮೂಲಕ 950 ಮನೆಗಳ ಹಂಚಿಕೆ ಕಾರ್ಯಕ್ರಮದಲ್ಲಿ ಗದ್ದಲ ಉಂಟಾಗಿದೆ. ಆಶ್ರಯ ಕಮಿಟಿ ಅಧಿಕಾರಿಗಳು, ಸದಸ್ಯರ ಸಮ್ಮುಖದಲ್ಲಿ ಲಾಟರಿ ಮೂಲಕ ಮನೆಗಳ ವಿತರಣಾ ಕಾರ್ಯಕ್ರಮ ನಡೆಸಲಾಗುತ್ತಿತ್ತು. ಈ ವೇಳೆ ಏಕಾ ಏಕಿ ಬೆಂಬಲಿಗರ ಜೊತೆಗೆ ಕಾರ್ಯಕ್ರಮಕ್ಕೆ ನುಗ್ಗಿದ ಲಕ್ಷ್ಮಣರಾವ್ ಚಿಂಗಳೆ, ಬೇಕಾದವರಿಗೆ ನೀವು ಮನೆಗಳನ್ನ ಹಂಚಲು ಮುಂದಾಗಿದ್ದೀರಿ. ಪರಿಣಾಮ ಆಶ್ರಯ ಯೋಜನೆ ಮನೆಗಳ ಹಂಚಿಕೆಯಲ್ಲಿ ತಾರತಮ್ಯ ನಡೆದಿದೆ ಎಂದು ಶಾಸಕಿಗೆ ಜೊಲ್ಲೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಾರ್ಯಕ್ರಮಕ್ಕೆ ಸಂಸದೆ ಪ್ರಿಯಾಂಕಾ ಜಾರಕಿಹೊಳಿಯನ್ನ ಏಕೆ ಕರೆದಿಲ್ಲಾ ಎಂದು ಪ್ರಶ್ನಿಸಿದ್ದು, ಈ ವೇಳೆ ಶಾಸಕಿ ಜೊಲ್ಲೆ ಹಾಗೂ ಚಿಂಗಳೆ ನಡುವೆ ವಾಗ್ವಾದ ನಡೆದಿದೆ.

### ಕಣ್ಣೀರು ಹಾಕಿದ ಶಶಿಕಲಾ ಜೊಲ್ಲೆ

**ಪರಿಸ್ಥಿತಿ ಬಿಗಡಾಯಿಸುತ್ತಿದ್ದಂತೆ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆಯೂ ವಾಗ್ವಾದ ಶುರುವಾಗಿದ್ದು, ಕಾರ್ಯಕರ್ತರು ತಳ್ಳಾಡಿಕೊಂಡಿದ್ದಾರೆ.**

**ವಾಗ್ವಾದ ತಾರಕ್ಕೆರುತ್ತಿದ್ದಂತೆ ಲಕ್ಷ್ಮಣರಾವ್ ಚಿಂಗಳೆಯನ್ನ ಪೋಲಿಸರು ಕರೆದುಕೊಂಡು ಹೋಗಿದ್ದು, ಗದ್ದಲ ಹಿನ್ನೆಲೆ ಮನೆಗಳ ಹಂಚಿಕೆ ಕಾರ್ಯಕ್ರಮವನ್ನು ಅಧಿಕಾರಿಗಳು ಮುಂದೂಡಿದ್ದಾರೆ. ಇದೇ ವೇಳೆ ಭಾವುಕರಾದ ಶಾಸಕಿ ಶಶಿಕಲಾ ಜೊಲ್ಲೆ ಭಾವುಕರಾಗಿ ಕಣ್ಣೀರು ಹಾಕಿದ ಪ್ರಸಂಗವೂ ನಡೆದಿದೆ. ಕಾರ್ಯಕ್ರಮ ರದ್ದಾದ ಬಳಿಕ ಮಹಿಳೆಯರ ಜೊತೆಗೆ ಮಾತನಾಡಿದ ಶಶಿಕಲಾ ಜೊಲ್ಲೆ, ಚಿಕ್ಕ ಮಕ್ಕಳ ಜೊತೆ ಮನೆ ಕನಸು ಕಟ್ಟಿಕೊಂಡು ನೀವು ಇಲ್ಲಿಗೆ ಬಂದಿದ್ದೀರಿ. ಆದರೆ ರಾಜಕೀಯ ಮಾಡಿ ಕಾರ್ಯಕ್ರಮವನ್ನ ಹಾಳು ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.**

## ಬಿಜೆಪಿ ರಾಜ್ಯಾಧ್ಯಕ್ಷರ ಆಯ್ಕೆಗೆ ಪ್ರಕ್ರಿಯೆ ಶುರು

• ಉದಯವಾಹಿನಿ, ಬೆಂಗಳೂರು

ಬಿಜೆಪಿ ರಾಜ್ಯಾಧ್ಯಕ್ಷರ ಆಯ್ಕೆಗೆ ಪ್ರಕ್ರಿಯೆ ಆರಂಭವಾಗಿದ್ದು, ಹೈಕಮಾಂಡ್ 30ಕ್ಕೂ ಹೆಚ್ಚು ರಾಜ್ಯ ನಾಯಕರಿಂದ ಅಭಿಪ್ರಾಯ ಸಂಗ್ರಹಿಸಿದೆ. ರಾಷ್ಟ್ರೀಯ ಬಿಜೆಪಿ ಸಂಘಟನಾ ಜಂಟಿ ಕಾರ್ಯದರ್ಶಿ ಶಿವಪ್ರಕಾಶ್, ರಾಷ್ಟ್ರೀಯ ಬಿಜೆಪಿ ಉಪಾಧ್ಯಕ್ಷ ಬೈಜಯಂತ್ ಪಾಂಡಾ, ರಾಜ್ಯ ಉಸ್ತುವಾರಿ ರಾಧಾ ಮೋಹನ್ ಅಗರವಾಲ್ ನೇತೃತ್ವದಲ್ಲಿ ಪಟ್ಟಿ ತಯಾರಿಸಿ 30ಕ್ಕೂ ಹೆಚ್ಚು ರಾಜ್ಯ ನಾಯಕರಿಂದ ಅಭಿಪ್ರಾಯ ಸಂಗ್ರಹಿಸಿದ್ದಾರೆ.

ಅಭಿಪ್ರಾಯ ಸಂಗ್ರಹದ ವೇಳೆ ಮೂರು ಪ್ರಶ್ನೆ ಕೇಳಿದ್ದಾರೆ ಎನ್ನಲಾಗಿದೆ. ರಾಜ್ಯಾಧ್ಯಕ್ಷರು ಮುಂದುವರಿಬೇಕಾ? ಏಕೆ? ರಾಜ್ಯಾಧ್ಯಕ್ಷರು ಬದಲಾಗಬೇಕಾ? ಏಕೆ? ಬದಲಾಗಬೇಕಾದರೆ ಹೊಸ ರಾಜ್ಯಾಧ್ಯಕ್ಷರು ಯಾರಾಗಬೇಕು? ಯಾವ ಮಾನದಂಡದಲ್ಲಿ ಹೆಸರು ಹೇಳ್ತಿದ್ದೀರಾ? ಎಂದು ಪ್ರಶ್ನೆಗಳನ್ನ ಕೇಳಿ ಬಿಜೆಪಿ ಹೈಕಮಾಂಡ್ ನಾಯಕರು ಅಭಿಪ್ರಾಯ ಸಂಗ್ರಹಿಸಿದ್ದಾರೆ.

ಬಹಳ ದಿನಗಳ ಬಳಿಕ ಬಿಜೆಪಿ ಕಚೇರಿಯಲ್ಲಿ ಪ್ರತ್ಯಕ್ಷವಾದ ರಮೇಶ್ ಜಾರಕಿಹೊಳಿ ಅಧ್ಯಕ್ಷರ ಆಯ್ಕೆ ಬಗ್ಗೆ ಅಭಿಪ್ರಾಯ ಹೇಳಿದ್ದಾರೆ.

# ಕೋಡಿಹಳ್ಳಿ ಚಂದ್ರಶೇಖರ್ ಬಣದ ಕೆಐಎಡಿಬಿ ರೈತಪರ ಹೋರಾಟಕ್ಕೆ ಚಿಕ್ಕಬಳ್ಳಾಪುರ ಆದಿಚುಂಚನಗಿರಿ ಮಂಗಳಾನಾಥ ಶ್ರೀಮಠದ ಅಭಯ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಹೋಬಳಿಯ 13 ಹಳ್ಳಿಗಳಲ್ಲಿ ರೈತರ ಫಲವತ್ತಾದ ಕೃಷಿ ಭೂಮಿ ಸರಿಸುಮಾರು 2823 ಎಕರೆ ಭೂಮಿಯನ್ನು ಕೆಐಎಡಿಬಿ ಭೂ ಸ್ವಾಧೀನಕ್ಕೆ ವಿರೋಧಿಸಿ ಜಿಲ್ಲಾಡಳಿತ ಭವನದ ಎದುರು 66 ದಿನಗಳಿಂದ ಅಹೋರಾತ್ರಿ ಅನಿರ್ದಿಷ್ಟಾವಧಿ ಹೋರಾಟ ನಡೆಸುತ್ತಿದ್ದರೂ ಸಹಾ ಸರ್ಕಾರ ಭೂಸ್ವಾಧೀನ ಮಾಡಿಯೇ ತೀರುವುದಾಗಿ ಹಠಕ್ಕೆ ಬಿದ್ದು ರೈತರಿಗೆ ತೊಂದರೆ ನೀಡುತ್ತಿದೆ. ಆದರೆ ರೈತರ ಸಂಕಷ್ಟಗಳಿಗೆ ಆದಿ ಚುಂಚನಗಿರಿ ಮಠ ಸದಾ ಜೊತೆಗಿರುತ್ತದೆ ಎಂದು ಆದಿಚುಂಚನಗಿರಿ ಚಿಕ್ಕಬಳ್ಳಾಪುರ ಮಠದ ಕಾರ್ಯದರ್ಶಿ ಮಂಗಳಾನಾಥ ಸ್ವಾಮೀಜಿ ಘೋಷಿಸಿದರು.

ಜಿಲ್ಲಾಡಳಿತ ಭವನದ ಎದುರು ಜಂಗಮಕೋಟೆ ಹೋಬಳಿಯ 13 ಹಳ್ಳಿಗಳ ಕೆಐಎಡಿಬಿ ಭೂ ಸ್ವಾಧೀನಕ್ಕೆ ವಿರೋಧಿಸಿ ರಾಜ್ಯ ರೈತ ಸಂಘ ಹಾಗೂಹಸಿರು ಸೇನೆ, ಕನ್ನಡಪರ, ದಲಿತಪರ ಹೋರಾಟಗಾರರು ನಡೆಸುತ್ತಿರುವ ಅನಿರ್ದಿಷ್ಟಾವದಿ ಹೋರಾಟ ಬೆಂಬಲಿಸಿ 66ನೇ ದಿನವಾದ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದ ನಾಥ ಮಹಾಸ್ವಾಮೀಜಿ ಪರವಾಗಿ ಅವರ ಪ್ರತಿನಿಧಿಯಾಗಿ ಚಿಕ್ಕಬಳ್ಳಾಪುರ ಶಾಖಾ ಮಠದ


ಉದಯವಾಹಿನಿ ಚಿತ್ರ

ಶ್ರೀಮಂಗಳನಾಥ ಸ್ವಾಮೀಜಿ ಭಾಗವಹಿಸಿ ಮಾತನಾಡಿದರು. ಈ 13 ಹಳ್ಳಿಗಳ 2823 ಎಕರೆ ಫಲವತ್ತಾದ ಕೃಷಿಭೂಮಿಗೆ ಸಂಬಂಧಿಸಿದಂತೆ ಸರಿಸುಮಾರು 1200 ರಿಂದ 1300 ಕುಟುಂಬಗಳು ಜೀವನ ನಡೆಸುತ್ತಿದ್ದಾರೆ ಹಾಗೂ ಇಲ್ಲಿನ ಭೂಮಿಯು ಸರ್ಕಾರದ ಅಂಕಿ ಅಂಶಗಳ ಪ್ರಕಾರ, ಫಲವತ್ತತೆಯಲ್ಲಿ ಬಹಳ ಉತ್ತಮ ಫಲಿತಾಂಶವನ್ನು ಹೊಂದಿದೆ. ಇಲ್ಲಿನ ರೈತರು ದೇಶ ವಿದೇಶಗಳಲ್ಲಿ ಬೆಳೆಯುವಂತಹ ಹಣ್ಣು ಹೂವು ತರಕಾರಿ ಬೆಳೆಯುತ್ತಿದ್ದಾರೆ ಹಾಗೂ ಸುಮಾರು 530 ಎಕರೆ ಪ್ರದೇಶದಲ್ಲಿ ರೇಷ್ಮೆಯನ್ನು ಬೆಳೆಯುತ್ತಿದ್ದಾರೆ.

ಕೆಐಎಡಿಬಿ ವಶಪಡಿಸಿ ಕೊಳ್ಳಲು ಹೊರಟಿರುವುದು ಸರಿಯಲ್ಲ ಎಂದರು. ಯಾಕೆಂದರೆ 2823 ಎಕರೆ ಪೈಕಿ ಸುಮಾರು 800 ರಿಂದ 900 ಎಕರೆ ಪ್ರದೇಶದಲ್ಲಿ ತೋಟಗಾರಿಕಾ ಬೆಳೆಗಳು ಹಾಗೂ 600 ರಿಂದ 700 ಎಕರೆ ಪ್ರದೇಶದಲ್ಲಿ ಕೃಷಿ ಆಧಾರಿತ ರಾಗಿ ಜೋಳ ಇವೆಲ್ಲವನ್ನು ಬೆಳೆಯುತ್ತಿದ್ದಾರೆ ಹಾಗೂ 300 ಎಕರೆ ಭೂಮಿಯಲ್ಲಿ ಮಾವು ಗೋಡಂಬಿ, ಶುಂಠಿ ಬೆಳೆಯುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಮುಖ್ಯಮಂತ್ರಿಗಳ ವಿಶೇಷ ಅನುದಾನದ ಅಡಿಯಲ್ಲಿ ಶಿಡ್ಲಘಟ್ಟ ತಾಲ್ಲೂಕಿನಲ್ಲಿ 200 ಕೋಟಿ ರೂಗಳ ವೆಚ್ಚದಲ್ಲಿ ಹೈಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆ ಪ್ರಾರಂಭವಾಗುತ್ತಿದೆ. ಇಂತಹ ಹೊತ್ತಲ್ಲಿ ಭೂಮಿ ಪಡೆಯುವುದು ಸರಿಯಲ್ಲ ಎಂದರು.

## ಸೇವಾಲಾಲ್ ಮೂರ್ತಿ ಶಂಕುಸ್ಥಾಪನೆ

• ಉದಯವಾಹಿನಿ, ಹುಳಿಯಾರು

ಉದಯವಾಹಿನಿ ಚಿತ್ರ


ಸೇವಾಲಾಲ್ ಸರ್ಕಲ್‌ನಲ್ಲಿ ಮೇ 24ರ ಭಾನುವಾರ ಬೆಳಿಗ್ಗೆ 9:30 ಕ್ಕೆ ಶ್ರೀ ಸೇವಾಲಾಲ್ ಮರಿಯಮ್ಮ ದೇವಿ ತಾಂಡಾಭಿವೃದ್ಧಿ ಟ್ರಸ್ಟ್ ಹಾಗೂ ಸದ್ಗುರು ಶ್ರೀ ಸೇವಾಲಾಲ್ ಮೂರ್ತಿ ಸೇವಾ ಸಮಿತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು ಇವರುಗಳ ಸಂಯುಕ್ತಾಶ್ರಯದಲ್ಲಿ ಸದ್ಗುರು ಶ್ರೀ ಸೇವಾಲಾಲ್ ಮೂರ್ತಿ ಶಂಕುಸ್ಥಾಪನೆ ಕಾರ್ಯಕ್ರಮ ಮತ್ತು ತಾಲ್ಲೂಕು ಲಂಬಾಣಿ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಸಮಾರಂಭದ ಅಧ್ಯಕ್ಷತೆ ಮತ್ತು ಶಂಕುಸ್ಥಾಪನೆಯನ್ನು ಶಾಸಕರಾದ ಸಿ.ಬಿ.ಸುರೇಶ್‌ಬಾಬು ಅವರು ನೆರವೇರಿಸಲಿದ್ದಾರೆ. ಮಾಜಿ ಸಚಿವರಾದ ಜೆ.ಸಿ.ಮಾಧುಸ್ವಾಮಿ ಹಾಗೂ ಮಾಜಿ ಶಾಸಕರಾದ ಕೆ.ಎಸ್.ಕಿರಣ್‌ಕುಮಾರ್ ಅವರು ಸೇವಾಲಾಲ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಸೇವಾಲಾಲ್ ಮರಿಯಮ್ಮ ದೇವಿ ತಾಂಡಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷರಾದ ಬಿ. ರಘುನಾಥ್ ಪ್ರಾಸ್ತಾವಿಕ ನುಡಿ ನುಡಿಯಲಿದ್ದಾರೆ.ಮೂರ್ತಿ ನಿರ್ಮಾಣಕ್ಕೆ ಅಡಿಗಲ್ಲು ಮತ್ತು ಪುಷ್ಪಾರ್ಚನೆಯನ್ನು ಕುಮಾರ್‌ನಾಯ್ಕ (ಆಲದಕಟ್ಟಿ ತಾಂಡ್ಯ), ತುಲಸಿ ಪ್ರಕಾಶ್ (ಬರಕನಾಲು ತಾಂಡ್ಯ) ಹಾಗೂ ಮಂಜಾನಾಯ್ಕ (ಹುಳಿಯಾರು ಪ.ಪಂ ಹಾಲಿ ಸದಸ್ಯರು) ನೆರವೇರಿಸಲಿದ್ದಾರೆ.

ತಾಲ್ಲೂಕು ದಂಡಾಧಿಕಾರಿಗಳಾದ ಮಮತಾ, ಇ.ಇ. ಬೆಸ್ಕಾಂ ಗವಿರಂಗಯ್ಯನವರು, ಡಿ.ವೈ.ಎಸ್.ಪಿ ಗೋಪಿ ಆರ್.ಪಟ್ಟಣ ಪಂಚಾಯಿತಿ ಅಧ್ಯಕ್ಷರಾದ ಪ್ರೀತ್ರಿ, ಉಪಾಧ್ಯಕ್ಷರಾದ ಕಾವ್ಯರಾಣಿ, ತಹಶೀಲ್ದಾರ್ ವಿಜಯಶಂಕರ್ ಸೇರಿದಂತೆ ಅನೇಕ ಮುಖಂಡರು ಭಾಗವಹಿಸಲಿದ್ದಾರೆ. ಪ್ರಖ್ಯಾತ ಲಂಬಾಣಿ ಗಾಯಕರಾದ ಉಮೇಶ್ ನಾಯ್ಕ ಚಿನ್ನಸಮುದ್ರ ಹಾಗೂ ತಂಡದವರಿಂದ ಜಾನಪದ ಗಾಯನ ಜರುಗಲಿದೆ. ಜೊತೆಗೆ ದಸೂಡಿ ಉಮ್ಲಾನಾಯ್ಕ ತಾಂಡ್ಯದ ಯುವಕರಿಂದ ಭಕ್ತಿಗೀತೆಗಳು ಹಾಗೂ ಭೈರಾಪುರ ತಾಂಡ್ಯದ ಪ್ರಶಸ್ತಿ ಪುರಸ್ಕೃತ ಮಾತೆಯರಿಂದ ಲಂಬಾಣಿ ನೃತ್ಯ ಪ್ರದರ್ಶನಗೊಳ್ಳಲಿದೆ.

## ಗುರುವಂದನಾ ಕಾರ್ಯಕ್ರಮ

• ಉದಯವಾಹಿನಿ, ಶಿಡ್ಲಘಟ್ಟ


ನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ 2005-06ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಳೆಯ ವಿದ್ಯಾರ್ಥಿಗಳ ಬಳಗದ ವತಿಯಿಂದ ಹಮ್ಮಿಕೊಂಡಿದ್ದ 'ಗುರುವಂದನಾ' ಕಾರ್ಯಕ್ರಮದಲ್ಲಿ ಶಿಕ್ಷಕರಿಗೆ ಸನ್ಮಾನ ಸಲ್ಲಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯ ಶಿಕ್ಷಕ ವಿ. ಶ್ರೀನಿವಾಸ್, ವಿದ್ಯಾರ್ಥಿಗಳು ಜೀವನದಲ್ಲಿ ಉನ್ನತ ಸಾಧನೆ ಮಾಡಿ ಸಮಾಜದಲ್ಲಿ ಉತ್ತಮ ಸ್ಥಾನಗಳಿಸಿದಾಗ ಶಿಕ್ಷಕರಿಗೆ ಅದಕ್ಕಿಂತ ದೊಡ್ಡ ಸಂತೋಷ ಮತ್ತೊಂದಿಲ್ಲ. ನಾವು ಸಮಾಜದಲ್ಲಿ ಇಂದು ಕಾಣುತ್ತಿರುವ ಯಶಸ್ಸಿನ ಹಿಂದೆ ಸಾಮಾನ್ಯ ಜನರ ಪರಿಶ್ರಮ ಅಡಗಿದೆ. ಕಾರ್ಮಿಕರು ಮತ್ತು ಕೂಲಿ ವರ್ಗದವರ ತೆರಿಗೆ ಹಣದಿಂದಲೇ ಶಿಕ್ಷಣ ಪಡೆದು ಬೆಳೆಯುತ್ತಿರುವುದನ್ನು ಯಾರೂ ಮರೆಯಬಾರದು ಎಂದು ತಿಳಿಸಿದರು.

ಶಿಕ್ಷಕಿ ಎಸ್.ಎನ್.ಲತಾ ಮಾತನಾಡಿ, ಸಮಾಜದಿಂದ ಪಡೆಯುವುದಷ್ಟೇ ಅಲ್ಲ, ಸಮಾಜಕ್ಕೆ ಹಿಂತಿರುಗಿ ಏನಾದರೂ ಒಳ್ಳೆಯ ಕೊಡುಗೆ ನೀಡಬೇಕು. ಉತ್ತಮ ವ್ಯಕ್ತಿತ್ವ ಮತ್ತು ಸೇವಾಭಾವದ ಮೂಲಕ ಇತರರಿಗೆ ಮಾದರಿಯಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

## ಬೇರೆಯವರು ಮಾಡಲಾಗದ ಕೆಲಸವನ್ನು ನಾವು ಮಾಡಿ ಜನರ ಋಣ ತೀರಿಸುತ್ತಿದ್ದೇವೆ. ಮುಂದಿನ 2 ವರ್ಷಗಳಲ್ಲಿ ಇನ್ನೂ ಹೆಚ್ಚಿನ ಕೆಲಸ ಮಾಡುತ್ತೇವೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

• ಉದಯವಾಹಿನಿ,ಚಾಮರಾಜನಗರ


ಉದಯವಾಹಿನಿ ಚಿತ್ರ

### ಮೇಕೆದಾಟು ಯೋಜನೆಗೆ ಶೀಘ್ರದಲ್ಲೇ ಹೊಸ ಡಿಪಿಆರ್

ಮೇಕೆದಾಟು ಯೋಜನೆಗೆ ಹೊಸ ಡಿಪಿಆರ್ ಸಿದ್ಧಪಡಿಸಲಾಗಿದ್ದು, ಈ ಯೋಜನೆಯ ಕಚೇರಿ ಆರಂಭಿಸಿದ್ದೇವೆ. ಮುಳುಗಡೆಯಾಗುವ ಅರಣ್ಯ ಪ್ರದೇಶಕ್ಕೆ ಪರ್ಯಾಯ ಜಮೀನು ನೀಡಲು ಜಮೀನು ಗುರುತಿಸುತ್ತಿದ್ದೇವೆ. ಶೀಘ್ರವೇ ಕೇಂದ್ರಕ್ಕೆ ಡಿಪಿಆರ್ ಸಲ್ಲಿಕೆ ಮಾಡಲಿದ್ದು, ಕೇಂದ್ರ ಸರ್ಕಾರದ ಅನುಮತಿ ಬಂದ ಬಳಿಕ ಯೋಜನೆಯ ಭೂಮಿ ಪೂಜೆ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಕೊಳ್ಳೇಗಾಲ ತಾಲ್ಲೂಕಿನ ಮಧ್ಯರಂಗ ದೇಗುಲದ ಬಳಿ ಗುರುವಾರ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಕಾವೇರಿ ವಿಚಾರದಲ್ಲಿ ತಮಿಳುನಾಡಿಗೆ 177 ಟಿಎಂಸಿ ನೀರು ಬಿಡಲೇಬೇಕು ಎಂದು ಸ್ಪಷ್ಟ ಆದೇಶ ನೀಡಲಾಗಿದೆ. ಇದನ್ನು ಹೇಗೆ ಬಗೆಹರಿಸಬೇಕು ಎಂದು ಮುಂದಿನ ದಿನಗಳಲ್ಲಿ ಚರ್ಚೆ ಮಾಡುತ್ತೇನೆ.

ಮೇಕೆದಾಟು ಯೋಜನೆಗೆ ಆಕ್ಷೇಪ ಸಲ್ಲಿಸಲು ತಮಿಳುನಾಡಿಗೆ ಯಾವುದೇ ರೀತಿಯ ಹಕ್ಕಿಲ್ಲ, ಇದರ ಬಗ್ಗೆ ಕೇಂದ್ರ ಜಲ ಆಯೋಗ ತೀರ್ಮಾನ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ನೀಡಿದೆ ಎಂದರು. ಅಧಿಕಾರದಲ್ಲಿರುವುದಕ್ಕಿಂತ ಅಧಿಕಾರದಲ್ಲಿದ್ದಾಗ ನಾವು ಏನು ಮಾಡುತ್ತೇವೆ ಎಂಬುದು ಮುಖ್ಯ. ನಮ್ಮ ಸರ್ಕಾರಕ್ಕೆ ಮೂರು ವರ್ಷ ಪೂರ್ಣಗೊಂಡಿದೆ. ಕೊಟ್ಟ ಮಾತಿನಂತೆ ನಡೆದಿದ್ದೇವೆ. ಜೊತೆಗೆ ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಯೋಜನೆ ನೀಡಿದ್ದೇವೆ. ಪ್ರತಿಯೊಬ್ಬ ಫಲಾನುಭವಿಗಳ ಆಸ್ತಿ ದಾಖಲೆಗಳಲ್ಲಿ ಅವರ ಫೋಟೋ, ಆಸ್ತಿಯ ಫೋಟೋ ಹಾಕಿ ಮನೆ ಮನೆಗೆ ಖಾತೆ ಒದಗಿಸಿಕೊಡುತ್ತಿದ್ದೇವೆ. ಬೇರೆಯವರು ಮಾಡಲಾಗದ ಕೆಲಸವನ್ನು ನಾವು ಮಾಡಿ ಜನರ ಋಣ ತೀರಿಸುತ್ತಿದ್ದೇವೆ. ಮುಂದಿನ 2 ವರ್ಷಗಳಲ್ಲಿ ಇನ್ನು ಹೆಚ್ಚಿನ ಕೆಲಸ ಮಾಡುತ್ತಿದ್ದೇವೆ. ಕಳೆದ ಎರಡು ವರ್ಷ ಉತ್ತಮ ಮಳೆಯಾಗಿತ್ತು. ಈ ವರ್ಷ ಮಳೆ ಕೊರತೆಯಾದರೆ ರೈತರನ್ನು ಹೇಗೆ ಕಾಪಾಡಬೇಕು, ಕುಡಿಯುವ ನೀರಿನ ಸಮಸ್ಯೆ ಹೇಗೆ ಬಗೆಹರಿಸಬೇಕು ಎಂದು ಚರ್ಚೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

### ದಾರಿ ತೋರಿಸುವುದು ದೇವರ ಕೆಲಸ

ಇನ್ನೊಂದೆಡೆ, ಕೊಳ್ಳೇಗಾಲ ತಾಲ್ಲೂಕಿನ ಶ್ರೀ ಜಗನ್‌ಮೋಹನ ರಂಗನಾಥಸ್ವಾಮಿ ದೇವಾಲಯ ಜೀರ್ಣೋದ್ಧಾರ ಪೂರಕ ಅಷ್ಟಬಂಧನ ದಿವ್ಯ ಮಹಾ ಕುಂಭಾಭಿಷೇಕ-ಸಂಪ್ರೋಕ್ಷಣ ಮಹೋತ್ಸವದಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್, ದೇವರು ಕಷ್ಟ ಕೊಡುತ್ತಾನೆ ಜೊತೆಗೆ ಅದನ್ನು ಎದುರಿಸುವ ಶಕ್ತಿಯನ್ನೂ ನೀಡುತ್ತಾನೆ. ದಾರಿ ತೋರಿಸುವುದು ದೇವರ ಕೆಲಸ, ಗುರಿ ತಲುಪಬೇಕಿರುವುದು ನಮ್ಮ ಕೆಲಸ. ದೇವರು ನೀಡುವ ಅವಕಾಶವನ್ನು ಬಳಸಿಕೊಳ್ಳಬೇಕು. ಅವಕಾಶ ಸಿಕ್ಕಾಗ ಕೈಯಿಂದ ದಾನ ಮಾಡಿ ಎಂದು ತಿಳಿಸಿದರು. ಯಾವುದೇ ದೇವರಿಗೆ ಜಾತಿ, ಧರ್ಮ ಎಂಬುದು ಇರುವುದಿಲ್ಲ. ಧರ್ಮ ಯಾವುದಾದರೂ ತತ್ವವೊಂದೇ, ದೈವ ನೂರಾದರೂ ಭಕ್ತಿಯೊಂದೆ, ಕರ್ಮ ಹಲವಾದೂ ನಿಷ್ಠೆಯೊಂದೇ, ದೇವನೊಬ್ಬ ನಾಮ ಹಲವು. ಕಾವೇರಿ ನದಿ ಹಾಗೂ ರಂಗನಾಥನ ಮಧ್ಯೆ ದರ್ಗಾ ಇದೆ. ಇದೇ ಈ ನೆಲದ ಸೌಹಾರ್ದತೆ ಎಂದರು. ಚಾಮರಾಜನಗರ ಹಿಂದುಳಿದ ಜಿಲ್ಲೆಯಲ್ಲ. ಇದು ದೇವರ ನಾಡು. ಚಾಮರಾಜೇಶ್ವರ, ಬಿಳಿಗಿರಿ ರಂಗನಾಥ, ಹಿಮವದ್ ಗೋಪಾಲಸ್ವಾಮಿ, ಮಲೆ ಮಹದೇಶ್ವರ, ಮಧ್ಯರಂಗ ಹೀಗೆ ದೇವಾಲಯಗಳ ಬೀಡಾಗಿದೆ. ಕಾವೇರಿ ನದಿಯ ತಟದಲ್ಲಿ ರಂಗನಾಥಸ್ವಾಮಿ ನೆಲೆಸಿ ಹರಸುತ್ತಿದ್ದಾನೆ. ಮನುಷ್ಯ ಎಷ್ಟೇ ದೊಡ್ಡವನಾದರೂ ಅವನ ಧರ್ಮ, ಆಚರಣೆಗಳನ್ನು ಬಿಡಲು ಆಗುವುದಿಲ್ಲ ಎಂದು ಹಿರಿಯರು ಮಾರ್ಗದರ್ಶನ ಮಾಡಿದ್ದಾರೆ. ದೇವರ ದೇವ ರಂಗನಾಥನ ಪಾದಗಳಿಗೆ ನನ್ನ ಕುಟುಂಬ ಹಾಗೂ ಎಲ್ಲಾ ಭಕ್ತಾಧಿಗಳ ಪರವಾಗಿ ಸಾಷ್ಟಾಂಗ ನಮಸ್ಕಾರ ಎಂದು ಹೇಳಿದರು.

### ಜಿಬಿಎ ಚುನಾವಣೆಗೆ ಸಿದ್ಧತೆ

ಜಿಬಿಎ ಚುನಾವಣೆ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಮಾತನಾಡಿ, ಜಿಬಿಎ ಚುನಾವಣೆ ನಡೆಸುವ ಜವಾಬ್ದಾರಿ ಚುನಾವಣಾ ಆಯೋಗದ ಮೇಲಿದೆ. ಚುನಾವಣೆ ನಡೆಸಲು ಸರ್ಕಾರ ಸಂಪೂರ್ಣವಾಗಿ ಸಹಕಾರ ನೀಡಲು ಸಿದ್ಧವಾಗಿದೆ. ಸಮಯದ ಪ್ರಕಾರ ಚುನಾವಣೆ ನಡೆಯಲಿದೆ. ನಾವೆಲ್ಲ ಸಿದ್ಧತೆಯನ್ನು ಮಾಡಿಕೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದರು. ನೀವು ಯಾವಾಗ ಸಿಎಂ ಆಗುತ್ತೀರಿ ಎಂದು ಕೇಳಿದಾಗ, ಅದನ್ನು ಕಾಲ ತೀರ್ಮಾನ ಮಾಡುತ್ತದೆ ಎಂದು ತಿಳಿಸಿದರು.

## ವನ್ಯಜೀವಿಗಳ ಹಾವಳಿಗೆ ಕಡಿವಾಣ ಹಾಕಲು ಅರಣ್ಯ ಇಲಾಖೆ ಮುಂದಾಗಲಿ : ಅಬ್ದುಲ್ ರಷೀದ್ ಒತ್ತಾಯ

• ಉದಯವಾಹಿನಿ, ಗುಂಡ್ಲುಪೇಟೆ

ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಓಂಕಾರ್ ವಲಯಕ್ಕೆ ಸೇರಿದ ಮಂಚಹಳ್ಳಿ ವ್ಯಾಪ್ತಿಯಲ್ಲಿ ಆನೆಗಳ ಉಪಟಳ ಮಿತಿಮೀರಿದ್ದು ರೈತರು ಕಷ್ಟಪಟ್ಟು ಬೆಳೆದ ಬೆಳೆಗಳನ್ನ ನಾಶಪಡಿಸುತ್ತಿರುವುದು ಬೇಸರದ ಸಂಗತಿಯಾಗಿದೆ.

ದೇಶದ ಬೆನ್ನಲುಬು ರೈತನಿಗೆ ಬೆಂಬಲವಾಗಿ ನಿಲ್ಲಲು ಅರಣ್ಯ ಇಲಾಖೆ, ಚುನಾಯಿತ ಜನಪ್ರತಿನಿಧಿಗಳು ನಿಶ್ಚಲರಾಗಬೇಕು ಹಾಗೆಯೇ ಆನೆಗಳ ಉಪಟಳದಿಂದ ಬೇಸತ್ತಿರುವ ರೈತರಿಗೆ ಪರಿಹಾರದ ಹಣವನ್ನ ನೀಡುವ ಬದಲು ಆನೆಗಳ ಹಾವಳಿಗೆ ಕಡಿವಾಣ ಹಾಕಲು ಅರಣ್ಯ ಇಲಾಖೆ ಮುಂದಾಗಬೇಕು ಎಂದು ಗಡಿನಾಡ ರಕ್ಷಣಾ ಸೇನೆ ಗುಂಡ್ಲುಪೇಟೆ ತಾಲ್ಲೂಕು ಅಧ್ಯಕ್ಷ


ಉದಯವಾಹಿನಿ ಚಿತ್ರ

ಅಬ್ದುಲ್ ರಷೀದ್ ಒತ್ತಾಯಿಸಿದ್ದಾರೆ. ದಿನನಿತ್ಯ ರೈತರ ಜಮೀನುಗಳಿಗೆ ನುಗ್ಗಿದ ಕಾಡಾನೆಗಳಿಂದ ಬೆಳೆ ನಾಶ, ಸೋಲಾರ್ ತಂತಿ ಬೇಲಿ ಜಖಂ ಎಂಬ ವರದಿಗಳು ಪ್ರಸಾರವಾಗುತ್ತಲೇ ಇವೆ ಆದರೆ ಕೃಷಿ ಕುಲಕಸಬನ್ನ ನಂಬಿ ಜೀವನ ಕಟ್ಟಿಕೊಳ್ಳುತ್ತ ಎಲ್ಲರಿಗೂ ಅನ್ನ ಉಣಬಡಿಸುವ ರೈತರ ಸಂಕಷ್ಟ ಪರಿಹಾರವಾಗಿದೆ ಎಂಬ ವರದಿಗಳು ಬಿತ್ತರವಾಗಿಲ್ಲ.

ತಾವು ಬೆಳೆದ ಬೆಳೆಗಳ ರಕ್ಷಣೆಗೆ ಜಮೀನಿನ ಸುತ್ತಲೂ ಸೋಲಾರ್ ತಂತಿ ಬೇಲಿ ನಿರ್ಮಾಣ ಮಾಡಿದ್ದರೂ ಸಹ ಚಾಕಚ್ಯತೆಯಿಂದ ಒಳನುಗ್ಗುವ ಕಾಡಾನೆಗಳು ರೈತಾಪಿ ವರ್ಗಕ್ಕೆ ಲಕ್ಷಾಂತರ ರೂ ನಷ್ಟದ ಬರೆ ಎಳೆಯುತ್ತಿವೆ, ಮಂಚಹಳ್ಳಿ ಹಾಗೂ ಸುತ್ತಲಿನ ಗ್ರಾಮದ ರೈತರು ಅನೇಕ ಬಾರಿ ಓಂಕಾರ್ ಅರಣ್ಯಾಧಿಕಾರಿಗಳಿಗೆ ಕಾಡಾನೆಗಳ ದಾಂಧಲೆ ಬೆಳೆ ನಷ್ಟದ ಕುರಿತು ಮಾಹಿತಿ ನೀಡುವ ಮೂಲಕ ಗಜಉಪಟಳದಿಂದ ತಪ್ಪಿಸುವಂತೆ ಮನವಿ ಮಾಡಿದ್ದರು ಯಾವುದೇ ಪ್ರಯೋಜನವಾಗಿಲ್ಲ, ರೈತರ ಆಕ್ರೋಶದ ಕಟ್ಟೆಯೊಡೆದ ನಂತರದ ಕೆಲ ದಿನಗಳಲ್ಲಿ ಅರಣ್ಯದಂಚಿನ ಆಯಕಟ್ಟಿನ ಸ್ಥಳಗಳಲ್ಲಿ ಗಸ್ತು ಸಿಬ್ಬಂದಿಯನ್ನ ನೇಮಕಮಾಡಲಾಯಿತಾದರೂ ಪರಿಪೂರ್ಣವಾಗಿ ಕಾರ್ಯಗತವಾಗಿಲ್ಲ ಎಂಬುದು ಸ್ಥಳೀಯರ ಆರೋಪವಾಗಿದೆ.

ರೈಲ್ವೆ ತಡೆಗೋಡೆ ನಿರ್ಮಾಣಕ್ಕೆ ಸ್ಥಳೀಯ ಶಾಸಕರಿಂದ ಶಂಕುಸ್ಥಾಪನೆಯಾಗಿ ಕಾಮಗಾರಿ ಆರಂಭವಾಗಿದ್ದು ಒಂಬತ್ತು ಕಿಲೋಮೀಟರ್ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿಯೂ ಸುಮಾರು 5 ಕಿ.ಮೀ. ವರೆಗೆ ಪೂರ್ಣಗೊಂಡಿದ್ದು ಕೆಲವೇ ದಿನಗಳಲ್ಲಿ ಬ್ಯಾರಿಕೇಡ್ ಅಳವಡಿಸಲಾಗುತ್ತದೆ ಇದರಿಂದ ರೈತರು ಆನೆಗಳ ಕಾಟದಿಂದ ಸಂರಕ್ಷಿತರಾಗಿ ನಿರಾಳರಾಗಬಹುದು ಅಲ್ಲಿಯತನಕ ಆನೆಗಳು ಕಾಡಂಚಿನಲ್ಲಿನ ಕಂದಕಗಳನ್ನ ದಾಟಿ ಹೊರಬರುವ ಸ್ಥಳಗಳನ್ನ ಗುರುತಿಸಿ ತಾವು ಬೆಳೆದ ಬೆಳೆಗಳ ರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.


## ಹುಳಿಯಾರು ಪದವಿ ಕಾಲೇಜಿನಲ್ಲಿ ವಿಭಿನ್ನ 'ಕಾಮರ್ಸ್ ಕಾರ್ನಿವಲ್ - 2026' ಸಂಭ್ರಮ

• ಉದಯವಾಹಿನಿ, ಹುಳಿಯಾರು

ಇಲ್ಲಿನ ಬಿ.ಎಂ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 'ಕಾಮರ್ಸ್ ಕಾರ್ನಿವಲ್-2026' ವಿನೂತನ ಹಾಗೂ ವೈವಿಧ್ಯಮಯ ಸ್ಪರ್ಧೆಗಳ ಮೂಲಕ ವಿದ್ಯಾರ್ಥಿಗಳ ಮನಸೆಳೆಯಿತು.

ಕಾಲೇಜಿನ ದ್ವಾರದಲ್ಲಿ ವಿಘ್ನವಿನಾಶಕ ವಿಘ್ನೇಶ್ವರನ ಪೂಜೆಯನ್ನು ಸಲ್ಲಿಸುವ ಮೂಲಕ ಪ್ರಾಂಶುಪಾಲರು ಹಾಗೂ ಅಧ್ಯಾಪಕ ವೃಂದದವರು ಕಾರ್ಯಕ್ರಮಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಿದರು. ವಾಣಿಜ್ಯ ವಿಭಾಗದ ವತಿಯಿಂದ ಸಿದ್ಧಪಡಿಸಲಾಗಿದ್ದ ವಿಶೇಷ ಬ್ಯಾನರ್ ಬಿಡುಗಡೆ ಮತ್ತು ಸೆಲ್ಫಿ ಸ್ಟೇಷನ್ ಎಲ್ಲರ ಗಮನ ಸೆಳೆದವು.

ಅನ್ವೇಲಿಂಗ್ ಕಾಮರ್ಸ್ ಎಕ್ಸ್‌ಪೋ' ವಾಣಿಜ್ಯ ವಸ್ತು ಪ್ರದರ್ಶನದಲ್ಲಿ ಪ್ರಥಮ ಬಿ.ಕಾಂ ವಿದ್ಯಾರ್ಥಿಗಳು ವಿವಿಧ ಬಿಸಿನೆಸ್ ಐಡಿಯಾಗಳು,


ಉದಯವಾಹಿನಿ ಚಿತ್ರ

ಸ್ಟಾಕ್ ಎಕ್ಸ್ಚೇಂಜ್, ಬ್ಯಾಂಕಿಂಗ್ ವ್ಯವಸ್ಥೆ ಸೇರಿದಂತೆ ವಾಣಿಜ್ಯ ಕ್ಷೇತ್ರದ ಪ್ರಮುಖ ವಿಷಯಗಳ ಕುರಿತು ಆಕರ್ಷಕ ಮಾದರಿಗಳ ಮೂಲಕ ಮಾಹಿತಿ ನೀಡಿ ಸೈ ಎನಿಸಿಕೊಂಡರು. ಇನ್ನು 'ಜಿರೋ ಫ್ಲೇಮ್ ಚೆಫ್' ಬೆಂಕಿ ರಹಿತ ಅಡುಗೆ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡು, ಒಲೆ ಬಳಸದೆ ವೈವಿಧ್ಯಮಯ ಹಾಗೂ ರುಚಿಕರವಾದ ತಿಂಡಿ-ತಿನಿಸುಗಳನ್ನು ತಯಾರಿಸಿ ನೆರೆದಿದ್ದವರನ್ನು ರಂಜಿಸಿದರು.

ಬಿಎಂಎಸ್ ಮೈಂಡ್ ಸ್ಪಾರ್ಕ್ಸ್ (ರಸಪ್ರಶ್ನೆ): ತೃತೀಯ ಬಿ.ಎ ವಿಭಾಗದ ಮರಿಯಪ್ಪ ಮತ್ತು ತಂಡ (ಪ್ರಥಮ), ದ್ವಿತೀಯ ಬಿ.ಕಾಂ ವಿಭಾಗದ ತ್ರಿಷಾ ಮತ್ತು ತಂಡ (ದ್ವಿತೀಯ) ಬಿಎಂಎಸ್ ಮಿಸ್ಟಿಕ್ ಹಂಟ್ (ನಿಧಿ ಶೋಧನೆ): ದ್ವಿತೀಯ ಬಿ.ಕಾಂ ವಿಭಾಗದ ಆಕಾಶ್ ಮತ್ತು ತಂಡ (ಪ್ರಥಮ). ಬಿಎಂಎಸ್ ಜಿರೋ ಫ್ಲೇಮ್ ಚೆಫ್ (ಬೆಂಕಿ ರಹಿತ ಅಡುಗೆ): ದ್ವಿತೀಯ ಬಿ.ಕಾಂನ ಹರ್ಷಿತಾ ಮತ್ತು ತಂಡ (ಪ್ರಥಮ), ತೃತೀಯ ಬಿ.ಎ ವಿಭಾಗದ ಭಾವನಾ ಮತ್ತು ತಂಡ (ದ್ವಿತೀಯ). ಬಿಎಂಎಸ್ ರಂಗ್ ದೇ ಲೋಗೋ (ರಂಗೋಲಿ ಸ್ಪರ್ಧೆ): ವಿವಿಧ ಕಂಪನಿಗಳ ಬ್ರಾಂಡ್ ಲೋಗೋಗಳನ್ನು ರಂಗೋಲಿಯಲ್ಲಿ ಬಿಡಿಸುವ ಈ ಸೃಜನಶೀಲ ಸ್ಪರ್ಧೆಯಲ್ಲಿ ದ್ವಿತೀಯ ಬಿ.ಎ ವಿಭಾಗದ ರಾಜೇಶ್ವರಿ ಮತ್ತು ತಂಡ (ಪ್ರಥಮ) ಹಾಗೂ ಪ್ರಥಮ ಬಿಸಿಎ ವಿಭಾಗದ ಜ್ಯೋತಿ ಮತ್ತು ತಂಡ (ದ್ವಿತೀಯ) ಬಹುಮಾನ ಗಳಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ವೀರಣ್ಣ ಎಸ್.ಸಿ. ಅವರು ವಿದ್ಯಾರ್ಥಿ ಹಾಗೂ ಉಪನ್ಯಾಸಕ ವೃಂದದ ಶ್ರಮವನ್ನು ಶ್ಲಾಘಿಸಿದರು. ಇಂತಹ ವಿಭಿನ್ನ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಕೌಶಲ್ಯ ಹಾಗೂ ಸೃಜನಶೀಲತೆಯನ್ನು ಹೆಚ್ಚಿಸುತ್ತವೆ. ಮುಂದಿನ ದಿನಗಳಲ್ಲೂ ಇಂತಹ ಇನ್ನಷ್ಟು ಕಾರ್ಯಕ್ರಮಗಳನ್ನು ಆಯೋಜಿಸಿ ಎಂದು ಹರ್ಷ ವ್ಯಕ್ತಪಡಿಸಿ, ವಿಭಾಗಕ್ಕೆ ಧನ್ಯವಾದ ತಿಳಿಸಿದರು.

ಸಂಪೂರ್ಣ ಜವಾಬ್ದಾರಿಯನ್ನು ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ರಮೇಶ್ ಎಸ್. ಮತ್ತು ವಿಭಾಗದ ಉಪನ್ಯಾಸಕರುವಹಿಸಿದ್ದರು. ತೃತೀಯ ಬಿ.ಕಾಂ ವಿಭಾಗದ ವಿದ್ಯಾರ್ಥಿಗಳು ಅತಿ ಉತ್ಸಾಹದಿಂದ ಸಂಘಟಕರಾಗಿ ಜವಾಬ್ದಾರಿ ನಿರ್ವಹಿಸಿದರು. ಹುಳಿಯಾರಿನ ಬಿ.ಎಂ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 'ಕಾಮರ್ಸ್ ಕಾರ್ನಿವಲ್-2026' ವಿನೂತನ ಹಾಗೂ ವೈವಿಧ್ಯಮಯ ಸ್ಪರ್ಧೆಗಳ ಮೂಲಕ ವಿದ್ಯಾರ್ಥಿಗಳ ಮನಸೆಳೆಯಿತು.

## ಟ್ರಾನ್ಸ್‌ಫಾರ್ಮರ್ ವಿದ್ಯುತ್ ಸ್ಪರ್ಶ: ಹಸು ಸಾವು, ಗೌರಮ್ಮ ಅಪಾಯದಿಂದ ಪಾರು

• ಉದಯವಾಹಿನಿ, ಶಿಡ್ಲಘಟ್ಟ

ತಾಲ್ಲೂಕಿನ ಮಳ್ಳೂರು ಗ್ರಾಮದಲ್ಲಿ ಟ್ರಾನ್ಸ್‌ಫಾರ್ಮರ್‌ನ ವಿದ್ಯುತ್ ಸ್ಪರ್ಶಕ್ಕೆ ಸಿಲುಕಿ ಹಸು ಸಾವಿಗೀಡಾದ ದುರ್ಘಟನೆ ನಡೆದಿದೆ. ಗ್ರಾಮದ ಗೌರಮ್ಮ ಹಾಗೂ ಮುನಿರಾಜು ಅವರಿಗೆ ಸೇರಿದ ಹಸುವನ್ನು ಬೆಳಗಿನ ಜಾವ ಎಂದಿನಂತೆ ಡೇರಿಗೆ ಕರೆದುಕೊಂಡು ಹೋಗುತ್ತಿದ್ದ ವೇಳೆ ಘಟನೆ ಸಂಭವಿಸಿದೆ.

ರಸ್ತೆ ಪಕ್ಕದಲ್ಲಿದ್ದ ಟ್ರಾನ್ಸ್‌ಫಾರ್ಮರ್‌ಗೆ ಅಳವಡಿಸಿದ್ದ ಅರ್ಥಿಂಗ್ ಕಂಬಿ ಕತ್ತರಿಸಿಕೊಂಡು ನೆಲಕ್ಕೆ ಬಿದ್ದಿದ್ದು, ಅದರಲ್ಲಿ ವಿದ್ಯುತ್ ಪ್ರವಹಿಸುತ್ತಿತ್ತು ಎನ್ನಲಾಗಿದೆ. ಈ ಬಗ್ಗೆ ಅರಿವಿಲ್ಲದೆ ಹಸು ಅತ್ತ ಸಾಗಿದಾಗ ವಿದ್ಯುತ್ ಶಾಕ್‌ಗೆ ಒಳಗಾಗಿ ಸ್ಥಳದಲ್ಲೇ ಮೃತಪಟ್ಟಿದೆ. ಹಸು ಜೊತೆಗಿದ್ದ ಗೌರಮ್ಮ ಅದೃಷ್ಟವ ಶಾತ್ ಯಾವುದೇ ಅಪಾಯದಿಂದ ಪಾರಾಗಿದ್ದಾರೆ.

ಗ್ರಾಮಸ್ಥರ ಆರೋಪದ ಪ್ರಕಾರ, ಹಲವು ತಿಂಗಳುಗಳಿಂದ ಅರ್ಥಿಂಗ್ ಕಂಬಿ ಹಾನಿಗೊಂಡ ಸ್ಥಿತಿಯಲ್ಲಿದ್ದರೂ ಸಂಬಂಧಿತ ಬೆಸ್ಕಾಂ ಅಧಿಕಾರಿಗಳು ದುರಸ್ತಿ ಕಾರ್ಯ ಕೈಗೊಂಡಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯವೇ ದುರ್ಘಟನೆಗೆ ಕಾರಣ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮೃತ ಹಸುವಿನ ಮಾಲೀಕರಿಗೆ ಸೂಕ್ತ ಪರಿಹಾರ ನೀಡಬೇಕು ಹಾಗೂ ಟ್ರಾನ್ಸ್ ಫಾರ್ಮರ್ ದುರಸ್ತಿ ಕಾರ್ಯವನ್ನು ತಕ್ಷಣ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ಬೀಡಿ ಕಾರ್ಮಿಕರ ಪ್ರತಿಭಟನೆ

• ಉದಯವಾಹಿನಿ, ರಾಮನಗರ

ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ, ರಾಮನಗರ ಜಿಲ್ಲಾ ಬೀಡಿ ಕಾರ್ಮಿಕರ ಸಂಘದ ಸದಸ್ಯರು ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಇತ್ತೀಚೆಗೆ ಪ್ರತಿಭಟನೆ ನಡೆಸಿದರು. ಆಂಜನೇಯ ಗೋಪುರ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಜಾಥಾ ನಡೆಸಿದ ಕಾರ್ಮಿಕರು, ತಮ್ಮ ಬೇಡಿಕೆಗಳ ಕುರಿತು ಘೋಷಣೆ ಕೂಗಿದರು. ಕಾರ್ಮಿಕರಿಗೆ ವಸತಿ, ಕನಿಷ್ಠ ವೇತನ, ಒಂದು ಸಾವಿರ ಬೀಡಿ ಕಟ್ಟಿದರೆ 350 ಗೌರವಧನ ನೇರವಾಗಿ ಕಾರ್ಮಿಕರಿಗೆ ಸಿಗುವಂತಾಗಬೇಕು. ನೋಂದಾಯಿತ ಮತ್ತು ನೋಂದಾಯಿತ ಅಲ್ಲದ ಬೀಡಿ ಕಾರ್ಮಿಕರ ಸಮಗ್ರ ಸಮೀಕ್ಷೆ ನಡೆಸಿ ಅರ್ಹರಿಗೆ ಗುರುತಿನ ಚೀಟಿ ವಿತರಿಸಬೇಕು ಎಂದು ಕಾರ್ಮಿಕರು ಒತ್ತಾಯಿಸಿದರು. ಆರೋಗ್ಯ ಸುರಕ್ಷತೆ, ಪಿಂಚಣಿ, ವಿದ್ಯಾರ್ಥಿವೇತನ, ವಿಮೆಯಂತಹ ಸಾಮಾಜಿಕ ಭದ್ರತಾ ಸೌಲಭ್ಯಗಳು ಕಾರ್ಮಿಕರಿಗೆ ಸುಲಭವಾಗಿ ದೊರೆಯುವಂತಾಗಬೇಕು. ಮಹಿಳಾಕಾರ್ಮಿಕರಿಗೆ ವಿಶೇಷ ರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕು.

ಶೋಷಣೆ, ಅವಮಾನ ಮತ್ತು ವೇತನ ತಾರತಮ್ಯ ತಡೆಗೆ ವಿಶೇಷ ದೂರು ಪರಿಹಾರ ಸಮಿತಿ ರಚಿಸಬೇಕು ಎಂದು ಆಗ್ರಹಿಸಿದರು. ಬೀಡಿ ಕಾರ್ಮಿಕರ ಆರೋಗ್ಯ ತಪಾಸಣೆ ಶಿಬಿರಗಳನ್ನು ನಿಯಮಿತವಾಗಿ ಆಯೋಜಿಸಬೇಕು. ಧೂಳು



ಮತ್ತು ತಂಬಾಕು ಸಂಬಂಧಿತ ಅನಾರೋಗ್ಯಗಳಿಂದ ಬಳಲುವ ಕಾರ್ಮಿಕರಿಗೆ ಉಚಿತ ಚಿಕಿತ್ಸಾ ಸೌಲಭ್ಯ ಹಾಗೂ ಔಷಧ ವಿತರಣೆ ಮಾಡಬೇಕು. ಕಾರ್ಮಿಕರಿಗೆ ಪಿಎಫ್, ಇಎಸ್‌ಐ ಹಾಗೂ ಇತರ ಕಾನೂನುಬದ್ಧ ಸೌಲಭ್ಯಗಳನ್ನು ಕಡ್ಡಾಯವಾಗಿ ಜಾರಿಗೆ ತರಬೇಕು ಎಂದರು.

ಕಾಲಕಾಲಕ್ಕೆ ಕಾರ್ಮಿಕರ ಸಮಸ್ಯೆಗಳನ್ನು ತ್ವರಿತವಾಗಿ ಆಲಿಸಿ ಪರಿಹರಿಸುವ ವ್ಯವಸ್ಥೆ ರೂಪಿಸಬೇಕು. ಬೀಡಿ ಕಾಲೊನಿ ಪ್ರದೇಶದಲ್ಲಿ ನೈಜ ಕಾರ್ಮಿಕರಲ್ಲದವರಿಗೆ ವಿತರಿಸಿರುವ ವಸತಿಗಳನ್ನು ಹಿಂಪಡೆದು, ವಸತಿ ರಹಿತ ಬೀಡಿ ಕಾರ್ಮಿಕರಿಗೆ ವಿತರಣೆ ಮಾಡಬೇಕು. ಕಾರ್ಮಿಕರ ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ವಿದ್ಯಾರ್ಥಿವೇತನ ನೀಡಬೇಕು ಎಂದು ಆಗ್ರಹಿಸಿದರು.

### ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಿ

ಕಾರ್ಮಿಕರಿಗೆ ನ್ಯಾಯಯುತವಾಗಿ ಸಿಗಬೇಕಾದ ಸೌಲಭ್ಯಗಳನ್ನು ತಪ್ಪಿಸುವ ಗುತ್ತಿಗೆದಾರರು ಮತ್ತು ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಉದ್ಯೋಗ ಭದ್ರತೆ ಒದಗಿಸಬೇಕು. ಕೆಲಸದ ಕೊರತೆ ಹಾಗೂ ಮಧ್ಯವರ್ತಿಗಳ ದೌರ್ಜನ್ಯದಿಂದ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಾರ್ಮಿಕರ ಕುಂದುಕೊರತೆ ಕುರಿತಾಗಿ ಕಾರ್ಮಿಕ ಇಲಾಖೆ ಮಧ್ಯಸ್ಥಿಕೆಯಲ್ಲಿ ಮಾಲೀಕರ ಮತ್ತು ಕಾರ್ಮಿಕ ಮುಖಂಡರನ್ನು ಒಳಗೊಂಡು ಜಂಟಿ ಸಭೆ ಏರ್ಪಡಿಸಬೇಕು ಎಂದು ಒತ್ತಾಯಿಸಿದರು.

## ಮಿನಿ ನ್ಯೂಸ್

### ಶಾಂತಿ ಸೌಹಾರ್ದತೆಯಿಂದ ಬಕ್ರೀದ್ ಹಬ್ಬ ಆಚರಿಸಿ

• ಉದಯವಾಹಿನಿ, ಗುಡಿಬಂಡೆ

ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ಹಬ್ಬವನ್ನು ಪ್ರತಿಯೊಬ್ಬರೂ ಜಾತಿ, ಮತ ಭೇದವಿಲ್ಲದೆ ಪರಸ್ಪರ ಪ್ರೀತಿ, ಶಾಂತಿ ಹಾಗೂ ಸೌಹಾರ್ದತೆಯಿಂದ ಆಚರಿಸಬೇಕು ಎಂದು ಗುಡಿಬಂಡೆ ಆರಕ್ಷಕ ವೃತ್ತ ನಿರೀಕ್ಷಕ ಮುನಿಕೃಷ್ಣ ತಿಳಿಸಿದರು.

ಪಟ್ಟಣದ ಗಜನಾಣ್ಯ ಪಟ್ಟುಸಾಲೆಯಲ್ಲಿ ಗುಡಿಬಂಡೆ ಪೊಲೀಸ್ ಠಾಣೆ ವತಿಯಿಂದ ಆಯೋಜಿಸಿದ್ದ ಬಕ್ರೀದ್ ಹಬ್ಬದ ಶಾಂತಿ ಸಭೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿಂದೂ ಮುಸ್ಲಿಂ ಎಂಬ ಬೇಧಭಾವವಿಲ್ಲದೆ ಸೌಹಾರ್ದತೆಯಿಂದ ಎಲ್ಲರೂ ಜೀವನ ಸಾಗಿಸಬೇಕು. ಈ ನಿಟ್ಟಿನಲ್ಲಿ ಗುಡಿಬಂಡೆಯಲ್ಲಿ ಅನಾದಿ ಕಾಲದಿಂದಲೂ ಯಾವುದೇ ಕೋಮು ಗಲಭೆಗಳಿಗೆ ಆಸ್ಪದ ನೀಡದೇ ಎಲ್ಲರೂ ಅಣ್ಣ ತಮ್ಮಂದಿರಂತೆ ಬದುಕುತ್ತಿದ್ದಾರೆ.

ಅದೇ ರೀತಿ, ಮುಂದಿನ ದಿನಗಳಲ್ಲೂ ಮುಂದು ವರೆಯಬೇಕು. ಬಕ್ರೀದ್ ಹಬ್ಬವನ್ನು ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದಂತೆ ಶಾಂತಿ ಯುತವಾಗಿ ಆಚರಣೆ ಮಾಡಿ ಎಂದು ಸಲಹೆ ನೀಡಿದರು. ಬಳಿಕ ಮುಸ್ಲಿಂ ಮುಖಂಡರು ಸಭೆಯಲ್ಲಿ ಮಾತನಾಡಿ, ಇಡೀ ದೇಶದಲ್ಲಿಯೇ ಹಿಂದೂ ಮುಸ್ಲಿಂ ಸಮುದಾಯಗಳು ಒಗ್ಗಟ್ಟಿನಿಂದ ಬದುಕುತ್ತಿರುವುದು ಗುಡಿಬಂಡೆಯಲ್ಲಿ ಎಂದರೇ ತಪ್ಪಾಗಲಾರದು.

### ಹಳ್ಳಿಮಾಳ ಪಿಎಸಿಎಂಎಸ್ ಅಧ್ಯಕ್ಷರಾಗಿ ಸಿ.ರವಿ ಅವಿರೋಧ ಆಯ್ಕೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಮನಗರ

ತಾಲ್ಲೂಕಿನ ಹಳ್ಳಿಮಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಸಿ.ರವಿ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಸಂಘದ ಅಧ್ಯಕ್ಷರಾಗಿದ್ದ ಅನುಸೂಯಮ್ಮ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಸಂಘದಲ್ಲಿ ಗುರುವಾರ ಚುನಾವಣೆ ನಡೆಯಿತು. ಸಿ.ರವಿ ಹೊರತುಪಡಿಸಿ ಬೇರಾವ ನಿರ್ದೇಶಕರು ನಾಮಪತ್ರ ಸಲ್ಲಿಸದ ಕಾರಣ ಸಿ.ರವಿ ಹಳ್ಳಿಮಾಳ ಪಿಎಸಿಎಂಎಸ್ ಅಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ರಿಟರ್ನಿಂಗ್ ಅಧಿಕಾರಿ ಕೆ.ಟಿ.ಉಮೇಶ್ ಘೋಷಿಸಿದರು. ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸಿ.ರವಿ ಮಾತನಾಡಿ, ಸಹಕಾರಿ ಸಂಸ್ಥೆಯೊಂದಕ್ಕೆ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ರೈತರ ಸೇವೆ ಮಾಡಲು ಸಿಕ್ಕ ಒಳ್ಳೆಯ ಅವಕಾಶ ಎಂದು ಭಾವಿಸಿದ್ದೇನೆ. ಎಲ್ಲಾ ನಿರ್ದೇಶಕರು ಸೇರಿ ನನ್ನನ್ನು ಅಧ್ಯಕ್ಷರಾಗಿ ಅವಿರೋಧ ಆಯ್ಕೆ ಮಾಡಿದ್ದು ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಹಳ್ಳಿಮಾಳ ವಿಎಸ್‌ಎಸ್‌ಎಸ್‌ಎನ್ ತಾಲ್ಲೂಕಿನಲ್ಲಿ ಒಳ್ಳೆಯ ಹೆಸರು ಪಡೆದಿದೆ. ಆಡಳಿತ ಮಂಡಳಿಯವರು ಎಲ್ಲರೂ ರೈತರಿಗೆ ಉತ್ತಮ ಸೇವೆ ಒದಗಿಸುವ ಮೂಲಕ ರೈತರ ಹಿತ ಕಾಪಾಡುವ ನಿಟ್ಟಿನಲ್ಲಿ ಕೆಸಿಸಿ, ಅಲ್ಪಾವಧಿ, ಮಧ್ಯಾಮಾವಧಿ, ಧೀರ್ಘಾವಧಿ ಸಾಲಗಳ ಜೊತೆಗೆ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ ಸಾಲ ಸೌಲಭ್ಯ ನೀಡಿ ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಶ್ರಮಿಸುತ್ತೇನೆ. ಈ ಸೊಸೈಟಿಯನ್ನು ರೈತ ಸ್ನೇಹಿಯಾಗಿ ರೂಪಿಸಲು ಶ್ರಮಿಸುವುದಾಗಿ ಹೇಳಿದರು.

ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಕಾರ್ಯದರ್ಶಿ ಹಾಗೂ ವಕೀಲ ತಿಮ್ಮೇಗೌಡ ಸೇರಿದಂತೆ ಹಲವರು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

### ಡಿಕೆಶಿ ವಿರುದ್ಧ ಹಗುರ ಮಾತು ಸರಿಯಲ್ಲ : ನಿಖಿಲ್ ವಿರುದ್ಧ ವಾಗ್ದಾಳಿ

• ಉದಯವಾಹಿನಿ, ರಾಮನಗರ

ಉದಯವಾಹಿನಿ ಚಿತ್ರ


ಡಿ.ಕೆ.ಶಿವಕುಮಾರ್ ಅವರ ಬಗ್ಗೆ ಹಗುರವಾಗಿ ಮಾತನಾಡಿರುವ ಜೆಡಿಎಸ್ ಯುವ ಮುಖಂಡ ನಿಖಿಲ್ ಕುಮಾರಸ್ವಾಮಿ ಅವರ ವಿರುದ್ಧ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಾಣಕಲ್ ನಟರಾಜ್ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಮೊಮ್ಮಗ, ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಅವರ ಮಗ ಎಂಬ ಕಾರಣದಿಂದ ಜನರಲ್ಲಿ ಹೆಸರು ಉಳಿಸಿಕೊಂಡಿದ್ದಾರೆಯೇ ಹೊರತು, ನಿಖಿಲ್ ಎನ್ನುವ ಹೆಸರಿಗೆ ಸಾಮಾನ್ಯ ಜನರು ಸಹ ಗೌರವ ನೀಡುವುದಿಲ್ಲ. ಇದನ್ನು ಅರಿತುಕೊಂಡು ಗೌರವದಿಂದ ನಡೆದುಕೊಳ್ಳಬೇಕು ಎಂದು ಹೇಳಿದರು.

ಎಚ್.ಡಿ.ದೇವೇಗೌಡರು ಸಾತನೂರು ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದಾಗ ಡಿ.ಕೆ.ಶಿವಕುಮಾರ್ ಅವರು ಪಕ್ಷೇತರ ಅಭ್ಯರ್ಥಿಯಾಗಿ ದೇವೇಗೌಡರ ವಿರುದ್ಧವಾಗಿ ಸ್ಪರ್ಧೆ ಮಾಡಿದ್ದರು ಈ ಸಂಧರ್ಭದಲ್ಲಿ ನಿಖಿಲ್ ಅವರು ಹುಟ್ಟಿರಲಿಲ್ಲ. ಡಿಕೆಶಿ ಅವರು ರಾಜಕೀಯಕ್ಕೆ 45 ವರ್ಷಗಳಾಗಿದ್ದು ಅವರಿಗೆ ಇರುವಷ್ಟು ರಾಜಕೀಯ ಅನುಭವ ಇಲ್ಲದ ನಿಖಿಲ್ ಅವರು, ಡಿಕೆಶಿ ಅವರ ಬಗ್ಗೆ ಹಗುರವಾಗಿ ಮಾತನಾಡಿದರೆ ಯಾವುದೇ ಕಾರ್ಯಕರ್ತರು ಸಹಿಸುವುದಿಲ್ಲ. ಇದು ಹೀಗೆಯೇ ಮುಂದುವರೆದರೆ ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಮುಖಂಡರಾದ ಹೊಸೂರು ರಾಜಣ್ಣ ಮಾತನಾಡಿ, ಕುಮಾರಸ್ವಾಮಿ ಅವರು ಸಿಎಂ ಆಗಿದ್ದಾಗ ಬಿಡದಿ ಟೌನ್ ಷಿಪ್ ಮಾಡಲು ಯೋಜನೆ ಕೈಗೆತ್ತಿಕೊಂಡರು. ಈ ಸಂದರ್ಭದಲ್ಲಿ ಅವರಿಗೆ ಬಡ ರೈತರು, ಜಾನುವಾರುಗಳು ಕಣ್ಣಿಗೆ ಕಾಣಲಿಲ್ಲ. ಇದೀಗ ಅವರಿಗೆ ರೈತರ ಬಗ್ಗೆ ಪ್ರೀತಿ ಹೆಚ್ಚಾಗಿದ್ದು, ಏನು ತಿಳಿಯದ ಜನರನ್ನು ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಸರ್ಕಾರದ ವಿರುದ್ಧ ಎತ್ತಿಕಟ್ಟುತ್ತಿದ್ದಾರೆ ಎಂದು ಕಿಡಿ ಕಾರಿದರು. ರೈತ ಮುಖಂಡ ಬೈರಮಂಗಲ ಸಿದ್ಧರಾಜು ಮತ್ತಿತರು ಇದ್ದರು.

### ಸಾಲದ ಹಣ ವಾಪಸ್ ಕೇಳಲು ಹೋದ ವ್ಯಕ್ತಿ ಮೇಲೆ ಹಲ್ಲೆ ಆರೋಪ

• ಉದಯವಾಹಿನಿ, ಮೈಸೂರು

ಸಾಲದ ಹಣ ವಾಪಸ್ ಕೇಳಲು ಹೋದ ವ್ಯಕ್ತಿ ಮೇಲೆ ಎಂಎಲ್‌ಸಿ ಅಡಗೂರು ವಿಶ್ವನಾಥ್ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ ಮೈಸೂರಿನ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಂಗ್ರೆಸ್ ಮುಖಂಡ ಕೋಟೆಹುಂಡಿ ಮಹದೇವ್ ಅವರು ನೀಡಿದ ದೂರಿನ ಮೇರೆಗೆ ಈ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಆರಂಭಿಸಿದ್ದಾರೆ. ಜಲದರ್ಶಿನಿಯಲ್ಲಿ ವಿಶ್ವನಾಥ್ ರವರು ಇರುವಾಗ ಹಣ ಕೇಳಲು ಹೋದ ವೇಳೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದರೆಂದು ಕಾಂಗ್ರೆಸ್ ಮುಖಂಡ ಕೋಟೆಹುಂಡಿ ಮಹದೇವು ಆರೋಪಿಸಿ ನ್ಯಾಯಾಲಯದ ಆದೇಶದಂತೆ ಪ್ರಕರಣ ದಾಖಲಿಸಿದ್ದಾರೆ.

2013ರಲ್ಲಿ ವಿಶ್ವನಾಥ್ ರವರು ಸಂಸದರಾಗಿದ್ದಾಗ ಕೋಟೆಹುಂಡಿ ಮಹದೇವು ಎಂಟಿಬಿ ನಾಗರಾಜ್ ಮುಖಾಂತರ ವಿಶ್ವನಾಥ್ ಹಾಗೂ ಅವರ ಮಗ ಅಮಿತ್ ದೇವರಹಟ್ಟಿ ರವರಿಗೆ 55 ಲಕ್ಷ ನೀಡಿದ್ದಾರೆ.

ಅಂತರಾಳದಿಂದ.. EDITORIAL

# ನರೇಗಾ ಅನುಷ್ಠಾನದಲ್ಲಿ ರಾಜಕೀಯ ಕಾರ್ಮಿಕರಿಗೆ ಅನ್ಯಾಯವಾಗದಿರಲಿ



ಅಪ್ಪ-ಅಮ್ಮಂದಿರ ಜಗಳದಲ್ಲಿ ಕೂಸು ಬಡವಾಯಿತು ಎನ್ನುವ ಗಾದೆ ಮಾತು ರಾಜ್ಯದಲ್ಲಿ ನರೇಗಾ ಯೋಜನೆಯ ಅನುಷ್ಠಾನದ ವಿಷಯದಲ್ಲಿ ಅಕ್ಷರಶಃ ನಿಜವಾಗಿದೆ. ಕಾರ್ಮಿಕರಿಗೆ ವರ್ಷಕ್ಕೆ ಕನಿಷ್ಠ 100 ದಿನಗಳ ಕೆಲಸವನ್ನು ಖಾತರಿಪಡಿಸುವ ಉದ್ದೇಶದೊಂದಿಗೆ ದಶಕದ ಹಿಂದೆ ಅನುಷ್ಠಾನಗೊಳಿಸಲಾಗಿದ್ದ ಈ ಯೋಜನೆ ಈಗ ಕೇಂದ್ರ ಮತ್ತು ರಾಜ್ಯ ಸರಕಾರಗಳ ರಾಜಕೀಯ ಜಿದ್ದಾಜಿದ್ದಿಯ ಪರಿಣಾಮವೋ ಎಂಬಂತೆ ತೀವ್ರ ಹಿನ್ನಡೆಯನ್ನು ಕಾಣುವಂತಾಗಿದೆ.

ಕಳೆದ ಹಲವು ವರ್ಷಗಳಿಂದ ನರೇಗಾ ಯೋಜನೆಯಡಿ ಮಾನವ ದಿನಗಳ ಸೃಜನೆಯಲ್ಲಿ ಸದಾ ಮುಂಚೂಣಿಯಲ್ಲಿದ್ದ ಕರ್ನಾಟಕ ಈ ಬಾರಿ ತೀವ್ರ ಹಿಂದುಳಿದಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವಣ ಹಗ್ಗಜಗ್ಗಾಟದ ದುಷ್ಪರಿಣಾಮ ಬಡ ಕೂಲಿಯಾಳುಗಳ ಮೇಲೆ ಬಿದ್ದಿದ್ದು ಯೋಜನೆಯ ಮೂಲ ಆಶಯಕ್ಕೆ ಧಕ್ಕೆ ತಂದೊಡ್ಡಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಮಿಕರಿಗೆ ವರ್ಷಕ್ಕೆ ಕೌಶಲರಹಿತ 100 ದಿನಗಳ ಉದ್ಯೋಗವನ್ನು ಸೃಜಿಸುವ ಗುರಿಯೊಂದಿಗೆ ಈ ಯೋಜನೆಯನ್ನು ಕೇಂದ್ರ ಸರಕಾರ ಜಾರಿಗೊಳಿಸಿತ್ತು. ಈ ಯೋಜನೆಯ ಪೂರ್ಣ ವೆಚ್ಚವನ್ನು ಕೇಂದ್ರ ಸರಕಾರವೇ ಭರಿಸುತ್ತಿತ್ತು. ಆದರೆ ಈ ಯೋಜನೆ ದುರ್ಬಳಕೆಯಾಗುತ್ತಿರುವ ಕುರಿತಂತೆ ಆರೋಪಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಯೋಜನೆಯನ್ನು ಆಮೂಲಾಗ್ರವಾಗಿ ಬದಲಾಯಿಸಿ, ಮಹತ್ತರ ಸುಧಾರಣ ಕ್ರಮಗಳನ್ನು ಕೈಗೊಂಡು ಯೋಜನೆಗೆ ವಿಕಸಿತ ಭಾರತ-ಗ್ಯಾರಂಟಿ ಫಾರ್ ರೋಜ್‌ಗಾರ್ ಆಂಡ್ ಅಜೀವಿಕಾ ಮಿಷನ್ (ವಿಬಿ-ಜಿರಾಮ್ ಜಿ) ಎಂದು ಪುನರ್ ನಾಮಕರಣ ಮಾಡಿತ್ತು. ಹಾಲಿ ಜಾರಿಯಲ್ಲಿರುವ ಯೋಜನೆಗಳಲ್ಲಿನ ಲೋಪದೋಷಗಳನ್ನು ದೂರಮಾಡುವುದರ ಜತೆಯಲ್ಲಿ ಈ ಯೋಜನೆಯ ಅನುಷ್ಠಾನದಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಕಾರ್ಮಿಕರಿಗೆ ಬಯೋ ಮೆಟ್ರಿಕ್, ಇ-ಕೆವೈಸಿ ಸಹಿತ ವಿವಿಧ ಸುಧಾರಣ ಉಪಕ್ರಮಗಳನ್ನು ಪರಿಚಯಿಸಿತ್ತು. ಅಷ್ಟು ಮಾತ್ರವಲ್ಲದೆ ಯೋಜನೆಯ ವೆಚ್ಚದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ಪಾಲು ಶೇ. 60 ಮತ್ತು ಶೇ. 40 ಎಂದು ನಿಗದಿಪಡಿಸುವ ಮೂಲಕ ರಾಜ್ಯ ಸರಕಾರಗಳು ಬೇಕಾಬಿಟ್ಟಿಯಾಗಿ ಈ ಯೋಜನೆಯ ಅನುದಾನವನ್ನು ಬಳಸದಂತೆ ಮೂಗುದಾರ ಹಾಕಿದೆ.

ಕೇಂದ್ರ ಸರಕಾರ ಯೋಜನೆಯ ಹೊಸ ಮಾರ್ಗಸೂಚಿಯನ್ನು ಬಿಡುಗಡೆ ಮಾಡಲು ಕೊಂಚ ನಿಧಾನ ಮಾಡಿದ್ದರಿಂದ ಎಪ್ರಿಲ್‌ನಲ್ಲಿ ಪ್ರಸಕ್ತ ಸಾಲಿನ ಕಾಮಗಾರಿಗಳನ್ನು ಈ ಯೋಜನೆಯಡಿ ಕೈಗೆತ್ತಿಕೊಳ್ಳಲು ಸಾಧ್ಯವಾಗಿಲ್ಲ. ಆದರೆ ಈಗ ಕೇಂದ್ರ ಸರಕಾರ ಮಾರ್ಗಸೂಚಿ ಬಿಡುಗಡೆ ಮಾಡಿ, ಜುಲೈ ಒಂದರಿಂದ ವಿಬಿ-ಜಿ ರಾಮ್ ಜಿ ಯೋಜನೆ ಅನುಷ್ಠಾನಗೊಳ್ಳಲಿದೆ ಎಂದು ಘೋಷಿಸಿದೆಯಾದರೂ ರಾಜ್ಯ ಸರಕಾರ ಮಾತ್ರ ಹಳೆಯ ನರೇಗಾ ಯೋಜನೆಯನ್ನೇ ಮುಂದುವರಿಸುವುದಾಗಿ ಬಿಗಿ ಪಟ್ಟು ಹಿಡಿದಿದೆ. ರಾಜ್ಯ ಸರಕಾರದ ಈ ನಡೆಯಿಂದಾಗಿ ನರೇಗಾ ಯೋಜನೆಯಡಿ ಮಾನವ ದಿನಗಳ ಸೃಜನೆಯ ಮೇಲೆ ಗಂಭೀರ ಪರಿಣಾಮ ಬೀರಿದ್ದು, ವಿವಿಧ ಕಾಮಗಾರಿಗಳು ಸ್ಥಗಿತಗೊಳ್ಳುವಂತಾಗಿದೆ.

ಕೇಂದ್ರ ಸರಕಾರ ಯೋಜನೆಯ ಹೊಸ ಮಾರ್ಗಸೂಚಿಯನ್ನು ಈ ಎಲ್ಲಾ ಗೊಂದಲಗಳಿಂದಾಗಿ ಕಾರ್ಮಿಕರು ಉದ್ಯೋಗವಿಲ್ಲದೆ ಪರದಾಡುವಂತಾಗಿದೆ. ಈಗಾಗಲೇ ರಾಜ್ಯ ಸರಕಾರ ನರೇಗಾ ಯೋಜನೆಯಡಿ ಕೆಲವು ಕಾಮಗಾರಿಗಳನ್ನು ಅದರಲ್ಲೂ ಮುಖ್ಯವಾಗಿ ಮಳೆಗಾಲದ ಪೂರ್ವಭಾವಿ ಕೆಲಸಗಳನ್ನು ಈ ಯೋಜನೆಯಡಿ ಕೈಗೆತ್ತಿಕೊಂಡು ಈ ಕಾಮಗಾರಿಗಳನ್ನು ಪೂರ್ಣಗೊಳಿಸಬಹುದಾಗಿತ್ತು. ಇನ್ನು ಕೆಲವೇ ದಿನಗಳಲ್ಲಿ ಮಳೆಗಾಲ ಆರಂಭಗೊಳ್ಳಲಿದ್ದು ಇನ್ನಾದರೂ ಸರಕಾರ ರಾಜಕೀಯ ಪ್ರತಿಷ್ಠೆಯನ್ನು ಬದಿಗಿರಿಸಿ ಯೋಜನೆಯಡಿ ನಿರ್ವಹಿಸಬಹುದಾದ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕಾರ್ಮಿಕರಿಗೆ ಉದ್ಯೋಗವನ್ನು ದೊರಕಿಸಿಕೊಡುವ ಕೆಲಸ ಮಾಡಬೇಕು. ರಾಜಕೀಯ, ಕಾನೂನು ಹೋರಾಟಗಳೇನೇ ಇರಲಿ, ಬಡ ಕಾರ್ಮಿಕರಿಗೆ ವರ್ಷಕ್ಕೆ ಕನಿಷ್ಠ ನೂರು ದಿನಗಳ ಕೆಲಸ ಕೊಡಿಸುವ ನಿಟ್ಟಿನಲ್ಲಿ ಯೋಚನೆ, ಯೋಜನೆ ರೂಪಿಸಿಕೊಳ್ಳುವುದು ತುಂಬಾ ಅಗತ್ಯವಾಗಿದೆ.

# ರಾಮಾಯಣ



ತನ್ನ ಉದ್ದೇಶದಲ್ಲಿ ವಿಫಲನಾದ ರಾವಣನು ರಕ್ಕಸಿಯರಿಗೆ ಸೂಚನೆಯಿತ್ತು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಅತಿ ಕ್ರೂರವಾದ ಕ್ಷಿತಿತನುಜೆಯ ನಿಷ್ಠುರ ಮಾತುಗಳನ್ನು ಕೇಳಿದ ದೈತ್ಯೇಂದ್ರನು ಅತುಳ ಕೋಪದಿಂದ ಮೊರೆಯುತ್ತ, ಕತ್ತಿಯನ್ನು ಜಳಪಿಸುತ್ತ, ನೆಲವನ್ನು ಒದ್ದು ಸೀತೆಯನ್ನು ಕತ್ತರಿಸಿಬಿಡಲು ಮುಂದಾದಾಗ, ಅದನ್ನು ಕಂಡು ಮಂಡೋದರಿಯು ಗಂಡನ ಪಾದಗಳನ್ನು ಹಿಡಿದುಕೊಂಡು ದೈನ್ಯದಿಂದ ಯಾಚಿಸಿದಳು: ಮೂರುಲೋಕದ ಮಹಾವೀರನೇ, ಅಪ್ರತಿಮ ಸಾಹಸಿಯೇ, ವಿಮಲಸತ್ಕೀರ್ತಿಯುತನೇ, ನಿನ್ನಂತಹವನು ಒಬ್ಬ ಹೆಣ್ಣನ್ನು ವಧೆಗೈಯುವುದು ಸಲ್ಲದು, ಇದನ್ನು ನೀನೇನು ಅರಿಯೆಯಾ? ಇವಳಿಗಿಂತ ರೂಪಸಂಪನ್ನತೆಗಳನ್ನು ಪಡೆದ ಅನೇಕ ಸುರಪನ್ನಗ ಕಾಂತೆಯರು ನಿನ್ನ ಕೃಪಾದೃಷ್ಟಿ ಬೀಳುವುದೇ ಎಂದು ಕಾಯುತ್ತಿದ್ದಾರೆ.

ಸೀತೆಯು ಒಲಿಯಲಿಲ್ಲವೆಂದು ಇಷ್ಟು ಬೇಸರವೇ? ಒಂದೆ ಜಾತಿಯ ಜೀವಿಗಳಿಗೆ ಆಕರ್ಷಣೆಯುಂಟಾಗುವುದಲ್ಲದೆ ಭಿನ್ನ ಜಾತಿಯವರಲ್ಲಿ ಸಂಭವಿಸುವುದೇ? ಗಿಳಿಗೆ ಕೋಗಿಲೆಯಲ್ಲಿ ಕಾಮಭಾವನೆಯುಂಟಾದೀತೇ? ಕೃಪಣೆಯಲ್ಲಿ ದುಃಖಿತೆಯಲ್ಲಿ ಈ ರೀತಿ ಭಾವನೆಯನ್ನು ಹೊಂದುವುದರಿಂದೇನು ಫಲ? ಅನುರೂಪಳಾದವಳೊಡನೆ ಕೂಡಿದರೆ ಸುಖವೇ ಹೊರತು ಬೇರೆಯವರ ಜೊತೆಗಲ್ಲ.

ನಿನ್ನ ಮನಃಪೂರ್ತಿಯಾಗಿ ನನ್ನೊಡನೆ ಕಾಮಕ್ರೀಡೆಯನ್ನೆಸಗಿ ಸಂಪ್ರೀತನಾಗು, ಈ ಬಡ ಮನುಷ್ಯಳ ಮೇಲೆ ಕೋಪಗೊಳ್ಳುವುದು ನಿಷ್ಫಲ.' ಹೆಂಡತಿಯ ಮಾತುಗಳನ್ನು ಕೇಳಿದ ರಾವಣೇಶ್ವರನು ನಸುನಗುತ್ತ ತನಗೆ ಹಿತಕರರಾದ ರಕ್ಕಸಿಯರನ್ನು ಕರೆದು, ಸಾಮದಾನಗಳಿಂದ ಜನಕಜೆಯನ್ನು ವಶಪಡಿಸಿಕೊಳ್ಳಲು ಆಜ್ಞೆಯಿತ್ತು ಹಿಂದಿರುಗಿದ. ಇತ್ತ ಭೂಮಿಸುತೆಯು ತನ್ನ ಚಿತ್ತನಿಲಯದಲ್ಲಿ ರಾಮಪುರದರಸನ ಸುಮೂರ್ತಿಯನ್ನು ಪರಿಭಾವಿಸುತ್ತ ಸಮಾಧಾನಗೊಂಡಳು.

**ತ್ರಿಜಟೆಯ ಕನಸು; ಶುಭನಿಮಿತ್ತಗಳಿಂದಾಗಿ ವೈದೇಹಿಯು ಸಂತಸಗೊಂಡುದು:**

ಅಗಜೆಯೇ ಮುಂದಾದುದನ್ನು ಹೇಳುತ್ತೇನೆ ರಾವಣನು ಹಲುಬುತ್ತ ಆ ಕಡೆ ಹೋದರೆ, ಇತ್ತ ಹಲವು ದುರ್ಮಾರ್ಗಿಗಳಾದ ರಕ್ಕಸಿಯರು ತಮ್ಮ ಕೆದರಿದ ಗಂಟುಗಂಟಾದ ಕೆಂಗೂದಲು, ಕೋರೆದಾಡೆಗಳು ಮುಂತಾದ ಶತವಿಕಾರಗಳನ್ನು ತೋರಿಸುತ್ತ ನೆಲದಣುಗಿಯನ್ನು ಭಯಪಡಿಸಲು ಪ್ರಯತ್ನಿಸುತ್ತ ಪರಿಪರಿಯಾದ ಕರ್ಕಶ ಮಾತುಗಳನ್ನು ಬಳಸಿಗೋಳುಹುಯ್ದುಕೊಂಡರು. ''ದಶಕಂಠನ ಸಿರಿಯನ್ನು ಲೆಕ್ಕಹಾಕಲು ಸಾಧ್ಯವಿಲ್ಲ ಅವನ ಪರಾಕ್ರಮವೋ ಎದುರಿಸಲಸಳವಲ್ಲ, ನಾನಾ ಕಲೆಗಳನ್ನವನು ಬಲ್ಲ, ಬ್ರಹ್ಮಕುಲದವನಾದ ಆತನು ವಿಶ್ರವಸಿನ ಮಗ, ಹರನ ಸಖ, ಇಂದ್ರನಿಗೇ ಅಭಯವನ್ನೀಯುವ ಬಲಿಷ್ಟ, ಶರಣಾಗತವತ್ಸಲ, ರಕ್ಕಸರ ದೇವ ಅಂತಹವನನ್ನು ತಿರಸ್ಕರಿಸಿ, ಸೀತೆಯೇ ಮೂರ್ಯಳಾಗಬೇಡ ಎಂದು ವಿಲಪಿಸಿದರು.

ಯುದ್ಧದಲ್ಲಿ ಬೆದರಿದ ದೇವತೆಗಳೂ ದಿಕ್ಪಾಲಕರೂ ಇವನ ಸೇವಾವೃತ್ತಿಯನ್ನು ಕೈಗೊಂಡವರು. ಸೂರ್ಯಚಂದ್ರಮರುತ್ತುಗಳೆಲ್ಲ ರಕ್ಕಸೋತ್ತಮನ ಸೇವಾತುರರು. ಅವನ ಅರಮನೆಯಲ್ಲಿ ಲಕ್ಷ್ಮಿಯು ದಾಸಿಯಾಗಿದ್ದಾಳೆ, ಅಂತಹವನನ್ನು ಮನ್ನಿಸದೆ ನೀನು ದಡ್ಡಳಾದೆ' ಎಂದು ಹರಿಜಟೆಯೆಂಬ ಒಬ್ಬ ರಕ್ಕಸಿ ಕೋಪಿಸಿಕೊಂಡ ರಾವಣನ ಅಂತಃಪುರದಲ್ಲಿ ಅಸಂಖ್ಯಾತ ನಾರಿಯರನ್ನು ಪರಿಗಣಿಸದೆ ನಿನ್ನ ಮೋಹಪಾಶಕ್ಕೊಳಗಾಗಿ ತ್ರಿಜಗದಧಿನಾಥನೇ ಬಂದು ಕೇಳಿಕೊಂಡರೂ, ಸಾಮ್ರಾಜ್ಯಸುಖವನ್ನು ಅನುಭವಿಸುವುದನ್ನು ಬಿಟ್ಟು ದುರ್ಬುದ್ಧಿಯಿಂದ ದೂರ ಕಳಿಸಿದೆ' ಎಂದು ಪ್ರಘಸೆಯು ಕೋಪದಿಂದ ಕೆಂಗಣ್ಣುಗಳನ್ನು ಅಗಲಿಸಿದಳು.

ಮುಂದುವರೆಯುವುದು

# ರಾಜಾರಾಮ್ ಮೋಹನ್ ರಾಯ್ ರವರ 254ನೇ ವರ್ಷದ ಜನ್ಮ ಜಯಂತಿ

ರಾಜಾರಾಮ್ ಮೋಹನ್ ರಾಯ್ ರವರು ಪಶ್ಚಿಮ ಬಂಗಾಳದ ಒಂದು ಸಣ್ಣ ಹಳ್ಳಿಯಲ್ಲಿ 1772 ಮೇ 22 ರಂದು ಜನಿಸಿದರು. ಬಾಲ್ಯದಲ್ಲಿ ತಂದೆ ತಾಯಿಗಳಿಂದ ಉತ್ತಮ ವಿದ್ಯಾಭ್ಯಾಸ ದೊರೆಯಿತು. ಜೊತೆಗೆ ಸುಸಂಸ್ಕೃತ ಕುಟುಂಬದ ವಾತಾವರಣದಲ್ಲಿ ಬೆಳೆದು ಸಂಸ್ಕೃತ, ಪರ್ಷಿಯನ್, ಹಿಬ್ರೋ, ಗ್ರೀಕ್ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅಗಾಧ ಪಾಂಡಿತ್ಯವನ್ನು ಗಳಿಸಿದರು. 1803ರಲ್ಲಿ ಈಸ್ಟ್ ಇಂಡಿಯಾ ಕಂಪನಿಯಲ್ಲಿ ಉದ್ಯೋಗಿಯಾಗಿ ಸೇರಿ ವಿವಿಧ ಕೆಲಸಗಳಲ್ಲಿ ಕರ್ತವ್ಯ ನಿಷ್ಠೆಯಿಂದ ನಿರ್ವಹಿಸಿದರು. **ರಾಜಾರಾಮ್ ಮೋಹನ್ ರಾಯ್ ರವರ ಸಾಧನೆಗಳು:** ಬಹುಭಾಷಾ ಪಂಡಿತರಾಗಿದ್ದು ಹಲವಾರು ಧರ್ಮಗಳ ತತ್ವಗಳನ್ನು ಅಭ್ಯಾಸ ಮಾಡಿದ್ದರು.

1 ರಾಜಾರಾಮ್ ಮೋಹನ್ ರಾಯ್ ಅವರು ಬ್ರಹ್ಮ ಸಮಾಜವನ್ನು ಸ್ಥಾಪಿಸಿದರು. ಅದು ಎಲ್ಲಾ ಸಾಮಾಜಿಕ, ಧಾರ್ಮಿಕ ಕಟ್ಟುನಿಟ್ಟುಗಳಿಂದ ಮುಕ್ತಗೊಂಡಿತ್ತು. ವೇದ ಉಪನಿಷತ್ತುಗಳಲ್ಲಿದ್ದ ನಿಜವಾದ ಸಾರವನ್ನು ಜನತೆ ಗ್ರಹಿಸುವಂತೆ ಮಾಡಿದರು.

2 ಇವರು ಒಬ್ಬ ಬುದ್ಧಿಜೀವಿ ಹಾಗೂ ದೂರದೃಷ್ಟಿ ಉಳ್ಳವರಾಗಿದ್ದು, ಇಂಗ್ಲಿಷ್ ಭಾಷೆ ದೇಶದ ಪ್ರಗತಿಗೆ ಅಗತ್ಯವೆಂದು ತಿಳಿದಿದ್ದರು. ಹಾಗೆಯೇ ವಿಜ್ಞಾನ ಮತ್ತು ತಂತ್ರಜ್ಞಾನಗಳು ನಾಡಿನ ಯುವಕರ ಜ್ಞಾನ ಕ್ಷಿತಿಜವನ್ನು ವಿಸ್ತರಿಸುವುದಲ್ಲದೆ ಜೀವನದ ಸ್ಥಿತಿಯನ್ನು ಉತ್ತಮಗೊಳಿಸುವ ಸಾಧನವೆಂದು ಭಾವಿಸಿದ್ದರು. ಆಧುನಿಕ ಚಿಂತನೆಗಳನ್ನು ನಮ್ಮ ಜನರು ಗ್ರಹಿಸುವಂತಾಗಬೇಕೆಂಬುದು ಅವರ ಮೂಲ ಉದ್ದೇಶವಾಗಿತ್ತು.

3 ಸಮಾಚಾರ ದರ್ಪಣ ಎಂಬ ವಾರಪತ್ರಿಕೆಯನ್ನು ಆರಂಭಿಸಿ ಆ ಮೂಲಕ ಪಾಶ್ಚಾತ್ಯ ಸಾಹಿತ್ಯ, ಸಂಸ್ಕೃತಿ ಹಾಗೂ ಮುಖ್ಯವಾಗಿ ಅವರ ವೈಜ್ಞಾನಿಕ ಪ್ರಗತಿ, ವೈಚಾರಿಕ ದೃಷ್ಟಿ ಇವುಗಳನ್ನು ಭಾರತೀಯರ ಗಮನಕ್ಕೆ ತಂದರು. ಇವರ ವಿಚಾರಪೂರಿತ ಬರಹಗಳಿಂದ ಓದುಗರು ಆಧುನಿಕ ವಿಚಾರಗಳ ಪ್ರಭಾವಕ್ಕೆ ಒಳಗಾದರು.

4 ಭಾರತದಲ್ಲಿ ರೂಢಿಯಲ್ಲಿದ್ದ ಕ್ರೂರ ಸತಿ-ಸಹಗಮನ ಪದ್ಧತಿ ಯನ್ನು ನಿರ್ಮೂಲನೆ ಮಾಡಲು ಶ್ರಮಿಸಿದರು.

5 ಭಾರತೀಯ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಿದರು.

6 ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು.

7 ಬಾಲ್ಯ ವಿವಾಹ ಪದ್ಧತಿಯನ್ನು ಖಂಡಿಸಿ ಅದರ ವಿರುದ್ಧ ಚಳುವಳಿ ನಡೆಸಿದರು. 8 ಪತ್ರಿಕಾ ಸ್ವತಂತ್ರಕ್ಕಾಗಿ ಹೋರಾಟ ನಡೆಸಿದರು. ಶಾಸನಬದ್ಧ ಆಡಳಿತದ ಬಗ್ಗೆ ಅವರು ವ್ಯಕ್ತಪಡಿಸಿದ ವಿಚಾರಗಳು ಹೊಸ ರಾಜಕೀಯ ವಿಚಾರಗಳಿಗೆ ದಾರಿ ಮಾಡಿಕೊಟ್ಟವು.

ಪರಿಣಾಮವಾಗಿ 1885ರಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸ್ಥಾಪನೆಯಾಯಿತು. 9 ಬಂಗಾಳಿ ಗದ್ಯ ಸಾಹಿತ್ಯಕ್ಕೆ ಹೊಸ ಚೈತನ್ಯವನ್ನು ತುಂಬಿದ ಇವರು ಸಾಹಿತ್ಯ ಹೆಚ್ಚು ಆಲೋಚನಾಪರ ಹಾಗೂ ವೈಚಾರಿಕವಾಗುವಂತೆ ಶ್ರಮಿಸಿದರು.

ಹೀಗೆ ಇನ್ನೂ ಅನೇಕ ಜನಪರವಾದ ಲೋಕಕಲ್ಯಾಣ, ಲೋಕಹಿತಕೋಸ್ಕರ ಇವರು ರಾಷ್ಟ್ರದಲ್ಲಿ ಬ್ರಿಟೀಷ್ ಆಳ್ವಿಕೆ ಕಾಲದಲ್ಲಿ ಗಟ್ಟಿಯಾಗಿ ಸಮಾಜದಲ್ಲಿ ನಿಂತು ಸಮಾಜ ಸುಧಾರಕರಾಗಿ ಅನೇಕ ಸುಧಾರಣೆಗಳನ್ನು ಜಾರಿಗೆ ತರುವಲ್ಲಿ ಯಶಸ್ವಿಯಾದರು.


ರಾಜಾರಾಮ್ ಮೋಹನ್ ರಾಯ್ ಅವರಿಗೆ ಇಂಗ್ಲೆಂಡ್ ನಲ್ಲಿ ಅಪಾರವಾದ ಮಿತ್ರವರ್ಗ ಇದ್ದಿತು. ಒಮ್ಮೆ ಇಂಗ್ಲೆಂಡಿಗೆ ಹೋಗಿದ್ದಾಗ ಬ್ರಿಸ್ಟಲ್‌ನಲ್ಲಿ 1833 ಸೆಪ್ಟೆಂಬರ್ 27 ರಂದು ತಮ್ಮ 61ನೇ ವಯಸ್ಸಿನಲ್ಲಿ ಹಠಾತ್ ನಿಧನರಾದರು. ಇಂದು ಅವರ 254ನೇ ವರ್ಷದ ಜನ್ಮ ಜಯಂತಿ ದಿನ. ಇಂತಹ ಮಹಾನ್ ಚೇತನ ಹಾಗೂ ಸಮ-ಸಮಾಜ ಸುಧಾರಕರ ಶ್ರೇಷ್ಠರಲ್ಲಿ ಒಬ್ಬರಾದ ರಾಜಾರಾಮ್ ಮೋಹನ್ ರಾಯ್ ರವರನ್ನು ಸ್ಮರಿಸಿ ನೆನೆಯುತ್ತಾ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕಲಿ ಎಂದು ಹಾಗೂ ಅವರ ಆದರ್ಶಗಳನ್ನ ಭಾರತೀಯರಾದ ನಾವೆಲ್ಲರೂ ಪಾಲಿಸುವ ಸಂಕಲ್ಪ ಮಾಡೋಣ.

ರಾಜಾರಾಮ್ ಮೋಹನ್ ರಾಯ್ ಹೊಸ ರಾಜಕೀಯ ವಿಚಾರಗಳಿಗೆ ದಾರಿ



ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು




# ಇತ್ತೀಚಿನ ದಿನಗಳಲ್ಲಿ ಪತಿ ಪತ್ನಿಯ ಮಧುರ ಬಾಂಧವ್ಯದಲ್ಲಿ ಬಿರುಕು

ಮದುವೆ ಎಂಬುದು ಪೂರ್ವಜನ್ಮದಲ್ಲಿ ನಿರ್ಣಯವಾದ ಒಂದು ಪವಿತ್ರ ಸಂಬಂಧ ಗಂಡು ಹೆಣ್ಣನ್ನು ಬೆಸೆಯುವ ಸಂಪ್ರದಾಯದ ಸಂಬಂಧವೇ ಮದುವೆ. ಸಂಬಂಧಕ್ಕೆ ಬೆಲೆ ನೀಡುತ್ತ ಮಕ್ಕಳನ್ನು ಸಾಕಿರಿ ಜೀವನದಲ್ಲಿ ಒಳ್ಳೆಯ ಸಂಸ್ಕಾರವನ್ನು ಕಲಿಸಿರಿ ಪ್ರೀತಿ ವಿಶ್ವಾಸಕ್ಕೆ ಬೆಲೆ ಇಲ್ಲದ ಸಂಸಾರ ಬೇಕೆ? ನಂಬಿಕೆಯ ನೆಲೆಯಲಿ ಮದುವೆಯಾಗಬೇಕು. ಜಗತ್ತಿನಲ್ಲಿ ಮದುವೆಗೆ ವಿಶೇಷ ಸ್ಥಾನವಿದೆ. ಲಿವಿಂಗ್ ಟು ಗೆದರ್ ಎಂಬ ಕೆಟ್ಟ ಸಂಸ್ಕೃತಿಯನ್ನು ಬಿಟ್ಟುಬಿಡಿ ಸಂಸ್ಕೃತಿಗೆ ವಿರುದ್ಧವಾಗಿ ನಡೆಯದಿರಿ. ಎಲ್ಲರಿಗೂ ಸ್ಫೂರ್ತಿದಾಯಕ ರಾಗಿ ಬಾಳಿರಿ ಇದು ಸ್ಪರ್ಧಾತ್ಮಕ ಜಗತ್ತು. ಹಾಗೆಂದು ನಮ್ಮ ಸಂಸ್ಕೃತಿಯನ್ನು ಮರೆಯಲು ಸಾಧ್ಯವಿಲ್ಲ.

ನಮ್ಮ ಸಂಸ್ಕೃತಿಯಲ್ಲಿ ಗಂಡ ಹೆಂಡತಿ ಎಂದರೆ ವಿಶೇಷವಾದ ಸ್ಥಾನವಿದೆ. ಈ ಸಂಬಂಧ ಮುಂದುವರೆಯುತ್ತ ಎಲ್ಲಾ ಸಂಬಂಧಗಳ ಕೊಂಡಿಗೆ ಹೆಸರು ನೀಡುತ್ತ ಸಂಬಂಧ ಗಟ್ಟಿಯಾಗುತ್ತದೆ. ಮದುವೆ ಎಂಬ ಪವಿತ್ರ ಬಂಧನದಲ್ಲಿ ಸಿಲುಕಿದಾಗ ಮಾತ್ರ. ಸಂಬಂಧಗಳ ಜನನವಾಗುತ್ತದೆ. ಇತಿಹಾಸದಿಂದಲೂ ನಡೆದು ಬಂದ ಒಂದು ಪ್ರತೀತಿಯಾಗಿದೆ ವಿವಾಹ ದಯಮಾಡಿ ಈ ಸಂಬಂಧಕ್ಕೆ ಮಸಿ ಬೆಳೆಯುವಂತಹ ಕೆಲಸಗಳನ್ನು ಇತ್ತೀಚಿನ ದಿನಗಳಲ್ಲಿ ನಡೆಸುತ್ತಿದ್ದಾರೆ. ಮದುವೆ ಎಂದರೆ ಎಷ್ಟನೆಯದು? ಎಂದು ಸರ್ವೆ ಸಾಮಾನ್ಯ ಎಂಬಂತೆ ಕೇಳುವುದು ನೋಡಿದರೆ ಎತ್ತ ಸಾಗಿತ್ತಿದೆ ನಮ್ಮ ಸಮಾಜ ಎನ್ನುವಂತಾಗಿದೆ.

ದಯಾ ಮಾಡಿ ಅಕ್ರಮ ಸಂಬಂಧ ಹಾಗೂ ಒಬ್ಬರು ಹೆಚ್ಚು ಮದುವೆಗಳನ್ನು ಆಗುವುದನ್ನು ಬಿಟ್ಟುಬಿಡಿ. ಆದಷ್ಟು ನಾವು ಸಂಸ್ಕೃತಿಗೆ ಬೆಲೆ ನೀಡೋಣ. ಧರ್ಮಕ್ಕೆ ಬೆಲೆ ನೀಡೋಣ. ಸಂಸ್ಕೃತಿ ಧರ್ಮವನ್ನು ಉಳಿಸೋಣ, ಕಲಿಸೋಣ. ಹಿಂದೂ ಧರ್ಮವನ್ನು ಪಾಲಿಸೋಣ. ಮುಂದಿನ ಪೀಳಿಗೆಗೆ ಮಾರ್ಗದರ್ಶಿಯಾಗೋಣ ಎಂದು ಹೇಳುತ್ತಾ ಸಂಸ್ಕೃತಿಗೆ ನೆಲೆಯಾಗಿರುವ ಭಾರತೀಯರು ನಾವು ನಮ್ಮನ್ನು ನೋಡಿ ಇತರ ದೇಶದವರು ಬದಲಾಗಬೇಕೆ ಹೊರತು.

ನಾವು ಅವರಂತೆ ಬದಲಾವಣೆ ಆಗುವುದು ಬೇಡ. ಏಕೆಂದರೆ ನಮ್ಮ ನಾಡು-ನುಡಿ, ಜಲ, ಪರಿಸರದಿಂದ ಹಿಡಿದು ಎಲ್ಲವೂ ಸಾಂಸ್ಕೃತಿಕವಾಗಿದೆ. ನಮ್ಮ ದೇಶವು ಸಂಸ್ಕೃತಿಗೆ ಹೆಸರುವಾಸಿಯಾಗಿರುವುದು ವಿವಾಹ ಪದ್ಧತಿಯಲ್ಲಿ ಹೆಚ್ಚು ಉಡುಗೆ ತೊಡುಗೆಯ ರೀತಿ ನೀತಿಗಳು. ಪೂಜೆ ಪುನಸ್ಕಾರಗಳು. ಎಲ್ಲವೂ ನಮ್ಮ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಅದನ್ನು ಅಳವಡಿಸಿಕೊಂಡು ಇತರರಿಗೆ ಮಾರ್ಗದರ್ಶನಿ ನೀಡಿ. ಇತ್ತೀಚಿನ ದಿನಗಳಲ್ಲಿ ಪತಿ ಪತ್ನಿಯರ ಸಂಬಂಧವು ಬಹಳಷ್ಟು ಹದಗೆಡುತ್ತಿದೆ. ವಿಚ್ಛೇದನ ಎಂಬ ಸಂಬಂಧ ಮುರಿಯುವುದರ ಬಗ್ಗೆ ಹೆಚ್ಚು ಒಲವನ್ನು ನೀಡುತ್ತಿದ್ದಾರೆ. ಈ ವಿಚಾರದಿಂದ ಹೊರಬರಬೇಕು ಬದುಕಿನ ವಿಚಾರ ವಿಮರ್ಶೆಗಳತ್ತ ಗಮನ ಅರಿಸಬೇಕು, ಬದುಕಿನಲ್ಲಿ ತಂದೆ ತಾಯಿಯಾಗಿ ಮಕ್ಕಳನ್ನು ಸಂಸ್ಕಾರವಂತರಾಗಿ ಬೆಳೆಸುವುದು ಮುಖ್ಯವಾಗಿದೆ.

ಹಿಂದೆ ಆಚಾರ ವಿಚಾರ ಸಂಸ್ಕೃತಿಗೆ ನೀಡುತ್ತಿದ್ದ ಬೆಲೆಯೂ ಇಂದಿನ ಪ್ರಸ್ತುತ ದಿನಮಾನಗಳಲ್ಲಿ ನಡೆಯುತ್ತಿಲ್ಲ. ಪ್ರತಿಯೊಂದು ಸಂಬಂಧಕ್ಕೂ ಅದರದೇ ಆದ ವಿಶೇಷತೆ ಇದೆ. ಅದನ್ನು ಅರಿತು ಬಾಳಿದರೆ ಜೀವನ ಶಾಸ್ತ್ರವಾಗುತ್ತದೆ. ಸಂಸ್ಕೃತಿಯನ್ನು ಉಳಿಸೋಣ, ಬೆಳೆಸೋಣ, ಕಲಿಯೋಣ, ಕಲಿಸೋಣ, ಎನ್ನುತ್ತಾ ಜಾಲತಾಣಗಳ ಬಳಕೆಯನ್ನು ಕಡಿಮೆ ಮಾಡುತ್ತಾ ಒಳ್ಳೆಯ ವಿಚಾರಗಳನ್ನು ಪಡೆಯೋಣ ಕೆಟ್ಟ ವಿಚಾರಗಳನ್ನ ದೂರ ಬಿರಿಸುತ್ತಾ ಬಾಳೋಣ ಎಂದು ಹೇಳುತ್ತಾ ಈ ಲೇಖನಕ್ಕೆ ವಿರಾಮವನ್ನು ಹಾಕುತ್ತಿದ್ದಾನೆ.

ಜೈ ಹಿಂದ್ ಜೈ ಭಾರತ ಮಾತೆ

ಧರ್ಮಕ್ಕೆ ಬೆಲೆ ನೀಡೋಣ



ಬಂದವನು ತಿಳಿಯುತಲಿ ನಡೆದರದು ಎಲ್ಲರಲಿ
ಚೆಂದವದು ಅರಿಯುತಲಿ ಸಾಗುತಲಿ
ಹೊಂದುತ್ತ ಸಲಹೆಯನು ಹಿರಿಯರಲಿ ಪಡೆದರಲಿ
ಪಂತಿಯದೆ ರೂಪದಲಿ ಲಕ್ಷ್ಮಿ ದೇವಿ......



ಸಾಮಾಜಿಕ ಕಳಕಳಿ

ಹೆಚ್.ಎಸ್. ಪ್ರತಿಮಾ ಹಾಸನ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

# ಹುಲಿ ಹೆಜ್ಜೆ: ಮಲ್ಲರ ಅಖಂಡ ತಾಕತ್ತು



ಭಾರತೀಯ ಮಣ್ಣಿನ ಕುಸ್ತಿ ಪರಂಪರೆಯು ಕೇವಲ ದೈಹಿಕ ಬಲದ ಪ್ರದರ್ಶನವಲ್ಲ ಅದೊಂದು ಶಾರೀರಿಕ ಸಾಧನೆ ಮತ್ತು ಸಾಹಸ ಕಲೆ. ಗರಡಿ ಮನೆಯ ನೂರಾರು ತಾಲೀಮುಗಳ ಪೈಕಿ ಅತ್ಯಂತ ರಮಣೀಯ ಹಾಗೂ ಅಷ್ಟೇ ಸವಾಲಿನ ಕಸರತ್ತು ಎಂದರೆ ಹುಲಿ ಹೆಜ್ಜೆ. ಇದು ಪ್ರಕೃತಿಯ ಕ್ರೌರ್ಯ ಮತ್ತು ಸೌಂದರ್ಯದ ಅಪೂರ್ವ ಸಮನ್ವಯದಂತಿದೆ. ಪ್ರಕೃತಿಯಲ್ಲಿ ಹುಲಿಯು ಶಿಕಾರಿಗೆ ಸಜ್ಜಾಗುವಾಗ ತೋರುವ ದೈಹಿಕ ಜಾಣ್ಮೆಯೇ ಈ ವ್ಯಾಯಾಮದ ಜೀವಾಳ. ಇಲ್ಲಿ ಪೈಲ್ವಾನನು ಚತುಷ್ಪಾದಿ ಪ್ರಾಣಿಯಂತೆ ಬೆನ್ನೆಲುಬನ್ನು ಬಾಗಿಸಿ ಮುನ್ನಡೆಯುತ್ತಾನೆ. ಇದು ಭೂಮಿಯ ಗುರುತ್ವಾಕರ್ಷಣೆಯನ್ನು ಸವಾಲಾಗಿ ಸ್ವೀಕರಿಸುವ ಒಂದು ವಿಶಿಷ್ಟ ಗತಿ. ಈ ಚಲನೆಯು ಶರೀರದ ಪ್ರತಿ ಜೀವಕೋಶದಲ್ಲೂ ರಕ್ತ ಸಂಚಾರವನ್ನು ಪ್ರಚೋದಿಸಿ, ಸುಪ್ತವಾಗಿರುವ ಶಕ್ತಿಯನ್ನು ಜಾಗೃತಗೊಳಿಸುತ್ತದೆ.

ಹುಲಿ ಹೆಜ್ಜೆಯನ್ನು ಸಿದ್ಧಿಸಿಕೊಳ್ಳಲು ದೇಹದ ಮೇಲೆ ಸಂಪೂರ್ಣ ಹತೋಟಿ ಇರಬೇಕು. ಮೊದಲು ಹಸ್ತಗಳನ್ನು ನೆಲದ ಮೇಲೂರಿ, ಪಾದಗಳ ಪಂಜದ ಮೇಲೆ ನಿಂತು ಶರೀರವನ್ನು ಬಿಲ್ಲಿನಂತೆ ಕಮಾನಾಗಿಸಬೇಕು. ಬಲಗೈ ಮುಂದಕ್ಕೆ ಚಾಚಿದಾಗ, ಎಡಗಾಲಿನ ಮೊಣಕಾಲು ಎದೆಯ ಹತ್ತಿರ ಬಂದು ಪಾದ ನೆಲಕ್ಕೆ ತಾಕಬೇಕು. ಈ ಸ್ಥಿತಿಯಲ್ಲಿ ಗಲ್ಲ ನೆಲಕ್ಕೆ ತೀರಾ ಹತ್ತಿರದಲ್ಲಿರಬೇಕು. ನಂತರ ವಿರುದ್ಧ ದಿಕ್ಕಿನ ಕೈ-ಕಾಲುಗಳನ್ನು ಬಳಸಿ ಚಲಿಸಬೇಕು. ಇಲ್ಲಿ ಬೆನ್ನು ಭಾಗವು ಅತಿಯಾಗಿ ಮೇಲೇಳಬಾರದು; ಹುಲಿಯು ತೆವಳುತ್ತಾ ಸಾಗುವ ನಯ ಈ ನಡಿಗೆಯಲ್ಲಿರಬೇಕು. ಈ ತಾಲೀಮಿನಿಂದ ಪೈಲ್ವಾನನ ಮಣಿಕಟ್ಟು, ಭುಜ ಮತ್ತು ಎದೆಯ ಸ್ನಾಯುಗಳು ಕಬ್ಬಿಣದಂತೆ ಗಟ್ಟಿಯಾಗುತ್ತವೆ. ಇದು ನಡುಭಾಗದ ಸ್ನಾಯುಗಳಿಗೆ ಅಸಾಮಾನ್ಯ ಸ್ಥಿರತೆಯನ್ನು ನೀಡುತ್ತದೆ. ಅಖಾಡದಲ್ಲಿ ಎದುರಾಳಿಯು ಎಷ್ಟೇ ಬಲಾಢ್ಯನಾಗಿದ್ದರೂ, ಹುಲಿ ಹೆಜ್ಜೆಯ ಸಿದ್ಧಿಯಿರುವ ಪೈಲ್ವಾನನನ್ನು ಬುಡಮೇಲು ಮಾಡುವುದು ಸುಲಭವಲ್ಲ. ಈ ವ್ಯಾಯಾಮವು ಬೆನ್ನೆಲುಬನ್ನು ಹಾವಿನಂತೆ ಬಳುಕುವಂತೆ ಮಾಡುವುದಲ್ಲದೆ, ಕೀಲುಗಳಿಗೆ ರಕ್ಷಣೆ ನೀಡುತ್ತದೆ. ಹುಲಿ ಹೆಜ್ಜೆ ಎಷ್ಟು ಲಾಭದಾಯಕವೋ, ಅಸಮರ್ಪಕವಾಗಿ ನಿರ್ವಹಿಸಿದರೆ ಅಷ್ಟೇ ಅಪಾಯಕಾರಿ. ಇದನ್ನು ಕಾಂಕ್ರೀಟ್ ನೆಲದ ಮೇಲೆ ಮಾಡಬಾರದು ಹದ ಮಾಡಿದ ಕೆಮ್ಮಣ್ಣಿನ ಅಖಾಡವೇ ಸೂಕ್ತ. ಆರಂಭಿಸುವ ಮುನ್ನ ಕೀಲುಗಳನ್ನು ಸಡಿಲಗೊಳಿಸುವ ಸಣ್ಣಪುಟ್ಟ ವ್ಯಾಯಾಮಗಳು ಅನಿವಾರ್ಯ. ಇಂದಿನ ತಾಂತ್ರಿಕ ಯುಗದಲ್ಲಿ ಕೃತಕ ಫಿಟ್‌ನೆಸ್ ಸಂಸ್ಕೃತಿ ಹೆಚ್ಚುತ್ತಿದೆ. ಆದರೆ ನೈಸರ್ಗಿಕವಾಗಿ ಮಣ್ಣಿನಲ್ಲಿ ಗಳಿಸಿದ ಆರೋಗ್ಯವೇ ಶಾಶ್ವತ. ಗರಡಿ ಮನೆಯ ಈ ವ್ಯಾಘ್ರಗತಿಯು ಶಕ್ತಿಯನ್ನು ಆರಾಧಿಸುವ ಪ್ರತಿಯೊಬ್ಬ ಭಾರತೀಯನ ಹೆಮ್ಮೆ. ಡಾ.ಸುಧಾಕರ.ಜಿ.ಲಕ್ಕವಳ್ಳಿ.

# ಪ್ರಶ್ನೆಪತ್ರಿಕೆ ಸೋರಿಕೆ ವಿದ್ಯಾರ್ಥಿಗಳ ಕನಸುಗಳನ್ನು ಕಸಿದುಕೊಂಡ ವ್ಯವಸ್ಥೆ

ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಧರಿಸುವ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯ ಘಟನೆ ಇತ್ತೀಚೆಗೆ ದೇಶವನ್ನೇ ಬೆಚ್ಚಿಬೀಳಿಸಿದೆ. ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿ, ಹಗಲು-ರಾತ್ರಿ ಓದಿ, ಅನೇಕ ವರ್ಷಗಳ ಕನಸನ್ನು ಹೊತ್ತು ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಿಗೆ ಈ ಸುದ್ದಿ ಆಕಾಶವೇ ಕುಸಿದಂತಾಯಿತು. ಪ್ರಶ್ನೆಪತ್ರಿಕೆ ಲೀಕ್ ಆಗಿದೆ ಎಂಬ ಕಾರಣಕ್ಕೆ ಪರೀಕ್ಷೆಯನ್ನು ರದ್ದುಪಡಿಸಿ ಮರುಪರೀಕ್ಷೆ ನಡೆಸಲಾಗುತ್ತದೆ ಎಂಬ ಘೋಷಣೆ ಹೊರಬಿದ್ದ ಕೆಲವೇ ದಿನಗಳಲ್ಲಿ ನಾಲ್ವರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಸುದ್ದಿ ದೇಶದ ಮನಸ್ಸನ್ನೇ ಕಲುಕಿದೆ.


ಒಬ್ಬ ವಿದ್ಯಾರ್ಥಿಯ ಕನಸು ಎಂದರೆ ಅದು ಕೇವಲ ಅಂಕಗಳ ಆಟವಲ್ಲ. ಅದರ ಹಿಂದೆ ಪೋಷಕರ ತ್ಯಾಗ, ಆರ್ಥಿಕ ಸಂಕಷ್ಟ, ಅನೇಕ ನಿದ್ರೆರಹಿತ ರಾತ್ರಿಗಳು ಮತ್ತು ಸಾವಿರಾರು ನಿರೀಕ್ಷೆಗಳಿರುತ್ತವೆ. ವೈದ್ಯರಾಗಬೇಕು ಎಂಬ ಗುರಿಗಾಗಿ ವಿದ್ಯಾರ್ಥಿಗಳು ತಮ್ಮ ಯೌವನವನ್ನೇ ಪುಸ್ತಕಗಳ ನಡುವೆ ಕಳೆಯುತ್ತಾರೆ.

ಇಂತಹ ಸಂದರ್ಭದಲ್ಲಿ ಪರೀಕ್ಷೆ ನ್ಯಾಯಸಮ್ಮತವಾಗಿ ನಡೆದಿಲ್ಲ ಎಂಬ ಸುದ್ದಿ ಅವರ ಮಾನಸಿಕ ಸ್ಥಿತಿಯನ್ನು ಸಂಪೂರ್ಣವಾಗಿ ಕುಗ್ಗಿಸುತ್ತದೆ. ಪರೀಕ್ಷೆಯಲ್ಲಿ ಸುಮಾರು 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಆದರೆ ಪ್ರಶ್ನೆಪತ್ರಿಕೆ ಸೋರಿಕೆಯ ಆರೋಪ ಹೊರಬಂದ ನಂತರ ಪರೀಕ್ಷೆಯನ್ನು ರದ್ದುಪಡಿಸಿ ಮರುಪರೀಕ್ಷೆ ನಡೆಸಲು ನಿರ್ಧರಿಸಲಾಯಿತು. ಈ ಬೆಳವಣಿಗೆಯು ಈಗಾಗಲೇ ಒತ್ತಡದಲ್ಲಿದ್ದ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಭಾರೀ ಪರಿಣಾಮ ಬೀರಿತು. ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಘಟನೆಗಳು ಕೇವಲ ವೈಯಕ್ತಿಕ ದುರಂತಗಳಲ್ಲ; ಅವು ನಮ್ಮ ಶಿಕ್ಷಣ ವ್ಯವಸ್ಥೆಯ ವೈಫಲ್ಯಕ್ಕೆ ಕನ್ನಡಿ ಹಿಡಿಯುವ ಘಟನೆಗಳಾಗಿವೆ.


ಕೆಲವರು ಉತ್ತಮ ಅಂಕಗಳ ನಿರೀಕ್ಷೆಯಲ್ಲಿದ್ದರು. ಕೆಲವರು ಕುಟುಂಬದ ಕನಸನ್ನು ನನಸಾಗಿಸಲು ಶ್ರಮಿಸುತ್ತಿದ್ದರು. ಆದರೆ ವ್ಯವಸ್ಥೆಯ ನಿರ್ಲಕ್ಷ್ಯ ಮತ್ತು ಭ್ರಷ್ಟಾಚಾರದ ಪರಿಣಾಮವಾಗಿ ಅವರ ಬದುಕೇ ಕತ್ತಲೆಯಾಯಿತು.

ಇಂದು ವಿದ್ಯಾರ್ಥಿಗಳು ಪರೀಕ್ಷೆಗಿಂತ ಹೆಚ್ಚು ಭಯಪಡುವುದು ಅನಿಶ್ಚಿತತೆಗೆ. ವರ್ಷಪೂರ್ತಿ ಓದಿ ಪರೀಕ್ಷೆ ಬರೆದು ನಂತರ ''ಪೇಪರ್ ಲೀಕ್ ಎಂಬ ಕಾರಣಕ್ಕೆ ಮತ್ತೆ ಪರೀಕ್ಷೆ ಬರೆಯಬೇಕು ಎಂದಾಗ ಅವರ ಮನಸ್ಸು ಮುರಿಯುವುದು ಸಹಜ. ಈ ಒತ್ತಡವನ್ನು ಎಲ್ಲರೂ ಸಮರ್ಥವಾಗಿ ಎದುರಿಸಲಾರರು. ವಿಶೇಷವಾಗಿ ಗ್ರಾಮೀಣ ಹಿನ್ನೆಲೆಯ ಅಥವಾ ಆರ್ಥಿಕವಾಗಿ ದುರ್ಬಲ ಕುಟುಂಬಗಳ ವಿದ್ಯಾರ್ಥಿಗಳು ಹೆಚ್ಚು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ. ಈ ಘಟನೆಗಳು ಸರ್ಕಾರ ಮತ್ತು ಪರೀಕ್ಷಾ ಸಂಸ್ಥೆಗಳಿಗೆ ದೊಡ್ಡ ಎಚ್ಚರಿಕೆಯ ಗಂಟೆಯಾಗಬೇಕು. ಪ್ರಶ್ನೆಪತ್ರಿಕೆ ಸೋರಿಕೆ ಮಾಡುವ ಮಾಫಿಯಾಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪರೀಕ್ಷಾ ವ್ಯವಸ್ಥೆಯನ್ನು ಸಂಪೂರ್ಣ ಪಾರದರ್ಶಕ ಮತ್ತು ಸುರಕ್ಷಿತವಾಗಿಸಬೇಕು. ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಬಗ್ಗೆ ಶಾಲೆಗಳು, ಕಾಲೇಜುಗಳು ಮತ್ತು ಕುಟುಂಬಗಳು ಹೆಚ್ಚು ಗಮನ ಹರಿಸಬೇಕಾಗಿದೆ.

ಒಂದು ಪರೀಕ್ಷೆ ವಿಫಲವಾದರೆ ಬದುಕೇ ಮುಗಿದುಹೋಗುವುದಿಲ್ಲ ಎಂಬ ಆತ್ಮವಿಶ್ವಾಸವನ್ನು ಮಕ್ಕಳಲ್ಲಿ ಬೆಳೆಸುವುದು ಸಮಾಜದ ಜವಾಬ್ದಾರಿಯಾಗಿದೆ. ಪೋಷಕರು ಮಕ್ಕಳ ಮೇಲೆ ಅತಿಯಾದ ಒತ್ತಡ ಹಾಕದೇ, ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕು. ಜೀವನದಲ್ಲಿ ವೈದ್ಯರಾಗುವುದಕ್ಕಿಂತ ಮೊದಲು ಒಳ್ಳೆಯ ಮನುಷ್ಯರಾಗುವುದು ಮುಖ್ಯ ಎಂಬ ಸಂದೇಶವನ್ನು ನೀಡಬೇಕು. ಪ್ರಶ್ನೆಪತ್ರಿಕೆ ಸೋರಿಕೆ ಎಂಬುದು ಕೇವಲ ಕಾನೂನು ಉಲ್ಲಂಘನೆ ಅಲ್ಲ ಅದು ಸಾವಿರಾರು ವಿದ್ಯಾರ್ಥಿಗಳ ಕನಸು, ಶ್ರಮ ಮತ್ತು ಭವಿಷ್ಯವನ್ನು ಕಸಿದುಕೊಳ್ಳುವ ಅಪರಾಧ. ನಾಲ್ವರು ವಿದ್ಯಾರ್ಥಿಗಳ ಸಾವಿನಿಂದ ನಾವು ಪಾಠ ಕಲಿಯದಿದ್ದರೆ ಇಂತಹ ದುರಂತಗಳು ಮತ್ತೆ ಮರುಕಳಿಸಬಹುದು.



ವಿಶ್ವಾಸ್.ಡಿ.ಗೌಡ




# ನೆಲದ ಮರೆಯಲ್ಲಿರುವ ಆರೋಗ್ಯ ನಿಧಿ; ಈ ಪುಟ್ಟ ನೆಲನೆಲ್ಲಿಯಲ್ಲಿದೆ ಹತ್ತಾರು ರೋಗಗಳನ್ನು ಓಡಿಸುವ ಶಕ್ತಿ

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಗಾದೆ ಮಾತು 'ನೆಲನೆಲ್ಲಿ'ಗೆ ಅಕ್ಷರಶಃ ಅನ್ವಯಿಸುತ್ತದೆ. ಯಾಕೆಂದರೆ, ನಮ್ಮ ಮನೆಯ ಹಿತ್ತಲಲ್ಲಿ, ರಸ್ತೆಯ ಬದಿಯಲ್ಲಿ ಕೇವಲ ಒಂದು ಅಡಿ ಎತ್ತರ ಬೆಳೆದು ನಿಲ್ಲುವ ಈ ಸಸ್ಯವನ್ನು ನಾವು ಕಳೆ ಎಂದು ಭಾವಿಸಬಹುದು. ಆದರೆ ಆಯುರ್ವೇದದಲ್ಲಿ ಇದಕ್ಕೆ 'ಭೂಮಿ ಆಮ್ಲ' ಎಂಬ ಗೌರವದ ಸ್ಥಾನವಿದೆ. ಅದರಲ್ಲೂ, ಚಿಕ್ಕ ಹಸಿರು ಎಲೆಗಳ ಕೆಳಭಾಗದಲ್ಲಿ ಪುಟ್ಟ ನೆಲ್ಲಿಕಾಯಿಗಳಂತಹ ಕಾಯಿಗಳನ್ನು ಹೊಂದಿರುವ ಈ ಗಿಡ, ವಿಶೇಷವಾಗಿ ಯಕೃತ್ತು ಮತ್ತು ಕಿಡ್ನಿಯ ಆರೋಗ್ಯ ಕಾಪಾಡುವಲ್ಲಿ ಅದ್ಭುತ ಶಕ್ತಿ ಹೊಂದಿದೆ. ಆಧುನಿಕ ಆಹಾರ ಪದ್ಧತಿಯಿಂದ ಹದಗೆಡುತ್ತಿರುವ ನಮ್ಮ ದೇಹದ ಒಳಗಿನ ಅಂಗಗಳನ್ನು ಶುದ್ಧೀಕರಿಸಲು ಪ್ರಕೃತಿ ನೀಡಿದ ವರವೇ ಈ ನೆಲನೆಲ್ಲಿ.

**ಲಿವರ್‌ಗೆ ಸಂಜೀವಿನಿ:** ನೆಲನೆಲ್ಲಿಯ ಅತ್ಯಂತ ಪ್ರಮುಖ ಪ್ರಯೋಜನವೆಂದರೆ ಅದು ಯಕೃತ್ತಿನ ಆರೋಗ್ಯವನ್ನು ಕಾಪಾಡುವುದು. ಅದರಲ್ಲೂ, ಕಾಮಾಲೆ ರೋಗಕ್ಕೆ ಇದೊಂದು ಅತ್ಯುತ್ತಮ ಔಷಧ. ಅದರಂತೆ, ಇದು ಯಕೃತ್ತಿನಲ್ಲಿರುವ ವಿಷಕಾರಿ ಅಂಶಗಳನ್ನು ಹೊರಹಾಕಿ, ಲಿವರ್ ಕೋಶಗಳನ್ನು ಪುನರುಜ್ಜೀವನಗೊಳಿಸುತ್ತದೆ. ಜೊತೆಗೆ ಹೆಪಟೈಟಿಸ್ ಬಿ ಮತ್ತು ಸಿ ವೈರಸ್‌ಗಳ ವಿರುದ್ಧ ಹೋರಾಡುವ ಶಕ್ತಿ ಇದಕ್ಕೆ ಇದೆ ಎಂದು ವಿವಿಧ ಸಂಶೋಧನೆಗಳು ಸಾಬೀತುಪಡಿಸಿವೆ. **ಕಿಡ್ನಿ ಕಲ್ಲುಗಳ ನಿವಾರಣೆ:** ಇದಕ್ಕೆ ಎಂಬ ಹೆಸರೂ ಇದೆ. ಯಾಕೆಂದರೆ, ಕಿಡ್ನಿಯಲ್ಲಿ ಕಲ್ಲುಗಳು ಉಂಟಾಗುವುದನ್ನು ತಡೆಯುವುದು ಮಾತ್ರವಲ್ಲದೆ, ಈಗಾಗಲೇ ಇರುವ ಕಲ್ಲುಗಳನ್ನು ಕರಗಿಸಿ ಮೂತ್ರದ ಮೂಲಕ ಹೊರಹಾಕಲು ಇದು ಸಹಾಯ ಮಾಡುತ್ತದೆ. ಅದರಂತೆ, ಇದು ಮೂತ್ರಪಿಂಡದ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. **ಜೀರ್ಣಕ್ರಿಯೆ ಮತ್ತು ಮಧುಮೇಹ ನಿಯಂತ್ರಣ:** ಹೊಟ್ಟೆಯ ಉರಿ, ಆಸಿಡಿಟಿ ಮತ್ತು ಅಜೀರ್ಣದಂತಹ ಸಮಸ್ಯೆಗಳಿಗೆ ನೆಲನೆಲ್ಲಿ ರಾಮಬಾಣ. ಇದರಲ್ಲಿರುವ ಆಂಟಿ-ಆಕ್ಸಿಡೆಂಟ್ ಗುಣಗಳು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಸಮತೋಲನದಲ್ಲಿಡಲು ನೆರವಾಗುತ್ತವೆ, ಇದರಿಂದಾಗಿ ಮಧುಮೇಹಿಗಳಿಗೆ ಇದು ಹೆಚ್ಚು ಪ್ರಯೋಜನಕಾರಿಯಾಗಿದೆ.

**ಚರ್ಮದ ಆರೋಗ್ಯ ಮತ್ತು ರೋಗನಿರೋಧಕ ಶಕ್ತಿ:** ರಕ್ತವನ್ನು ಶುದ್ಧೀಕರಿಸುವ ಗುಣ ಇದರಲ್ಲಿದೆ. ಇದರಿಂದಾಗಿ ತುರಿಕೆ, ಕಜ್ಜಿ ಮತ್ತು ಮೊಡವೆಯಂತಹ ಚರ್ಮದ ಸಮಸ್ಯೆಗಳು ದೂರವಾಗುತ್ತವೆ. ಶೀತ, ಕೆಮ್ಮು ಮತ್ತು ಜ್ವರದ ಸಮಯದಲ್ಲಿ ಇದು ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ ರಕ್ಷಣೆ ನೀಡುತ್ತದೆ. ನೆಲನೆಲ್ಲಿಯ ಸಂಪೂರ್ಣ ಸಸ್ಯವನ್ನು (ಬೇರು, ಎಲೆ, ಕಾಂಡ) ಔಷಧಿಯಾಗಿ ಬಳಸಬಹುದು. ಹಸಿ ಗಿಡದ ರಸವನ್ನು ಅಥವಾ ಒಣಗಿಸಿ ಮಾಡಿದ ಪುಡಿಯನ್ನು ನೀರಿನೊಂದಿಗೆ ಸೇವಿಸಬಹುದು. ಮಾರುಕಟ್ಟೆಯಲ್ಲಿ ಇದರ ಮಾತ್ರೆ ಮತ್ತು ಸಿರಪ್‌ಗಳು ಸಹ ಲಭ್ಯವಿವೆ. ನೆಲನೆಲ್ಲಿಯು ಶೀತಲ ಗುಣವನ್ನು ಹೊಂದಿರುವುದರಿಂದ ಅತಿಯಾದ ಬಳಕೆ ಬೇಡ. ಗರ್ಭಿಣಿಯರು, ಬಾಣಂತಿಯರು ಮತ್ತು ದೀರ್ಘಕಾಲದ ಕಾಯಿಲೆಯಿಂದ ಬಳಲುತ್ತಿರುವವರು ಆಯುರ್ವೇದ ವೈದ್ಯರ ಸಲಹೆ ಮೇರೆಗೆ ಇದನ್ನು ಬಳಸುವುದು ಸೂಕ್ತ. ಒಟ್ಟಾರೆಯಾಗಿ, ಪ್ರಕೃತಿಯ ಪ್ರತಿಯೊಂದು ಸೃಷ್ಟಿಯಲ್ಲೂ ಒಂದು ಜೀವನದಾಯಕ ಶಕ್ತಿಯಿದೆ ಎಂಬುದಕ್ಕೆ ನೆಲನೆಲ್ಲಿಯೇ ಸಾಕ್ಷಿ. ನಮ್ಮ ಕಣ್ಣೆದುರೇ ಇರುವ ಇಂತಹ ಅಮೂಲ್ಯ ಔಷಧೀಯ ಸಸ್ಯಗಳ ಮಹತ್ವವನ್ನು ಅರಿತು ಬಳಸಿಕೊಂಡರೆ, ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳಿಗೆ ಆಸ್ಪತ್ರೆಗೆ ಅಲೆಯುವ ಅಗತ್ಯವಿರುವುದಿಲ್ಲ. ಯಕೃತ್ತನ್ನು ವಿಷಕಾರಿ ಮುಕ್ತಗೊಳಿಸಿ, ರೋಗನಿರೋಧಕ ಶಕ್ತಿಯನ್ನು ವೃದ್ಧಿಸುವ ಈ ಭೂಮಿ ಆಮ್ಲವನ್ನು ಜಾಣತನದಿಂದ ಜೀವನಶೈಲಿಯಲ್ಲಿ ಅಳವಡಿಸಿಕೊಳ್ಳೋಣ. ಸದಾ ನೆನಪಿರಲಿ, ನೈಸರ್ಗಿಕ ಚಿಕಿತ್ಸೆಯು ಆರೋಗ್ಯದ ಹಾದಿಯಲ್ಲಿ ನಿಮ್ಮ ಅತ್ಯುತ್ತಮ ಸಂಗಾತಿಯಾಗಬಲ್ಲದು.



## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 9:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ಆಶಾವಾದಿಗಳಾಗಿರಿ ಮತ್ತು ಜೀವನದ ಉಜ್ವಲ ಬದಿಯನ್ನು ನೋಡಿ. ನಿಮ್ಮ ಆತ್ಮವಿಶ್ವಾಸಭರಿತ ನಿರೀಕ್ಷೆಗಳು ನಿಮ್ಮ ಭರವಸೆಗಳು ಮತ್ತು ಆಸೆಗಳನ್ನು ಸಾಕ್ಷಾತ್ಕಾರಗೊಳಿಸಲು ಸಹಾಯ ಮಾಡುತ್ತವೆ.

**ವೃಷಭ** ಒಬ್ಬ ಸಂತನಿಂದ ಆಧ್ಯಾತ್ಮಿಕ ಜ್ಞಾನ ಸಾಂತ್ವನ ಮತ್ತು ಆರಾಮವನ್ನು ಒದಗಿಸುತ್ತದೆ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು

**ಮಿಥುನ** ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ. ಯಾತ್ರೆಯಲ್ಲಿ ಹೋಗುತ್ತಿದ್ದರೆ ಅಮೂಲ್ಯ ವಸ್ತುಗಳ ಬಗ್ಗೆ ಗಮನ ಹರಿಸಿ ಅವುಗಳನ್ನು ಕಡಿಯುವ ಸಧ್ಯತೆ ಇದೆ. ವಿಶೇಷವಾಗಿ ನಿಮ್ಮ ಹಣದಚೀಲವನ್ನು ಎಚ್ಚರಿಕೆಯಿಂದಿಡಿ.

**ಕರ್ಕಾಟಕ** ನಿಮಗೇನು ಒಳ್ಳೆಯದೆಂದು ನಿಮಗೆ ಮಾತ್ರ ಗೊತ್ತು – ಆದ್ದರಿಂದ ಧೃಢವಾಗಿರಿ ಮತ್ತು ಧೈರ್ಯಶಾಲಿಗಳಾಗಿರಿ ಮತ್ತು ತಕ್ಷಣದ ನಿರ್ಧಾರಗಳನ್ನು ತೆಗೆದುಕೊಳ್ಳಿ ಹಾಗೂ ಫಲಿತಾಂಶಗಳಿಗೆ ಸಿದ್ಧವಾಗಿರಿ.

**ಸಿಂಹ** ನಿಮ್ಮ ಸ್ನೇಹಿತರು ನಿಮ್ಮ ಉದಾರ ಪ್ರಕೃತಿಯ ಲಾಭ ಪಡೆಯಲು ಬಿಡಬೇಡಿ. ನೀವು ಜನಪ್ರಿಯರಾಗಿರುತ್ತೀರಿ ಮತ್ತು ಸುಲಭವಾಗಿ ವಿರುದ್ಧ ಲಿಂಗದ ಸದಸ್ಯರ ಸೆಳೆಯುತ್ತೀರಿ.

**ಕನ್ಯಾ** ಸ್ನೇಹಿತರೊಂದಿಗಿನ ಸಂಜೆ ಸಂತೋಷಕರವಾಗಿರುತ್ತದೆ. ಒಂದು ಸ್ಥಳದಲ್ಲಿ ನಿಂತಾಗ ಪ್ರೀತಿ ನಿಮ್ಮನ್ನು ಒಂದು ಹೊಸ ಜಗತ್ತಿಗೆ ತೆಗೆದುಕೊಂಡು ಹೋಗಬಹುದು.

**ತುಲಾ** ನೀವು ಹೇರಳ ಶಕ್ತಿಯನ್ನು ಹೊಂದಿರುತ್ತೀರಿ – ಆದರೆ ಕೆಲಸದ ಒತ್ತಡ ನಿಮ್ಮನ್ನು ಉದ್ವಿಗ್ನಗೊಳಿಸುವಂತೆ ತೋರುತ್ತದೆ. ಇಂದು ಸುಮ್ಮನೆ ಕುಳಿತುಕೊಳ್ಳುವ ಬದಲು ಇದು ನಿಮ್ಮ ಗಳಿಕೆಯ ಶಕ್ತಿಯನ್ನು ಸುಧಾರಿಸುತ್ತದೆ

**ವೃಶ್ಚಿಕ** ಅತಿಯಾಗಿ ತಿನ್ನುವುದನ್ನು ತಪ್ಪಿಸಿ ಮತ್ತು ಫಿಟ್ ಆಗಿ ಉಳಿಯಲು ನಿಯಮಿತವಾಗಿ ಹೆಲ್ತ್ ಕ್ಲಬ್‌ಗೆ ಭೇಟಿ ನೀಡಿ. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ.

**ಧನಸ್ಸು** ಆರೋಗ್ಯವು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಮೂಲಕ ಅರಳುತ್ತದೆ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ.

**ಮಕರ** ಸಂತಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ನಿಮ್ಮ ತಾಯಿಯ ದುಂದುಗಾರಿಕೆಯನ್ನು ನೋಡಿ ನೀವು ಚಿಂತಿತರಾಗಬಹುದು.

**ಕುಂಭ** ಹಣಕಾಸು ಖಂಡಿತವಾಗಿಯೂ ವೃದ್ಧಿಯಾಗುತ್ತದೆ– ಆದರೆ ಅದೇ ಸಮಯದಲ್ಲಿ ಖರ್ಚೂ ತುಂಬಾ ಹೆಚ್ಚಾಗುತ್ತದೆ. ಹಳೆಯ ಸಂಪರ್ಕಗಳು ಮತ್ತು ಸಂಬಂಧಗಳ ಪುನಶ್ಚೇತನಕ್ಕೆ ಒಳ್ಳೆಯ ದಿನ.

**ಮೀನ** ಮಕ್ಕಳೊಂದಿಗೆ ಆಟವಾಡುವುದು ನಿಮಗೆ ಯಾವತ್ತೂ ಅದ್ಭುತ ಚಿಕಿತ್ಸೆಯ ಅನುಭವ ನೀಡುತ್ತದೆ. ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು, ಅನೇಕ ಆರ್ಥಿಕ ಸಮಸ್ಯೆಗಳು ದೂರವಾಗುತ್ತವೆ.

### ಹೆಸರಿಗಷ್ಟೇ ಮಹಾನಗರ; ವಿದ್ಯುತ್‌ಗೂ ತಪ್ಪದ ಬರ | ಮೆನ್ಸ್‌ವೇರ್ ಸೇರಿದಂತೆ ಹತ್ತಾರು ಉದ್ಯಮಿಗಳಿಗೆ ಭಾರಿ ಪೆಟ್ಟು

# ಬೀದರ್:ನಿತ್ಯ ವಿದ್ಯುತ್ ಕಣ್ಣಾ ಮುಚ್ಚಾಲೆ ಆಟ ಜನ ಪರದಾಟ

ಪರಮೇಶ.ಡಿ.ವಿಳಸಪೂರೆ

• **ಉದಯವಾಹಿನಿ ಕಾರಟಗಿ**

ಮಹಾನಗರ ಸೇರಿದಂತೆ ಜಿಲ್ಲಾದ್ಯಂತ ವಿದ್ಯುತ್ ಕಣ್ಣುಮುಚ್ಚಾಲೆ ನಿರಂತರವಾಗಿ ಮುಂದುವರಿದಿದ್ದು, ಗಡಿ ಜಿಲ್ಲೆಯ ಜನಜೀವನ ಸೇರಿದಂತೆ ಮೆನ್ಸ್ ವೇರ್ ಮತ್ತಿತರ ಉದ್ಯಮಗಳ ಮೇಲೆ ಭಾರೀ ಪೆಟ್ಟು ಬಿದ್ದಿದೆ.

ದಿನದ ಹೊತ್ತಿನಲ್ಲಿ ಅನೇಕ ಬಾರಿ ವಿದ್ಯುತ್ ಕಡಿತವಾಗುತ್ತಿದ್ದು, ರಾತ್ರಿ ವೇಳೆಯಲ್ಲಿಯೂ ವಿದ್ಯುತ್ ಸ್ಥಗಿತಗೊಳ್ಳುತ್ತಿರುವುದು ನುಂಗದ ತುತ್ತಾಗಿ ಪರಿಣಮಿಸಿದೆ. ಬೇಸಿಗೆಯ ತೀವ್ರ ಬಿಸಿಲಿನ ನಡುವೆ ವಿದ್ಯುತ್ ಸಮಸ್ಯೆ ಮತ್ತಷ್ಟು ಕಾಡುತ್ತಿದ್ದು, ನಾಗರಿಕರು, ವ್ಯಾಪಾರಿಗಳು, ವಿದ್ಯಾರ್ಥಿಗಳು ಹಾಗೂ ಸಣ್ಣ ಉದ್ಯಮಿಗಳು ಸಂಕಟದ ಅನುಭವಿಸುವಂತಾಗಿದೆ.

**ನಿತ್ಯ 4 ಬಾರಿ ವ್ಯತ್ಯಯ**

**ನಗರದ ವಿವಿಧ ಬಡಾವಣೆಗಳಲ್ಲಿ ದಿನಕ್ಕೆ ಮೂರ್ನಾಲ್ಕು ಬಾರಿ ವಿದ್ಯುತ್ ಕಡಿತ ಸಾಮಾನ್ಯ. ಕೆಲವೆಡೆ ಅರ್ಧ ಗಂಟೆ, ಇನ್ನೂ ಕೆಲವೆಡೆ ಎರಡು ಗಂಟೆಗಳ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದೆ. ವಿಶೇಷವಾಗಿ ರಾತ್ರಿ ಸಮಯದಲ್ಲಿ ವಿದ್ಯುತ್ ಇಲ್ಲದ ಕಾರಣ ಮಕ್ಕಳು, ವೃದ್ಧರು ಮತ್ತು ರೋಗಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಬಿಸಿ ಗಾಳಿಗೆ ಪರಿತಪಿಸುತ್ತಿರುವ ನಡುವೆ ಫ್ಯಾನ್, ಕೂಲರ್ ಹಾಗೂ ಕುಡಿಯುವ ನೀರಿನ ಮೋಟಾರ್‌ಗಳು ಕಾರ್ಯನಿರ್ವಹಿಸದೆ ಇರುವುದರಿಂದ ಜನ ಕಂಗಾಲಾಗಿದ್ದಾರೆ.**

ಶ್ರೀಮಂತರು ಯುಪಿಎಸ್, ಜನರೇಟರ್ ಮತ್ತಿತರ ವ್ಯವಸ್ಥೆ ಮಾಡಿಕೊಂಡು ಎಸಿ, ಕೂಲರ್ ಮತ್ತಿತರ ಸೌಲಭ್ಯಗಳೊಂದಿಗೆ ತಣ್ಣಗೆ ಇರುತ್ತಾರೆ. ಬಡವರು ಹಾಗೂ ಮಧ್ಯಮ ವರ್ಗದವರು ಜೆಸ್ಕಾಂ ಪೂರೈಸುವ ವಿದ್ಯುತ್ ಮೇಲೆಯೇ ಅವಲಂಬಿತರಾಗಿದ್ದು, ವಿದ್ಯುತ್ ಸ್ಥಗಿತವಾದರೆ ಮನೆಯಲ್ಲಿರುವುದು ಹೇಗೆ? ಪುಟ್ಟ



ಉದಯವಾಹಿನಿ ಚಿತ್ರ

ಮಕ್ಕಳು ಹಾಗೂ ವೃದ್ಧರು ಬಿಸಿಲಿನ ತಾಪಕ್ಕೆ ತತ್ತರಿಸಿ ಹೋಗಿದ್ದು ವಿದ್ಯುತ್ ಕಣ್ಣುಮುಚ್ಚಾಲೆ ಮುಂದುವರಿಸಿದರೆ ಗತಿ ಏನು? ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಾರೆ.

**ಟ್ರಾನ್ಸ್‌ಫಾರ್ಮರ್ ಡಮಾರ್:** ಕೆಲವೆಡೆ ಟ್ರಾನ್ಸ್‌ಫಾರ್ಮರಗಳು ಪದೇ ಪದೇ ಸುಟ್ಟು ಹೋಗುತ್ತಿರುವುದು ಮತ್ತಷ್ಟು ಸಮಸ್ಯೆಯನ್ನು ಗಂಭೀರಗೊಳಿಸಿದೆ. ಹಳೆಯ ವಿದ್ಯುತ್ ತಂತಿಗಳು ಹಾಗೂ ನಿರ್ವಹಣೆಯ ಕೊರತೆಯಿಂದ ಸಮಸ್ಯೆಗಳು ಹೆಚ್ಚಾಗುತ್ತಿವೆ ಎಂದು ಜೆಸ್ಕಾಂ ಅಧಿಕಾರಿಗಳು ಹೇಳುತ್ತಾರೆ. ಮಳೆಗಾಲಕ್ಕೂ ಮುನ್ನ ವಿದ್ಯುತ್ ವ್ಯವಸ್ಥೆಯನ್ನು ಸಮರ್ಪಕವಾಗಿ ದುರಸ್ತಿ ಮಾಡದಿದ್ದರೆ ಪರಿಸ್ಥಿತಿ ಇನ್ನಷ್ಟು ಹದಗೆಡುವ ಸಾಧ್ಯತೆಯಿದೆ ಎಂಬ ಆತಂಕವೂ ವ್ಯಕ್ತವಾಗಿದೆ. ಬೇಸಿಗೆಯಲ್ಲಿ ವಿದ್ಯುತ್ ಬಳಕೆ ಹೆಚ್ಚಿರುವುದರಿಂದ ಒತ್ತಡ ಹೆಚ್ಚಾಗಿದೆ ಎನ್ನಲಾಗುತ್ತಿದ್ದರೂ, ಪರ್ಯಾಯ ವ್ಯವಸ್ಥೆಗಳನ್ನು ಕಲ್ಪಿಸುವಲ್ಲಿ ಜೆಸ್ಕಾಂ ಅಧಿಕಾರಿಗಳು ಹಾಗೂ ಜಿಲ್ಲಾಡಳಿತ ವಿಫಲವಾಗಿವೆ ಎಂಬ ಸಾರ್ವಜನಿಕರ ಟೀಕೆಗಳನ್ನು ಅಲ್ಲಗಳೆಯುವಂತಿಲ್ಲ.

**ಉದ್ಯಮಕ್ಕೂ ಬಿಸಿ:** ವಿದ್ಯುತ್ ಸಮಸ್ಯೆಯಿಂದ ಬೀದರ್ ಮೆನ್ಸ್ ವೇರ್ ಉದ್ಯಮಕ್ಕೂ ಪೆಟ್ಟು ಬಿದ್ದಿದ್ದು ಸಮರ್ಪಕ ವಿದ್ಯುತ್ ಇಲ್ಲದೆ ಮದುವೆ ಸೇರಿದಂತೆ ಇನ್ನಿತರ ಸಮಾರಂಭದ ಬಟ್ಟೆಗಳು ಸರಿಯಾದ ಸಮಯಕ್ಕೆ ಗ್ರಾಹಕರಿಗೆ ನೀಡದೆ ಇರುವ ಪರಿಸ್ಥಿತಿ ನಿರ್ಮಾಣವಾಗಿದೆ. ವಾಷಿಂಗ್ ಯೂಟಿನ್‌ಗಳು ಸೇರಿದಂತೆ ಕೈಗಾರಿಕಾ ಪ್ರದೇಶದಲ್ಲಿ ಬರುವ ನೂರಾರು ಸಣ್ಣಪುಟ್ಟ ಉದ್ಯಮಗಳ ಮೇಲೆ ಸುಮಾರು 20 ಸಾವಿರ ಕುಟುಂಬಗಳು ಅವಲಂಬಿತವಾಗಿದ್ದು, ವಿದ್ಯುತ್ ಸರಬರಾಜಿನಲ್ಲಿ ಆಗುತ್ತಿರುವ ವ್ಯತ್ಯಯದಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿವೆ.

**ವಿದ್ಯುತ್ ಸ್ಥಗಿತದಿಂದ ರೋಸಿ ಹೋಗಿದ್ದೇವೆ. ವಾರದಲ್ಲಿ ಎರಡು ದಿನವಾದರೂ ವಿದ್ಯುತ್ ಸ್ಥಗಿತಗೊಳ್ಳುತ್ತಿದೆ. ಯಾವಾಗ ಕರೆಂಟ್ ಬರುತ್ತೆ? ಯಾವಾಗ ಹೋಗುತ್ತೆ ಎಂಬುದೇ ಗೊತ್ತಾಗಲ್ಲ. ಹೀಗಾದರೆ ವ್ಯಾಪಾರಿಗಳು ಬದುಕುವುದಾದರೂ ಹೇಗೆ?**
**-ಸೋಮಶೇಖರ್ ವ್ಯಾಪಾರಿ ಬೀದರ್**



ಉದಯವಾಹಿನಿ ಚಿತ್ರ



**ಅಧಿಕಾರಿಗಳು ಮಾತ್ರ ನಿರುಮ್ಮಳವಾಗಿ ನಿದ್ರೆ ಮಾಡಿದರು. ಇದು ಜೆಸ್ಕಾಂ ಅಧಿಕಾರಿಗಳ ಕಾರ್ಯವೈಖರಿಗೆ ಹಿಡಿದ ಕನ್ನಡಿ. ಬೇಸಿಗೆಯ ತೀವ್ರ ಬಿಸಿಲಿನ ನಡುವೆ ವಿದ್ಯುತ್ ಸಮಸ್ಯೆ ಮತ್ತಷ್ಟು ಕಾಡುತ್ತಿದ್ದು, ನಾಗರಿಕರು, ವ್ಯಾಪಾರಿಗಳು, ವಿದ್ಯಾರ್ಥಿಗಳು ಹಾಗೂ ಸಣ್ಣ ಉದ್ಯಮಿಗಳು ವಿಶೇಷವಾಗಿ ಗ್ರಾಮೀಣ ಭಾಗದ ರೈತರು ಸಂಕಟದ ಅನುಭವಿಸುವಂತಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಗೆ ಸ್ಪಂದಿಸಿ ವಿದ್ಯುತ್ ಕಣ್ಣಾಮುಚ್ಚಾಲೆ ಆಟ ತಪ್ಪಿಸಬೇಕು. –ಚೇತನ್ ಸೊರಳ್ಳಿ**
ಸಾಮಾಜಿಕ ಕಾರ್ಯಕರ್ತ ಬೀದರ್

**ಬುಡ್ಡಿ ಚಿಮಣಿಯೇ ಗತಿ**

ವಿದ್ಯಾರ್ಥಿಗಳಿಗೆ ರಜೆ ಸಮಯವಾದರೂ ಶಾಲೆಯವರು ಸಾಕಷ್ಟು ಹೋಂವರ್ಕ್ ನೀಡಿದ್ದಾರೆ. ಬಿಸಿಲು ಎಂದು ಮಕ್ಕಳನ್ನು ಹೊರಗಡೆ ಕಳಿಸುವಂತಿಲ್ಲ. ವಿದ್ಯುತ್ ಇಲ್ಲದ ಸ್ಥಿತಿಯಲ್ಲಿ ಮನೆಯಲ್ಲೂ ಇಟ್ಟುಕೊಳ್ಳುವಂತಿಲ್ಲ ಎಂಬ ಪರಿಸ್ಥಿತಿಯಲ್ಲಿದ್ದೇವೆ ಎಂಬುದು ಪೋಷಕರ ಗ್ರಾಮೀಣ ಭಾಗದಲ್ಲಂತೂ ವಿದ್ಯಾರ್ಥಿಗಳು ಇಂದಿಗೂ ದೀಪದ ಬೆಳಕಿನಲ್ಲಿ ಓದುವ ಸ್ಥಿತಿ ನಿರ್ಮಾಣವಾಗಿದ್ದು, ಜೆಸ್ಕಾಂ ನಿರ್ಲಕ್ಷ್ಯವೇ ಇದಕ್ಕೆ ಕಾರಣ ಎಂದು ದೂರುತ್ತಾರೆ.

**ರೈತರ ಸ್ಥಿತಿಯಂತೂ ಶೋಚನೀಯ**

ಗ್ರಾಮೀಣ ಭಾಗದ ರೈತರ ಸ್ಥಿತಿಯಂತೂ ಮತ್ತಷ್ಟೂ ಶೋಚನೀಯ ಎನಿಸಿದೆ. ಸಮರ್ಪಕ ವಿದ್ಯುತ್ ಇಲ್ಲದ ಕಾರಣ ಕೃಷಿ ಪಂಪ್‌ಸೆಟ್‌ಗಳ ಕಾರ್ಯಾಚರಣೆಯೂ ಕುಂಠಿತವಾಗಿದೆ. ಪ್ರತಿ ವರ್ಷವೂ ಬೆಳೆನಷ್ಟಕ್ಕೀಡಾಗುತ್ತಿರುವ ರೈತಾಪಿಗಳು, ವಿದ್ಯುತ್ ಕಣ್ಣಾಮುಚ್ಚಾಲೆಯಿಂದ ಬೆಳೆಗೆ ನೀರು ಹರಿಸದ ಸ್ಥಿತಿಯಿದೆ. ಮತ್ತೊಂದೆಡೆ ಹೋಟೆಲ್, ಬೇಕರಿ, ವೆಲ್ಡಿಂಗ್, ಪ್ರಿಂಟಿಂಗ್ ಹಾಗೂ ಇತರೆ ಸಣ್ಣ ಕೈಗಾರಿಕೆಗಳಲ್ಲಿ ವಿದ್ಯುತ್ ವ್ಯತ್ಯಯದಿಂದ ಕೆಲಸಗಳು ನಡೆಯದೆ, ಒದ್ದಾಡುವಂತಾಗಿದ್ದು, ಯಾವುದೇ ಮುನ್ನೆಚ್ಚರಿಕೆ ನೀಡದೆ ವಿದ್ಯುತ್ ಮಾಡುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.



## ಪುರಸಭೆಗೆ ಬರುವಂತಹ ತೆರಿಗೆಯನ್ನು ತೆಗೆದುಕೊಳ್ಳಬೇಡ: ಕಟ್ಟಿಕಾರ್

• **ಉದಯವಾಹಿನಿ ಕಾರಟಗಿ**


ಉದಯವಾಹಿನಿ ಚಿತ್ರ

ಕಾರಟಗಿ ಪಟ್ಟಣದಲ್ಲಿ ಪುರಸಭೆಯಿಂದ ಅಳವಡಿಸಲಾದ ಸ್ಟ್ರೀಟ್ ಲೈಟ್ ಕಂಬಕ್ಕೆ ಖಾಸಗಿ ಶಾಲೆಯೊಂದರ ವ್ಯಕ್ತಿ ಪುರಸಭೆ ಪರವಾನಿಗೆ ಇಲ್ಲದೆ ಬ್ಯಾನರ್ ಕಟ್ಟಿದ ವಿಚಾರವಾಗಿ ಪುರಸಭೆ ಮುಖ್ಯಾಧಿಕಾರಿ ಸಾಬಣ್ಣ ಕಟ್ಟಿಕಾರ್ ಮತ್ತು ಅಧ್ಯಕ್ಷ ಮಂಜುನಾಥ್ ಮೇಗೂರ್ ನಡುವೆ ತೀವ್ರ ಮಾತಿನ ಚಕಮಕಿ ನಡೆದಿದೆ.

ಬೇಸರಗೊಂಡ ಮುಖ್ಯಾಧಿಕಾರಿ ಸಾಬಣ್ಣ ಕಟ್ಟಿಕಾರ್ ಮಾಧ್ಯಮದೊಂದಿಗೆ ಮಾತನಾಡಿ, ಅಧ್ಯಕ್ಷರಾಗಿ ಆಯ್ಕೆಯಾಗಿರುವ ಮಂಜುನಾಥ್ ಮೇಗೂರ್ ಸರ್ವಾಧಿಕಾರ ಧೋರಣೆ ಅನುಸರಿಸುತ್ತಿದ್ದಾರೆ. ಪುರಸಭೆಯಲ್ಲಿ ಗುಂಡಾ ವರ್ತನೆ ಮಾಡಿ, ಇಲ್ಲಸಲ್ಲದ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದಾರೆ. ಈ ರೀತಿಯ ಧೋರಣೆಯನ್ನು ನಾವು ಸಹಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಮಾನ್ಯ ಜಿಲ್ಲಾಧಿಕಾರಿಗಳಿಗೆ ಪತ್ರದ ಮೂಲಕ ಮನವಿ ಸಲ್ಲಿಸಿದ್ದೇನೆ. ಕಾರಟಗಿ ಪುರಸಭೆಯನ್ನು ಮೇಗೂರು ಮಂಜುನಾಥ್ ಅವರಿಗೆ ಬರೆದುಕೊಡುವಂತಹ ಅಧಿಕಾರಿಗಳನ್ನು ತಂದು ಹಾಕಿ. ನಾನು ಇಲ್ಲಿಂದ ಕೆಲಸಕ್ಕೆ ನಿರ್ಗಮಿಸುತ್ತೇನೆ. ನಾನು ಏನು ಕೆಲಸ ಮಾಡಿದ್ದೇನೆ ಎಂದು ಸಾರ್ವಜನಿಕರಿಗೆ ತಿಳಿದಿದೆ ಎಂದರು.

ಪುರಸಭೆಗೆ ಬರುವಂತಹ ತೆರಿಗೆಯನ್ನು ತೆಗೆದುಕೊಳ್ಳಬೇಡ. ಸಚಿವರಿಗೆ ನಾನು ಮುಖ್ಯವೊ ಇಲ್ಲ ನೀನು ಮುಖ್ಯವೋ ತಿಳಿಸುತ್ತೇನೆ. ನಿನ್ನನ್ನು ಏನು ಮಾಡಬೇಕು ಎಂಟು ದಿನದ ಒಳಗಡೆ ಮಾಡುತ್ತೇನೆ. ನಿನ್ನನ್ನು ನೋಡಿಕೊಳ್ಳುತ್ತೇನೆ ಎಂದು ಅಧ್ಯಕ್ಷರು ಅವಾಜು ಹಾಕಿದ್ದಾರೆ. ಬೇಕಾದರೆ ಸಿಪಿಐ ಅವರ ಹತ್ತಿರ ಇರುವ ರೆಕಾರ್ಡಿಂಗ್ ನೋಡಿ ಎಂದು ಕಟ್ಟಿಕಾರ್ ತಿಳಿಸಿದರು. ಈ ಘಟನೆಗೆ ಪ್ರತಿಕ್ರಿಯಿಸಿದ ದಲಿತ ಸಂಘರ್ಷ ಸಮಿತಿಯ ರಾಜ್ಯ ಅಧ್ಯಕ್ಷ ಎಲ್ಲಪ್ಪ ಕಟ್ಟಿಮನಿ, ಪುರಸಭೆಯ ನಿರಂತರ ಸರ್ವಾಧಿಕಾರ ಧೋರಣೆ ಹಾಗೂ ಸಚಿವರ ಹೆಸರಿಗೆ ಮಸಿ ಬಳೆಯುವ ಕೆಲಸ ಮಾಡುತ್ತಿರುವ ಮೇಗೂರು ಮಂಜುನಾಥ್ ಅವರಿಗೆ ಧಿಕ್ಕಾರ ಎಂದು ಕಿಡಿಕಾರಿದರು.

**ಪುರಸಭಾ ಅಧ್ಯಕ್ಷ ಮಂಜುನಾಥ್ ಪ್ರತಿಕ್ರಿಯೆ**

**ಇದಕ್ಕೆ ಪ್ರತಿಕ್ರಿಯಿಸಿದ ಪುರಸಭಾ ಅಧ್ಯಕ್ಷ ಮಂಜುನಾಥ್ ಮೇಗೂರ್ ದೂರವಾಣಿ ಮೂಲಕ ಪತ್ರಿಕೆಗೆ ಮಾತನಾಡಿ,**

**ನಾನು ಯಾವುದೇ ರೀತಿಯಲ್ಲೂ ಪುರಸಭಾ ಮುಖ್ಯಾಧಿಕಾರಿ ಸಾಬಣ್ಣ ಕಟ್ಟಿಕಾರ್ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿಲ್ಲ. ಇದು ಸತ್ಯಕ್ಕೆ ದೂರವಾದ ವಿಷಯ. ನನ್ನನ್ನು ವೈಯಕ್ತಿಕವಾಗಿ ತೇಜೋವಧೆ ಮಾಡುತ್ತಿದ್ದಾರೆ. ಇದು ಆಧಾರ ರಹಿತ ಆರೋಪ ಎಂದು ಸ್ಪಷ್ಟಪಡಿಸಿದರು.**


## ಅಕ್ಕನಾಗಮ್ಮ ಕೆರೆಯಲ್ಲಿ ರೋಜಗಾರ ದಿವಸ ಆಚರಣೆ:

ಉದಯವಾಹಿನಿ ಬಸವನಬಾಗೇವಾಡಿ: ತಾಲೂಕಿನ ಇಂಗಳೇಶ್ವರ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಮನರೇಗಾ ಅಕ್ಕನಾಗಮ್ಮ ಅಮೃತ ಸರೋವರ ಕಾಮಗಾರಿಗೆ ತಾ ಪಂ ಇಓ ವೆಂಕಟೇಶ ವಂದಾಲ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದರು.

ಕಾಮಗಾರಿ ಸ್ಥಳದಲ್ಲಿ ಕೆಲಸದಲ್ಲಿ ತೊಡಗಿ, ಕಾಮಗಾರಿಯ ಪರಿಶೀಲನೆ ಮಾಡಿದರು. ಯೋಜನೆಯ ಬಗ್ಗೆ ತಿಳಿಸುವುದರ ಮೂಲಕ ಕೂಲಿಕಾರರೊಂದಿಗೆ ಸಂವಾದ ನಡೆಸಿ, ಯೋಜನೆಯ ಮಹತ್ವ, ಹೆಚ್ಚಿನ ಸಂಖ್ಯೆಯಲ್ಲಿ ಕೂಲಿಕಾರರು ಕೆಲಸಕ್ಕೆ ಆಗಮಿಸುವಂತೆ ಪ್ರೇರೇಪಿಸಿದರು ಎಂದು ಇಓ ತಿಳಿಸಿದರು.

**ಕಾಮಗಾರಿಯ ಪರಿಶೀಲನೆ**

ಕೆಲಸದ ಬೇಡಿಕೆ ಪಡೆದು ಉದ್ಯೋಗ ಒದಗಿಸುವ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಬೇಕು ಹಾಗೂ ಯೋಜನೆಯ ಉದ್ದೇಶ, ಕೂಲಿಕಾರರ ಹಕ್ಕುಗಳು, ಸರ್ಕಾರದಿಂದ ದೊರೆಯುವ ಸೌಲಭ್ಯಗಳು ಹಾಗೂ ಕೆಲಸದ ಸ್ಥಳದಲ್ಲಿ ಪಾಲಿಸಬೇಕಾದ ನಿಯಮಗಳ ಕುರಿತು ಮಾಹಿತಿ ನೀಡಿದರು.



ಉದಯವಾಹಿನಿ ಚಿತ್ರ

ಕೂಲಿಕಾರರ ಹಾಜರಾತಿ ದಾಖಲಾತಿಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಅಧಿಕಾರಿಗಳಿಗೆ ಮತ್ತು ಕಾಯಕ ಬಂಧುಗಳಿಗೆ ಸೂಚಿಸಿದರು.

ಕೂಲಿಕಾರರಿಗೆ ಅಗತ್ಯವಾದ ಕುಡಿಯುವ ನೀರು, ನೆರಳು ಹಾಗೂ ಮೂಲಭೂತ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವಂತೆ ಹಾಗೂ ಕಾಮಗಾರಿ ಗುಣಮಟ್ಟ ಕಾಪಾಡುವ ಜೊತೆಗೆ ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು.

ತಮಗೆ ನೀಡಿರುವ ಕೆಲಸವನ್ನು ಜವಾಬ್ದಾರಿಯಿಂದ ನಿರ್ವಹಿಸಿ, ಬೆಳಗ್ಗೆ ಬೇಗ ಕೆಲಸಕ್ಕೆ ಹಾಜರಾಗಿ ಬಿಸಿಲಿನ ತಾಪ ಹೆಚ್ಚುವುದರೊಳಗೆ ಕೆಲಸ ಮುಗಿಸಿ ಎಂದು ಸಲಹೆ ನೀಡಿದರು.

## ಆನೆ ಶಿಬಿರ ದುರಂತ; ಸಕ್ರೆಬೈಲು ಆನೆ ಬಿಡಾರಕ್ಕೆ ಪ್ರವಾಸಿಗರ ನಿಷೇಧ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಶಿವಮೊಗ್ಗ:**

ಪ್ರವಾಸಿ ತಾಣ ಕೊಡಗು ಜಿಲ್ಲೆಯ ದುಬಾರೆ ಆನೆ ಶಿಬಿರದಲ್ಲಿ ಆನೆಯ ದಾಳಿಗೆ ಸಿಲುಕಿ ತಮಿಳುನಾಡಿನ ಚೆನ್ನೈ ಮೂಲದ ಮಹಿಳೆ ಜಿನ್ನು ಮೃತಪಟ್ಟ ಬಳಿಕ ಸರ್ಕಾರ ಕಠಿಣ ಕ್ರಮ ಕೈಗೊಂಡಿದ್ದು, ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಶಿವಮೊಗ್ಗದ ಸಕ್ರೆಬೈಲು ಆನೆ ಬಿಡಾರಕ್ಕೆ ಇಂದಿನಿಂದ(ಮೇ 22) ತಾತ್ಕಾಲಿಕವಾಗಿ ಪ್ರವೇಶ ನಿಷೇಧಿಸಲಾಗಿದೆ. ಈ ಬಗ್ಗೆ ಅರಣ್ಯ ಇಲಾಖೆ ಪ್ರಕಟಣೆ ಹೊರಡಿಸಿದೆ. ದುಬಾರೆ ಆನೆ ಬಿಡಾರದಲ್ಲಿ ಕಾವೇರಿ ನದಿಯಲ್ಲಿ ಸ್ನಾನ ಮಾಡಿಸುವ ವೇಳೆ ಎರಡು ಸಾಕಾನೆಗಳ ನಡುವೆ ನಡೆದ ಕಾದಾಟದಲ್ಲಿ ಜಿನ್ನು ಆನೆಯಡಿ ಸಿಲುಕಿ ಮೃತಪಟ್ಟ ಬಳಿಕ ಈ ಕ್ರಮ ಕೈಗೊಳ್ಳಲಾಗಿದೆ.

ಮಹಿಳೆ ಮೃತಪಟ್ಟ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ ಅರಣ್ಯ ಇಲಾಖೆಯು, ಆನೆ ಬಿಡಾರಗಳಲ್ಲಿ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರುವಂತೆ ಅಧಿಕಾರಿಗಳಿಗೆ ಸೂಚಿಸಿದೆ. ಶಿವಮೊಗ್ಗ ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣವಾಗಿರುವ ಸಕ್ರೆಬೈಲು ಆನೆ ಬಿಡಾರಕ್ಕೆ ದುಬಾರೆಯಂತೆ ರಾಜ್ಯ ಹಾಗೂ ಹೊರ ರಾಜ್ಯದ ವಿವಿಧೆಡೆಯಿಂದ ಪ್ರತಿದಿನ ನೂರಾರು ಮಂದಿ ಆಗಮಿಸುತ್ತಾರೆ. ಬಂದತಂಹ ಪ್ರವಾಸಿಗರು ಆನೆಗಳಿಗೆ ಸ್ನಾನ ಮಾಡಿಸುತ್ತಾರೆ, ಸವಾರಿ ಮಾಡುತ್ತಾರೆ. ಈಗಾಗಲೇ ಆನೆಗಳಿಗೆ ಸ್ನಾನ ಮಾಡಿಸುವ ವ್ಯವಸ್ಥೆ ಬಂದ್ ಮಾಡಲಾಗಿದೆ.

## ಹಿರೇಮಠದಲ್ಲಿ ಕೋಟಿ ಜಪಾನುಷ್ಠಾನ

• **ಉದಯವಾಹಿನಿ, ಕೊಲ್ಹಾರ:**


ಉದಯವಾಹಿನಿ ಚಿತ್ರ

ಪಟ್ಟಣದ ಯುಕೆಪಿ ವಸ್ತಿ ತೋಟದಲ್ಲಿ ಕೈಲಾಸನಾಥ ಶೀಲವಂತ ಹಿರೇಮಠದಲ್ಲಿ ಅಧಿಕ ಮಾಸದ ಪ್ರಯುಕ್ತ ನಡೆದ ಕೋಟಿ ಜಪಾನು ಅನುಷ್ಠಾನವನ್ನು ನಾಲ್ಕು ದಿನಗಳಿಂದ ನಸುಕಿನ ಜಾವ 2 ಗಂಟೆ 21 ನಿಮಿಷದಿಂದ ಪ್ರಾರಂಭವಾದ ಇಷ್ಟಲಿಂಗ ಪೂಜಾ ಬೆಳಗಿನ 8 ಗಂಟೆಗೆ ಶ್ರೀ ಘಣ ಮಹಿಮ ಪೂರ್ಣಜ್ಞ ಧರ್ಮರತ್ನ ಭಾರತ ಭೂಷಣ ಡಾ.ಕೈಲಾಸನಾಥ ಮಹಾಸ್ವಾಮಿಗಳವರು ಮಂಗಳಾರತಿ ನೆರವೇರಿಸಿ ಆಸಿರ್ವಚನ ದಯಪಾಲಿಸಿದರು, ಮನುಷ್ಯ ಜನ್ಮ ಪರಮಾತ್ಮ ಕೊಟ್ಟ ದೇಣಿಗೆ ಇರುವಷ್ಟು ದಿನ ಸಾತ್ವಿಕ ಜೀವನ ನಡೆಸಿ ಸಾರ್ಥಕತೆಯಿಂದ ಬಾಳಬೇಕು.

ಬೆಕ್ಕು ದಾರಿಗೆ ಅಡ್ಡ ಬಂದರೆ ಅಪಶಕುನವಾದರೆ ನಡೆಯುವ ದಾರಿಗೆ ಅಡ್ಡಲಾಗಿ ನಿಂತ ದುರಹಂಕಾರ ದುರಭಿಮಾನ ತುಂಬಿದ ಮನುಷ್ಯ ಆ ಬೆಕ್ಕಿನಗಿಂತಲೂ ಕನಿಷ್ಟನಾಗುತ್ತಾನೆ.

ದುರಾಭಿಮಾನ ದುರಂಹಕಾರ ಮನುಷ್ಯನ ಅವನತಿಗೆ ಕಾರಣ ಸರ್ವರು ಸಾತ್ವಿಕ ಸಹಕಾರ ಜೀವನ ನಡೆಸಬೇಕೆಂದು ಸಾರ್ವಜನಿಕರಿಗೆ ಕಿವಿ ಮಾತು ತಿಳಿಸಿದರು.

## ಕೈ –ಕಮಲ ಕಾರ್ಯಕರ್ತರ ಮಧ್ಯೆ ಮಾರಾಮಾರಿ, ಸಿ.ಟಿ.ರವಿ ಮೇಲೆ ಹಲ್ಲೆಗೆ ಯತ್ನ!

• **ಉದಯವಾಹಿನಿ, ಚಿಕ್ಕಮಗಳೂರು:**

ಕಾಫಿ ನಾಡು ಚಿಕ್ಕಮಗಳೂರಿನಲ್ಲಿ ಅಭಿವೃದ್ಧಿ ಕೆಲಸಗಳ ಕ್ರೆಡಿಟ್ ಪಡೆಯುವ ವಿಚಾರವಾಗಿ ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಭಾರಿ ಹೈಡ್ರಾಮಾ ನಡೆದಿದೆ. ಕೈ-ಕಮಲ ಪಾಳಯದ ನಡುವಿನ 'ಕ್ರೆಡಿಟ್ ವಾರ್' ಕೈಕೈ ಮಿಲಾಯಿಸುವ ಹಂತಕ್ಕೆ ತಲುಪಿದ್ದು, ನೂರಾರು ಪೊಲೀಸರ ಸಮ್ಮುಖದಲ್ಲೇ ಉಭಯ ಪಕ್ಷಗಳ ಕಾರ್ಯಕರ್ತರು ಸರಿಸಮನಾಗಿ ಹೊಡೆದಾಡಿಕೊಂಡ ಘಟನೆ ನಡೆದಿದೆ.

ಈ ವೇಳೆ ಸ್ಥಳಕ್ಕೆ ಆಗಮಿಸಿದ ಕಾಂಗ್ರೆಸ್ ಕಾರ್ಯಕರ್ತರು ಸಿ.ಟಿ.ರವಿ ವಿರುದ್ಧ ಧಿಕ್ಕಾರ ಕೂಗಿ, ಕಪ್ಪು ಬಾವುಟ ಪ್ರದರ್ಶಿಸಲು ಯತ್ನಿಸಿದರು. ಇದರಿಂದ ಆಕ್ರೋಶಗೊಂಡ ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ವಿರುದ್ಧ ತಿರುಗಿ ಬಿದ್ದರು. ಗಲಾಟೆ ತಾರಕಕ್ಕೇರಿದಾಗ ಕಾಂಗ್ರೆಸ್ ಕಾರ್ಯಕರ್ತರು ಸಿ.ಟಿ.ರವಿ ಅವರ ಮೇಲೆ ಹಲ್ಲೆ ನಡೆಸಲು ತೀವ್ರ ಯತ್ನ ನಡೆಸಿದರು. ಆದರೆ ಕಮಲ ಪಾಳಯದ ಕಾರ್ಯಕರ್ತರು ಸಿ.ಟಿ.ರವಿ ಸುತ್ತ ರಕ್ಷಣಾ ಕೋಟೆಯಂತೆ ನಿಂತು, ಅವರನ್ನು ಮುಟ್ಟದಂತೆ ತಡೆದರು. ಈ ನೂಕಾಟ-ತಳ್ಳಾಟದ ಮಧ್ಯೆಯೂ ಸಿ.ಟಿ.ರವಿ ಅವರು ಸ್ಥಳದಿಂದ ಕದಲದೇ, ರಸ್ತೆ ಮಧ್ಯೆಯೇ ಕುಳಿತು ಪ್ರತಿಭಟನೆ ನಡೆಸಿದರು. ''ಬಾರೋ? ಬಾ? ಹೊಡೀ? ಎಂದು ಎದುರಾಳಿಗಳಿಗೆ ಸವಾಲು ಹಾಕಿದರು.

ಗೂಂಡಾ ರಾಜಕಾರಣಕ್ಕೆ ಬಗ್ಗಲ್ಲ ''ಮೆಡಿಕಲ್ ಕಾಲೇಜ್, ನೂತನ ಡಿಸಿ ಆಫೀಸ್, ನೀರಾವರಿ ಯೋಜನೆಗೆ 5,800 ಕೋಟಿ ರೂ. ಹಣ ತಂದಿದ್ದು ನಾನು. ಈ ರಸ್ತೆಗೂ ನಾನೇ ಹಣ ತಂದಿದ್ದೇನೆ. ಸಮಯ ಬಂದಾಗ ದಾಖಲೆ ಬಿಡುಗಡೆ ಮಾಡುತ್ತೇನೆ. ಇಂತಹ ಬೆದರಿಕೆಗಳಿಗೆ ನಾನು ಹೆದರುವುದಿಲ್ಲ'' ಎಂದು ಸಿ.ಟಿ.ರವಿ ಎಚ್ಚರಿಕೆ ನೀಡಿದ್ದಾರೆ.

ನೂರಾರು ಪೊಲೀಸರು ಇದ್ದಾಗ್ಯೂ, ಕಾರ್ಯಕರ್ತರು ಪೊಲೀಸರನ್ನೇ ತಳ್ಳಿ ಮುನ್ನುಗ್ಗಿದರು. ಸುರಕ್ಷತೆಯ ದೃಷ್ಟಿಯಿಂದ ಸ್ಥಳದಿಂದ ತೆರಳುವಂತೆ ಪೊಲೀಸರು ಮನವಿ ಮಾಡಿದರೂ ಸಿ.ಟಿ.ರವಿ ಅವರು ನಿರಾಕರಿಸಿ, ಕೊನೆಯವರೆಗೂ ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದರು. ಸದಾ ತಂಪಾಗಿರುತ್ತಿದ್ದ ಕಾಫಿ ನಾಡು ಕ್ಷಣಾರ್ಧದಲ್ಲಿ ಬೆಂಕಿಯ ಉಂಡೆಯಂತಾಗಿತ್ತು. ಸದ್ಯಕ್ಕೆ ಪರಿಸ್ಥಿತಿ ಹತೋಟಿಗೆ ಬಂದಿದ್ದರೂ, ಮುಂದಿನ ದಿನಗಳಲ್ಲಿ ಚುನಾವಣೆ ಹತ್ತಿರ ಬರುತ್ತಿದ್ದಂತೆ ಈ ರೀತಿಯ 'ಕ್ರೆಡಿಟ್ ರಾಜಕಾರಣ' ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ದಟ್ಟವಾಗಿದೆ. ಆದರೆ, ನಾಯಕರು ಮತ್ತು ಕಾರ್ಯಕರ್ತರ ಈ ವರ್ತನೆಯನ್ನು ಸಾರ್ವಜನಿಕರು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಮುಂಬರುವ ದಿನಗಳಲ್ಲಿ ಮತದಾರರೇ ಇದಕ್ಕೆ ಅಂತಿಮ ತೀರ್ಪು ನೀಡಲಿದ್ದಾರೆ.

# ಎಸ್‌ಸಿ ಎಸ್‌ಟಿ ಮೀಸಲಾತಿ ಕಡಿತಗೊಳಿಸಿ ಸಾಮಾಜಿಕ ಅನ್ಯಾಯ ಮಾಡಿದ್ದು ಕಾಂಗ್ರೆಸ್

### ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾದ ಹಿನ್ನಲೆಯಲ್ಲಿ ಮರು ಪರೀಕ್ಷೆಗೆ ಯೋಜಿಸಿ, ತಪ್ಪಿತಸ್ಥರನ್ನು ಬಂಧಿಸಲಾಗಿದೆ. ಮೋದಿಯವರಷ್ಟು ಯಾವ ಪ್ರಧಾನಿಯೂ ಸಾರ್ವಜನಿಕರೊಡನೆ ಸಂಪರ್ಕಿತರಾಗಿರಲಿಲ್ಲ.

• **ಉದಯವಾಹಿನಿ, ಚಿಕ್ಕಮಂಗಳೂರು**

ರೈತರಿಗೆ 3 ಫೇಸ್ ವಿದ್ಯುತ್ 7 ಗಂಟೆ ಕೊಡುವುದಾಗಿ ರಾಜ್ಯ ಸರ್ಕಾರ ಭರವಸೆ ನೀಡಿತ್ತು. ಈಗ 3-4 ಗಂಟೆಯೂ ವಿದ್ಯುತ್ ಲಭಿಸುತ್ತಿಲ್ಲ. 14,000ಕ್ಕೂ ಹೆಚ್ಚು ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಇರುವುದಾಗಿ ಐಡಿಪಿಆರ್ ಇಲಾಖೆ ಹೇಳಿದೆ. ಇದು ಯಾರ ಜವಾಬ್ದಾರಿ? ಆಳುವ ಸರ್ಕಾರದ ಜವಾಬ್ದಾರಿಯಲ್ಲವೇ? ಸರ್ಕಾರಕ್ಕೆ ಕುಡಿಯುವ ನೀರಿಗಿಂತಲೂ ಹಿಜಾಬ್ ಹೆಚ್ಚು ಮುಖ್ಯವಾಗಿರುವಂತೆ ಕಾಣುತ್ತಿದೆ. ಶಾಲೆಗಳಲ್ಲಿ ಸಮವಸ್ತ್ರ ಇರಬೇಕು ಎಂದು ನಾವು ಹೇಳಿದರೆ, ಹಿಜಾಬ್ ಇರಬೇಕು ಎಂದು ಕಾಂಗ್ರೆಸ್ ಹೇಳುತ್ತದೆ. ಹಿಜಾಬ್ ಸಮವಸ್ತ್ರದ ಭಾಗವಲ್ಲದಿರುವಾಗ ಅದು ಯಾಕಿರಬೇಕು? ಯಾಕೆ ಕಾಂಗ್ರೆಸ್ ಹೀಗೆಂದರೆ, ಕಾಂಗ್ರೆಸ್ ಪಕ್ಷಕ್ಕೆ ರೈತರ ಆತ್ಮಹತ್ಯೆ, ಎಸ್‌ಸಿಪಿ ಟಿಎಸ್‌ಪಿ ಅನುದಾನದ ದುರುಪಯೋಗ, ಇದಾವುದೂ ಆದ್ಯತೆಯಲ್ಲ ಎಂದು ವಿಧಾನ ಪರಿಷತ್ ಸದಸ್ಯ ಡಾ. ರವಿ ಸಿ. ಟಿ ಹೇಳಿದರು. ಅವರು ಮೈಸೂರು ನಗರದಲ್ಲಿ ಮಾಜಿ ಸಚಿವ ಬಿ ಶ್ರೀರಾಮುಲು ಅವರೊಡನೆ ಆಯೋಜಿಸಲಾದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾದ ಹಿನ್ನಲೆಯಲ್ಲಿ ಮರು ಪರೀಕ್ಷೆಗೆ ಯೋಜಿಸಿ, ತಪ್ಪಿತಸ್ಥರನ್ನು ಬಂಧಿಸಲಾಗಿದೆ. ಈ ಕಾರಣಕ್ಕೆ ನೀಟ್ ಪರೀಕ್ಷೆಯನ್ನೇ ರದ್ದುಪಡಿಸಬೇಕು ಎನ್ನುವುದು ನೆಗಡಿಯಾದರೆ ಮೂಗು ಕುಯ್ಯಬೇಕು ಎಂದಂತಾದೀತು. ಇನ್ನು ಕರ್ನಾಟಕದಲ್ಲಿ ಕೆಪಿಎಸ್‌ಸಿ ಹೆಸರಾಗಿರುವುದೇ ಭ್ರಷ್ಟಾಚಾರಕ್ಕೆ. ಒಂದೇ ಕೊಠಡಿಯಲ್ಲಿ ಕುಳಿತ 17 ಜನ ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದದ್ದು ಆಕಸ್ಮಿಕವೇ? ರಾಜ್ಯದ ಜನರಿಗೂ ಇದರ ಕುರಿತು ಸಾಕಷ್ಟು ಅನುಮಾನಗಳಿವೆ. ರಾಜ್ಯ ಸರ್ಕಾರ ಮೊದಲು ಕೆಪಿಎಸ್‌ಸಿ ದೋಷ ಸರಿಪಡಿಸುವ ಕುರಿತು ಆಲೋಚಿಸಲಿ. ನೀಟ್ ಸೋರಿಕೆಯ ಕುರಿತು ಈಗಾಗಲೇ ಸಿಬಿಐ ತನಿಖೆ ನಡೆಸುತ್ತಿದೆ ಎಂದರು.


ಎಸ್‌ಸಿ ಎಸ್‌ಟಿ ಮೀಸಲಾತಿ ಸಂವಿಧಾನಬದ್ಧವಾಗಿದ್ದು, ಅದನ್ನು ರಾಜ್ಯ ಸರ್ಕಾರ ಹೇಗೆ ಕಡಿತಗೊಳಿಸಲು ಸಾಧ್ಯ? ಅದು ಸಂವಿಧಾನ ಬಾಹಿರ ನಡೆ. ಧರ್ಮದ ಆಧಾರದ ಮೀಸಲಾತಿಯನ್ನು ಸಂವಿಧಾನ ರಚನಾ ಸಮಿತಿ ಒಪ್ಪಿಕೊಂಡಿರಲಿಲ್ಲ. ಡಾ. ಬಿ ಆರ್ ಅಂಬೇಡ್ಕರ್ ಅವರ ವಿಚಾರದ ಕುರಿತು ಗೌರವವಿದ್ದರೆ, ಅಂಬೇಡ್ಕರ್ ತಿರಸ್ಕರಿಸಿದ್ದ ಧರ್ಮಾಧಾರಿತ ಮೀಸಲಾತಿಯನ್ನು ಹೇಗೆ ಜಾರಿಗೆ ತರಲಾಯಿತು? ಎಂದು ರವಿ ಪ್ರಶ್ನಿಸಿದರು.

**ಎಸ್‌ಸಿ ಎಸ್‌ಟಿ ಮೀಸಲಾತಿ**



ಸಾಮಾಜಿಕ ನ್ಯಾಯದ ಕುರಿತು ಅತಿಹೆಚ್ಚು ಮಾತನಾಡಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯನವರು. ಆದರೆ, ಎಸ್‌ಸಿ ಎಸ್‌ಟಿ ಮೀಸಲಾತಿ ಕಡಿತಗೊಳಿಸಿ, ಅನ್ಯಾಯ ಮಾಡಿರುವುದೂ ಸಿದ್ದರಾಮಯ್ಯನವರೇ. ಏಕೆಂದರೆ, ಸಂವಿಧಾನಬದ್ಧವಾಗಿ ಮೀಸಲಾತಿ ನೀಡಿರುವುದು ಅಂಬೇಡ್ಕರ್ ಅವರು. ಜನಸಂಖ್ಯೆಯ ಆಧಾರದಲ್ಲಿ ಮೀಸಲಾತಿ ನೀಡಬೇಕು. 15% ಇದ್ದ ಎಸ್‌ಸಿ ಮೀಸಲಾತಿ ಮತ್ತು 3% ಇದ್ದ ಎಸ್‌ಟಿ ಮೀಸಲಾತಿಗಳನ್ನು 17% ಮತ್ತು 7%ಗೆ ಜನಸಂಖ್ಯೆಯ ಆಧಾರದಲ್ಲಿ ನೀಡಲಾಗಿದೆ. ಎಸ್‌ಸಿ ಎಸ್‌ಟಿ ಮೀಸಲಾತಿ ಕಡ್ಡಾಯವಾಗಿ ನೀಡಬೇಕಾದ್ದು. ಇದನ್ನು ಕಡಿತಗೊಳಿಸುವುದು ಸಾಮಾಜಿಕ ಅನ್ಯಾಯ. ಬಿಜೆಪಿ ಹೆಚ್ಚಳ ಮಾಡಿದಂತೆ ಕಾಂಗ್ರೆಸ್ ಸಹ ಹೆಚಿಸಲಿ. 50% ಮೀಸಲಾತಿ ಮಿತಿಗಾಗಿ ಕಾಂಗ್ರೆಸ್ ಸರ್ಕಾರ ಎಸ್‌ಸಿ ಎಸ್‌ಟಿ ಮೀಸಲಾತಿಯನ್ನು ಏಕೆ ಕಡಿತಗೊಳಿಸಬೇಕ ಮುಸ್ಲಿಮರನ್ನು ಧರ್ಮ ಎಂದು ಪರಿಗಣಿಸುವುದಾದರೆ, ಅವರಿಗೆ ಧಾರ್ಮಿಕ ಮೀಸಲಾತಿಯನ್ನು ಹೇಗೆ ನೀಡಲು ಸಾಧ್ಯ? ಯಾಕೆಂದರೆ, ಧಾರ್ಮಿಕ ಮೀಸಲಾತಿಯನ್ನು ಸಂವಿಧಾನ ಶಿಲ್ಪಿ ಅಂಬೇಡ್ಕರ್ ಸ್ಪಷ್ಟವಾಗಿ ನಿರಾಕರಿಸಿದ್ದಾರೆ ಎಂದು ರವಿ ಹೇಳಿದರು.

ಹಿಂದೆ ವಿದೇಶೀ ವಿನಿಮಯ ಬರಿದಾಗಿ, ಭಾರತದ ಚಿನ್ನ ಅಡವಿಟ್ಟ ಇತಿಹಾಸವನ್ನು ನಾವು ಮರೆತಿಲ್ಲ. ಪ್ರಧಾನಿಯವರು



**ಭಾರತದ ಚಿನ್ನ ಅಡವಿಟ್ಟ ಇತಿಹಾಸವನ್ನು ನಾವು ಮರೆತಿಲ್ಲ**

**ಇರಾನ್ ಯುದ್ಧ ಭಾರತ ಬಯಸಿದ್ದಲ್ಲ. ಆದರೆ, ಯುದ್ಧದ ಪರಿಣಾಮ ಭಾರತದ ಮೇಲೂ ಆಗಿದೆ. ಕೆಲವೊಮ್ಮೆ ವೈದ್ಯರು ಪಥ್ಯ ಅನುಸರಿಸಿ, ಆರೋಗ್ಯ ಕಾಪಾಡಿಕೊಳ್ಳಿ ಎನ್ನುತ್ತಾರೆ. ಆದ್ದರಿಂದಲೇ ಪ್ರಧಾನಿ ನರೇಂದ್ರ ಮೋದಿಯವರು ನಮ್ಮ ವಿದೇಶೀ ವಿನಿಮಯ ಹೊರ ಹೋಗದಂತೆ ತಡೆಯಲು ಚಿನ್ನ ಕಡಿಮೆ ಖರೀದಿಸಿ, ಇಂಧನ ಉಳಿತಾಯ ಮಾಡಿ ಎಂದು ಕರೆ ನೀಡಿದ್ದಾರೆ.**

ದೇಶದ ಅಭಿವೃದ್ಧಿಗೆ ಬೇಕಾದ ಒಪ್ಪಂದಗಳನ್ನು ಕೈಗೊಳ್ಳಲು ವಿದೇಶಕ್ಕೆ ತೆರಳಿದ್ದಾರೆಯೇ ಹೊರತು ಮೋಜು ಮಸ್ತಿ ಮಾಡಲಲ್ಲ. ಮೂರು ದಿನ ಪ್ರಚಾರ ಮಾಡಿ, ಮೂವತ್ತು ದಿನ ವಿದೇಶಗಳಿಗೆ ತೆರಳುವ ಕಾಂಗ್ರೆಸ್ ನಾಯಕರನ್ನು ಈ ಕುರಿತು ಪ್ರಶ್ನೆ ಮಾಡಬೇಕು ಎಂದು ರವಿ ಟೀಕಿಸಿದರು. ಪ್ರಧಾನಿ ನರೇಂದ್ರ ಮೋದಿಯವರಷ್ಟು ಯಾವ ಪ್ರಧಾನಿಯೂ ಸಾರ್ವಜನಿಕರೊಡನೆ ಸಂಪರ್ಕಿತರಾಗಿರಲಿಲ್ಲ.

ಮನ್ ಕಿ ಬಾತ್ ಮೂಲಕ, ನಮೋ ಆಪ್ ಮೂಲಕ, ಸಾಮಾಜಿಕ ಮಾಧ್ಯಮಗಳ ಮೂಲಕ ನೇರವಾಗಿ ಜನರೊಡನೆ ಸಮಾಲೋಚಿಸುತ್ತಾರೆ. ಮನ್ ಕಿ ಬಾತ್ ಮೂಲಕ ಜನರಿಗೆ ಪ್ರೇರಣೆ ನೀಡುವ ಕೆಲಸವನ್ನು ಮೋದಿ ಮಾಡುತ್ತಿದ್ದಾರೆ. ಅವರು ಜನರೊಡನೆ ಇಷ್ಟು ಸಂಪರ್ಕದಲ್ಲಿರುವುದಕ್ಕೇ ಮೂರು ಬಾರಿಗೆ ಮೋದಿಯವರು ಪ್ರಧಾನಿಯಾಗಿದ್ದಾರೆ ಎಂದು ರವಿ ಹೇಳಿದರು.